ಪುಸ್ತಕ ಪ್ರಪಂಚ

ಸಂಪುಟ ೫೧ ಜನವರಿ ೨೦೦೧ ಸಂಚಿಕೆ ೩



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪಾದಕ ಮಂಡಳಿ :

ಪ್ರಧಾನ ಸಂಪಾದಕರು
ಡಾ. ದೇ. ಜವರೇಗೌಡ

ಗೌರವ ಪ್ರಧಾನ ಸಂಪಾದಕರು
ಹೆಚ್. ಭಾಸ್ಕರ್
ವಿಭಾಗಾಧಿಕಾರಿಗಳು
ಮತ್ತು
ಅಧ್ಯಕ್ಷರು, ಕ.ರಾ.ವ.ಶಿ. ಸಮಿತಿ

ವೈ. ಎನ್. ಶಂಕರೇಗೌಡ, ಖಜಾಂಚಿ

ಶ್ರೀರಂಗರಾಜು, ಪ್ರಧಾನಕಾರ್ಯದರ್ಶಿ

ಸದಸ್ಯರು :

ಜಿ. ಟಿ. ನಾರಾಯಣರಾವ್

ರಾ. ನಂ. ಶ್ರೀನಿವಾಸಮೂರ್ತಿ

ಡಾ. ಪ್ರಧಾನ್ ಗುರುದತ್ತ

ಪರಮಶಿವ ನಡುಬೆಟ್ಟ

ಡಾ. ಹಾ. ತಿ. ಕೃಷ್ಣೇಗೌಡ

ಪ್ರೊ. ಸಿ. ನಾಗಣ್ಣ

ಡಾ. ಪದ್ಮಶೇಖರ್

ಆರ್. ಬೋರಯ್ಯ, ಸಂಪಾದಕ

ಪರಿವಿಡಿ

ಮುಖಚಿತ್ರ : ಮಾಜಿ ಮುಖ್ಯಮಂತ್ರಿ ದಿ|| ಜೆ. ಎಚ್. ಪಟೇಲ್

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಏಸುಸ್ವಾಮಿಗೆ ನಮಸ್ಕಾರ

ನಾನು ಒಂದು ಮಾಡುವುದಕ್ಕೋಸ್ಕರ ಬಂದಿದ್ದೇನೆಯೇ ಹೊರತು ನಾಶಮಾಡಲಲ್ಲ ಎಂಬ ಕ್ರಿಸ್ತವಾಣಿಯಲ್ಲಿ ಜಗದ್ರಕ್ಷಕನ ದಿವ್ಯ ಧ್ವನಿಯಿದೆ. 'ಜಗತ್ತಿನ ಎಲ್ಲ ಕಡೆಗಳಿಗೂ ಹೋಗಿ; ಇಡೀ ಸೃಷ್ಟಿಗೆ ನನ್ನ ಸಂದೇಶವನ್ನು ಉಪದೇಶಿಸಿ. ವಿಶ್ವಾಸವುಳ್ಳವರು ಮತ್ತು ದೀಕ್ಷಾಸ್ನಾತರು ರಕ್ಷೆ ಪಡೆಯುತ್ತಾರೆ; ಅವಿಶ್ವಾಸಿಗಳು ನಾಶವಾಗುತ್ತಾರೆ, ಎಂದು ಯೇಸುಸ್ವಾಮಿ ಸ್ವರ್ಗಕ್ಕೆ ಹೋಗುವ ಮುನ್ನ ಥಾಮಸ್ ಮೊದಲಾದ ತನ್ನ ಶಿಷ್ಯರಿಗೆ ತಿಳಿಸುತ್ತಾನೆ. ಈ ಸಂದೇಶವನ್ನು ನವಯುಗಾವತಾರಿ ಸತ್ಯಸಾಯಿಬಾಬರ ಸಂದೇಶದೊಡನೆ ಹೋಲಿಸಿ ನೋಡಿದಾಗ ಭೂಮ್ಯಾಕಾಶಗಳಷ್ಟು ಅಂತರ ಎದ್ದು ಕಾಣುತ್ತದೆ: ನಾನು ಯಾವುದೇ ಮತವನ್ನು ಅಸ್ಥಿರಗೊಳಿಸಲಾಗಲಿ, ನಿರ್ಮೂಲ ಮಾಡಲಾಗಲಿ ಬಂದಿಲ್ಲ; ಪ್ರತಿಯೊಬ್ಬನನ್ನು ಅವನವನ ಮತದಲ್ಲಿ ದೃಢೀಕರಿಸಲು ಬಂದಿದ್ದೇನೆ. ಕ್ರಿಶ್ಚಿಯನ್ ಉತ್ತಮ ಕ್ರಿಶ್ಚಿಯನ್, ಮುಸ್ಲಿಮ್ ಶ್ರೇಷ್ಠಮುಸ್ಲಿಮ್, ಹಿಂದು ಅತ್ಯುತ್ತಮ ಹಿಂದು, ಬೌದ್ಧ ಪರಿಪೂರ್ಣ ಬೌದ್ಧನಾಗಬೇಕೆಂಬುದು ನನ್ನ ಅಪೇಕ್ಷೆ. ಸರಳವಾದ ಈ ಸಂದೇಶಕ್ಕೆ ವ್ಯಾಖ್ಯಾನ ಅನಗತ್ಯ.

ಯೇಸುವಿನ ಸಂದೇಶ ದೇಶ ಕಾಲಾತೀತವಾದದ್ದು; ಮನುಕುಲೋದ್ಧಾರ ಪರವಾದದ್ದು. ಈ ಜಗತ್ತು ಮತ್ತು ಮಾನವ ಹೃದಯದಲ್ಲಿ ಭಗವಂತನ ಸಾಮ್ರಾಜ್ಯವಿದೆ. ಭಗವಂತನೇ ಜಗತ್ಪಿತ. ದೇವತ್ವದ ಅವಸ್ಥಾತ್ರಯ. ಮಾನವ ಭ್ರಾತೃತ್ವ, ಅವಿರತ ಪ್ರಾರ್ಥನೆಯ ಮಹತ್ವ, ಉಪವಾಸದ ಘನತೆ. ದೈವಶ್ರದ್ಧೆ, ವಿನಯ ಸೌಜನ್ಯ,ಕ್ಷಮಾದಾನ ಎಲ್ಲ ದುಃಖಗಳ ಮೂಲ ಹಣವಂತಿಕೆ, ದೈವೀಕೃಪೆ, ಆತ್ಮನಿವೇದನೆ, ಇವು ಕ್ರಿಶ್ಚಿಯನ್ ಮತದ ಸಾರಸತ್ವ; ಅಧ್ಯಾತ್ಮ ಸಾಧನೆಯ ಸೋಪಾನಗಳು. ಇವನ್ನು, ಬದುಕುವ ಮೂಲಕ ಯೇಸುಸ್ವಾಮಿ ಜಗತ್ತಿನ ಗಮನಕ್ಕೆ ತರುತ್ತಾನೆ. ಇವುಗಳ ಅನುಸರಣೆಯಿಂದ ಜಗತ್ತಿನಲ್ಲಿ ಶಾಂತಿಕ್ಷೇಮ ಅಭ್ಯುದಯಗಳು ಸಾಧ್ಯವೆಂಬುದರಲ್ಲಿ ಸಂದೇಹವಿಲ್ಲ. ಯಾವ ವ್ಯತ್ಯಾಸವು ಇಲ್ಲದೆ ಈ ತತ್ತ್ವಗಳು ಜಗತ್ತಿನ ಎಲ್ಲ ಮತಗಳಲ್ಲಿಯೂ ಲಭಿಸುತ್ತವೆ. ಮತದಿಂದ ಮತಕ್ಕೆ ವ್ಯತ್ಯಾಸವಿರುವುದು ಬಾಹ್ಯಾಚರಣೆಗಳಲ್ಲಿ ಮಾತ್ರವೇ ಹೊರತು ಮೂಲಭೂತ ತತ್ತ್ವಗಳಲ್ಲಲ್ಲ. ಆ ಬಾಹ್ಯಾಚರಣೆಗಳು ದೇಶ ಕಾಲ ಸಮಾಜ ನಿಬದ್ಧವಾದುವು. ತಾತ್ತ್ವಿಕ ಹಾಗೂ ದರ್ಶನ ಸಾಮ್ಯದಿಂದಾಗಿ ಮತಸಮನ್ವಯ ಸುಲಭಸಾಧ್ಯ. ದೇವನೊಬ್ಬ ನಾಮ ಹಲವು ಎನ್ನುವ ಸತ್ಯವನ್ನು ಎಲ್ಲ ಧರ್ಮಗಳು ಒಪ್ಪಿಕೊಳ್ಳುತ್ತವೆ. ನೈತಿಕ ಮೌಲ್ಯಗಳನ್ನು ಎಲ್ಲ ಧರ್ಮಗಳು ಎತ್ತಿ ಹಿಡಿಯುತ್ತವೆ.

ಯೇಸು ಪ್ರವಾದಿ ಮಾತ್ರವಲ್ಲ, ಅವತಾರಪುರುಷ ವಿಭೂತಿಪುರುಷ ನಿಜ. ಅವನು ಸರ್ವಲೋಕ ಪೂಜಾರ್ಹ. ಅವನ ಅನುಯಾಯಿಗಳ ಮತ್ತು ಪುರೋಹಿತರ ಸ್ವಾರ್ಥಯುಕ್ತ ಸಂಕುಚಿತ ಪ್ರವೃತ್ತಿಯಿಂದಾಗಿ, ಅವನು ಕೇವಲ ಒಂದು ಜನಾಂಗದ ಆರಾಧ್ಯ ವ್ಯಕ್ತಿಯಾಗಿದ್ದಾನೆ. ಒಂದು ಮತ ಮತ್ತೊಂದು ಮತಕ್ಕೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಬಾರದೆಂದು ಗಾಂಧೀಜಿ ಸ್ಪಷ್ಟಪಡಿಸುತ್ತಾರೆ. ಈ ನಿಜವನ್ನೊಪ್ಪಿಕೊಂಡದ್ದಾದರೆ ಮತಾಂತರ ಅನವಶ್ಯವಾಗುತ್ತದೆ. ಜೀವಕೋಟಿಗಳು ಭಗವಂತನ ಸೃಷ್ಟಿಯಾಗಿರುವಂತೆ, ಧರ್ಮಗಳೂ ಭಗವಂತನ ಸೃಷ್ಟಿಯೆಂಬುದನ್ನರಿಯ ಬೇಕಾದ್ದು ಮಾನವ ಧರ್ಮ. ಆದ್ದರಿಂದ ಅನ್ಯಧರ್ಮ ದ್ವೇಷ, ಪರದೈವ ತಿರಸ್ಕಾರ ಧರ್ಮದ್ರೋಹ ದೈವದ್ರೋಹವಾಗುತ್ತವೆಂಬುದನ್ನು ಉಪದೇಶಿಗಳು ಅರಿಯಬೇಕಾಗಿದೆ.

ಭಾರತವರ್ಷ ಜಗತ್ತಿನ ಎಲ್ಲ ಧರ್ಮಗಳ ಪ್ರಯೋಗ ಕ್ಷೇತ್ರವಾಗಿದೆ, ಆಡುಂಬೊಲವಾಗಿದೆ. ಕ್ರಿಸ್ತನ ಸ್ವರ್ಗಾರೋಹಣದ ಹಿಂದೆಯೇ ಕ್ರಿಶ್ಚಿಯನ್ ಧರ್ಮ ಭರತಖಂಡವನ್ನು ಪ್ರವೇಶಿಸುತ್ತದೆ. 'ಯೂರೋಪಿನ ಅನೇಕ ದೇಶಗಳು ಕ್ರಿಸ್ತೀಕರಣವಾಗುವ ಮೊದಲೇ ಥಾಮಸ್ ಇಂಡಿಯಾಕ್ಕೆ

ಬಂದನೆಂಬುದನ್ನು ನೆನಪಿಡಬೇಕು. ಇಂಡಿಯಾದೇಶದ ಕ್ರಿಶ್ಚಿಯನ್ ಧರ್ಮ ಯೂರೋಪಿನ ಕ್ರಿಶ್ಚಿಯನ್ ಧರ್ಮಕ್ಕಿಂತ ಪುರಾತನವಾದುದು, ದೀರ್ಘೇತಿಹಾಸವುಳ್ಳದ್ದು' ಎಂದು ಇಂಡಿಯಾದ ಪ್ರಥಮ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದ್ ಹೆಮ್ಮೆಯಿಂದ ಹೇಳುತ್ತಾರೆ[1]. ಈ ಮಾತು ಕಿವಿಯನ್ನು ತಾಕಿದಾಗ ರಾಷ್ಟ್ರೀಯ ಸ್ವಯಂ ಸೇವಕದಳದ ನಾಯಕ ಶ್ರೀ ಕೆ.ಎಸ್. ಸುದರ್ಶನ್ ಅವರ ಭಾರತೀಕರಣ ಸಿದ್ಧಾಂತ ಸಾಧುವೆಂದೆನಿಸದಿರಲಾರದು.

ಅದೇನೇ ಇರಲಿ, ಸಂತ ಥಾಮಸ್ ಕ್ರಿಸ್ತ ಸಂದೇಶವನ್ನು ತ್ರಿಕರಣಶುದ್ಧಿಯಿಂದ ಕಾರ್ಯಗತ ಗೊಳಿಸುವಲ್ಲಿ ಹುತಾತ್ಮನಾದ ಕಥೆ ರೋಮಾಂಚನಕಾರಿಯಾದದ್ದು. ಅವನು ಯೇಸುಸ್ವಾಮಿಗೆ ತೀರ ಸನಿಹದವನು. ಅವನು ಯಾವುದನ್ನೂ ಪರೀಕ್ಷಿಸದೆ ಸುಲಭವಾಗಿ ನಂಬಿಕೊಂಡವನಲ್ಲ. ಆದ್ದರಿಂದ ಅವನು ಸಂಶಯಿ ಥಾಮಸ್ ಎಂದೇ ಪ್ರಖ್ಯಾತನಾಗಿದ್ದಾನೆ. ಅಂತಿಮ ಸಂಜೆ ಭೋಜನದ ನಂತರ ಕೂಡಲೇ ಶಿಷ್ಯರಿಂದ ಅಗಲುವುದಾಗಿ ಯೇಸು ನುಡಿದಾಗ 'ನೀವೆಲ್ಲಿಗೆ ಹೋಗುತ್ತೀರಿ ? ಅಲ್ಲಿಗೆ ದಾರಿ ಯಾವುದು? ' ಎಂದು ಥಾಮಸ್ ಕೇಳುತ್ತಾನೆ. 'ನಾನೇ ದಾರಿ; ನಾನೇ ಸತ್ಯ ಮತ್ತು ಚೈತನ್ಯ. ನನ್ನ ಮೂಲಕವಲ್ಲದೆ ಯಾರೂ ತಂದೆಯ ಹತ್ತಿರ ಬರಲಾರರು. ನನ್ನನ್ನು ಗುರುತಿಸಬಲ್ಲವರಿಗೆ ಮಾತ್ರ ತಂದೆಯ ಗುರುತು ಸಿಗುತ್ತದೆ' ಎಂದು ಯೇಸು ಉತ್ತರ ಹೇಳುತ್ತಾನೆ. ಯೇಸು ಸಮಾಧಿಯಿಂದೆದ್ದಿದ್ದಾನೆ ಎಂದು ಶಿಷ್ಯರು ನುಡಿದಾಗ, ಅವನ ಕೈಗಳಲ್ಲಿ ಮೊಳೆಗಳ ಮಚ್ಚೆ ನೋಡುವ ತನಕ ನಂಬಲಾರೆ ಎಂದು ಥಾಮಸ್ ಸ್ಪಷ್ಟಪಡಿಸುತ್ತಾನೆ. ಯೇಸು ಅವನ ಹಠಮಾರಿತನವನ್ನು ಮೆಚ್ಚಿ ಅವನ ಸಂಶಯವನ್ನು ನಿವಾರಿಸುತ್ತಾನೆ. ಆಗ ಥಾಮಸ್ 'ನೀವೇ ನನ್ನ ಪ್ರಭು ಹಾಗೂ ನನ್ನ ದೇವರು' ಎಂದು ಶರಣಾಗುತ್ತಾನೆ.

ಕ್ರಿಸ್ತಾಜ್ಞೆಯ ಪ್ರಕಾರ, ಧರ್ಮಪ್ರಸಾರಕ್ಕಾಗಿ ಶಿಷ್ಯರು ತಂತಮ್ಮೊಳಗೆ ದೇಶಗಳನ್ನು ಹಂಚಿಕೊಂಡಾಗ, ಇಂಡಿಯಾ ಥಾಮಸ್‌ನ ಪಾಲಿಗೆ ಬರುತ್ತದೆ. ಥಾಮಸ್‌ನಿಗದು ಇಷ್ಟವಿಲ್ಲ. ಆದರೆ ಯೇಸುವೇ ಸ್ವಪ್ನದಲ್ಲಿ ಗೋಚರಿಸಿ, 'ಇಂಡಿಯಾ ಸನಾತನ ಧರ್ಮಭೂಮಿ. ನಾನದನ್ನು ಖುದ್ದಾಗಿ ಬಲ್ಲೆ. ನೀನಿರುವಲ್ಲಿ ನಾನಿರುತ್ತೇನೆ, ಬಾ' ಎಂದು ಆಹ್ವಾನಿಸುತ್ತಾನೆ. ಒಡನೆಯೆ ಥಾಮಸ್ ಅಚಲ ನಿರ್ಧಾರವನ್ನು ಕೈಗೊಂಡು , ಇಂಡಿಯಾ ದಿಕ್ಕಿನಲ್ಲಿ ಹೊರಡುತ್ತಾನೆ. ಆಗಿನ ಕಾಲದಲ್ಲಿ ಇಂಡಿಯಾ ಪಾಶ್ಚಾತ್ಯರಿಗೆ ವ್ಯಾಪಾರ ವಾಣಿಜ್ಯಾದಿ ಸಂಬಂಧಗಳ ಮೂಲಕ ಗೊತ್ತಿತ್ತು. ಅಲೆಕ್ಸಾಂಡರ್ ಬಂದು ಹೋಗಿದ್ದ. ಬುದ್ಧನ ಶಿಷ್ಯರು ಜೆರೂಸಲೆಮ್ ಮೂಲಕ ರೋಮ್ ತನಕ ಹೋಗಿದ್ದರು. ಹಿಂಸೆಗೊಳಗಾಗಿದ್ದ ಯಹೂದ್ಯರು ಆ ಹೊತ್ತಿಗಾಗಲೇ ಇಂಡಿಯಾಕ್ಕೆ ಬಂದು ನೆಲಸಿದ್ದರು. ಥಾಮಸ್ ಮೊದಲು ಸಿಂಧ್ ಪ್ರಾಂತ್ಯದಲ್ಲಿ ಕೆಲವು ತಿಂಗಳು ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ನಡೆಸಿ, ಹಲವು ಜನರನ್ನು ಮತಾಂತರಿಸುತ್ತಾನೆ.

ಅನಂತರ ಕ್ರಿ.ಶ. ೫೨ರಲ್ಲಿ ಥಾಮಸ್ ಮಲಬಾರಿನ ಕ್ರಾಂಗನೂರಿನಲ್ಲಿ ಎಂಟು ತಿಂಗಳಿದ್ದು, ಅನೇಕ ಪವಾಡಗಳನ್ನು[2] ಪ್ರದರ್ಶಿಸಿ, ಅಲ್ಲಿಯ ರಾಜ ಮೊದಲುಗೊಂಡು ಅನೇಕ ನಂಬೂದರಿಗಳನ್ನು ಕ್ರಿಸ್ತೀಕರಣಗೈಯುತ್ತಾನೆ. ಮುಂದೆ ನಾಲ್ಕೈದು ತಿಂಗಳ ಕಾಲ ಚೀನಾದಲ್ಲಿದ್ದು, ಮತಾಂತರ ಕಾರ್ಯವನ್ನು ಜರುಗಿಸಿ, ತನ್ನ ಕಾರ್ಯಸಾಧನೆಗೆ ಇಂಡಿಯಾವೇ ಸರಿಯೆಂದು ನಿಶ್ಚಯಿಸಿ, ವಾಪಸು ಬರುತ್ತಾನೆ. ಕೇರಳದ ಕರಾವಳಿಯಲ್ಲಿ ಆರೇಳು ಚರ್ಚುಗಳನ್ನು ನಿರ್ಮಿಸುತ್ತಾನೆ. ಕೆಲವು ಬ್ರಾಹ್ಮಣ ಕುಟುಂಬಗಳಿಗೆ ದೀಕ್ಷೆ ಕೊಟ್ಟು, ಅವರನ್ನೆ ಪಾದ್ರಿ ಮತ್ತು ಬಿಷಪ್‌ಗಳನ್ನಾಗಿ ನೇಮಿಸುತ್ತಾನೆ. ಬ್ರಾಹ್ಮಣರೇ ಪಾಳುಗೆಡವಿದ ದೇವಾಲಯವನ್ನು ಚರ್ಚನ್ನಾಗಿ ಪರಿವರ್ತಿಸಲಾಗುತ್ತದೆ.[3] ಥಾಮಸ್ ಪೂರ್ವ ಕರಾವಳಿಯ ಕೇರಳದಲ್ಲಿ ದೊರೆತ ಯಶಸ್ಸಿನಿಂದ ತೃಪ್ತಿಗೊಂಡು ಮುಂದೆ ಮೈಲಾಪುರದ ಕಡೆಗೆ ತೆರಳುತ್ತಾನೆ. ಆ ಪವಾಡ ಪುರುಷನನ್ನು ನೋಡಲು,

[1] In the steps of St.Thomas by Rt.Rev. Herman D'Souza, P IV, 2 ಅದೇ ಗ್ರಂಥದ 19ನೆಯ ಪುಟನೋಡಿ 3. ಅದೇ, ಪು 21



ಏಸುಕ್ರಿಸ್ತನ ಜನನ

ಅವನ ಉಪದೇಶವನ್ನು ಕೇಳಲು ಹತ್ತಿರದ ಮಾತ್ರವಲ್ಲ ದೂರದೂರುಗಳಿಂದ ಜನ ಬರುತ್ತಾರೆ. ಥಾಮಸ್ ಅಲ್ಲೊಂದು ಚರ್ಚನ್ನು ನಿರ್ಮಿಸುತ್ತಾನೆ. ಮುಂದೆ ಅದು ದೊಡ್ಡ ಬೆಸಿಲಿಕವಾಗಿ ಬೆಳೆಯುತ್ತದೆ. ಥಾಮಸ್‌ನ ಬಹುಜನಪ್ರಿಯತೆ ಮತ್ತು ಮತಾಂತರದ ಬೀಸು ಬಿರುಸುಗಳು ಸ್ಥಳೀಯ ಬ್ರಾಹ್ಮಣರನ್ನು ಪುರೋಹಿತವರ್ಗಗಳನ್ನು ಕೆರಳಿಸುತ್ತವೆ. ಅವರು ಥಾಮಸ್‌ನ ಮೇಲೆ ಪೋಲಿ ಪಟಾಲಂಅನ್ನು ಛೂಬಿಡುತ್ತಾರೆ. ಆಗ ದೇವಕಾರ್ಯಕ್ಕಾಗಿ ತನ್ನ ಜೀವವನ್ನುಳಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಯೇಸುಶಿಷ್ಯ ಮೈಲಾಪುರದ ನೈಋತ್ಯದಿಕ್ಕಿನಲ್ಲಿ ನಾಲ್ಕು ಮೈಲಿ ದೂರದಲ್ಲಿರುವ ಚಿಕ್ಕಗುಡ್ಡದ ಅರಣ್ಯದ ನಡುವಣ ಗುಹೆಯಲ್ಲಿ ಆಶ್ರಯ ಪಡೆಯುತ್ತಾನೆ. ಕೊನೆಗೆ ಅಲ್ಲಿಂದ ಸಮುದ್ರದ ಕಡೆಗೆ ಎರಡು ಮೈಲಿ ದೂರದಲ್ಲಿರುವ ಹಿರಿಮಲೆಯೇ ಥಾಮಸ್‌ನ ಸಮಾಧಿಸ್ಥಲವಾಗುತ್ತದೆ.

ಕಿರಿಮಲೆಯ ಗುಹೆಯಲ್ಲಿ ಅಡಗಿಕೊಂಡಿದ್ದ ಥಾಮಸ್ ಕೆಲವುದಿನಗಳ ನಂತರ ಆಗಿನ ಕಾಲದಲ್ಲಿ ದುರ್ಗಮವಾಗಿದ್ದ ಹಿರಿಮಲೆಗೆ ಹೋಗುತ್ತಾನೆ. ಅವನ ಮೇಲೆ ಸದಾ ಕಣ್ಣಿಟ್ಟಿದ್ದ ಕೊಲೆಗಾರರಿಗೆ ಅವನು ಹಿರಿಮಲೆಯಲ್ಲಿರಬೇಕೆಂದು ಗುಮಾನಿಯಾಗುತ್ತದೆ. ಕಲ್ಲೊಂದರ ಮೇಲೆ ತಾನೆ ಕೊರೆದಿದ್ದ ಕ್ರೂಸೆಯ ಮುಂದೆ ಪ್ರಾರ್ಥನೆ ಸಲ್ಲಿಸುತ್ತಿರುವಾಗ, ಕೊಲೆಗಾರರು ಅವನನ್ನು ಭರ್ಜಿಯಿಂದ ತಿವಿಯುತ್ತಾರೆ. ಯೇಸುಶಿಷ್ಯ ಕ್ರೂಸೆಯನ್ನಪ್ಪಿಕೊಳ್ಳುತ್ತಾನೆ. ಅವನ ಶರೀರದಿಂದ ಚಿಮ್ಮುತ್ತಿದ್ದ ರಕ್ತ ಕಲ್ಲುಕ್ರೂಸೆಯನ್ನು ಸುತ್ತಣ ಜಾಗವನ್ನು ಲೋಹಿತಗೊಳಿಸುತ್ತದೆ; ಆ ಕ್ಷೇತ್ರವನ್ನು ಪವಿತ್ರಗೊಳಿಸುತ್ತದೆ.

ಯೇಸುವಿನ ಪ್ರಿಯ ಶಿಷ್ಯನಾಗಿ, ಹುತಾತ್ಮನಾಗಿ ಸಂತ ಥಾಮಸ್ ಇಂಡಿಯಾದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ಸುಪ್ರಸಿದ್ಧನಾಗಿದ್ದಾನೆ. ಯೇಸು ಇಂಡಿಯಾಕ್ಕೆ ಎರಡು ಸಲ ಬಂದಿದ್ದ, ಇಲ್ಲಿಯೇ ಅವನ ಸಮಾಧಿಯಿದೆ ಎಂಬ ಪ್ರತೀತಿಯೂ ಉಂಟು[1] ಈ ಎರಡು ಸಂಗತಿಗಳೂ ನಿಜವಾದರೆ, ಇಂಡಿಯಾದ ಕ್ರಿಶ್ಚಿಯನ್ನರ ಹೆಮ್ಮೆಗೆ ಪಾರವಿರಲಾರದು. ಭರತಖಂಡದ ಗೌರವ ಘನತೆಗಳಿಗೆ ಕೊನೆಯಿರಲಾರದು ; ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಭರತಖಂಡಕ್ಕೆ ವಿಶೇಷ ಸ್ಥಾನಮಾನ ದೊರೆಯಲು ಅಡ್ಡಿಯಿರಲಾರದು. ಆಗ ಜಗದ್ವಂದ್ಯ ಯೇಸುಸ್ವಾಮಿ ಕೇವಲ ಕ್ರಿಶ್ಚಿಯನ್ನರವನಾಗದೆ, ನಮ್ಮವನೂ ಆಗುತ್ತಾನೆ, ಎಲ್ಲರವನಾಗುತ್ತಾನೆ. ಪೂರ್ವೋಕ್ತ ಸಂಗತಿಗಳು ನಿಜವಿರಲಿ, ಇಲ್ಲದಿರಲಿ, ಜಗತ್ತಿನ ಕ್ಷೇಮದ ದೃಷ್ಟಿಯಿಂದ ಅವನು ಮತ್ತು ಅವನ ಉಪದೇಶ ಎಲ್ಲರಿಗೂ ಬೇಕೆಂಬುದರಲ್ಲಿ ಸಂದೇಹವಿಲ್ಲ. ಮೋಸೆಸ್, ಮಹಾವೀರ, ಬುದ್ಧ, ಕೃಷ್ಣ, ಪೈಗಂಬರ್, ಬಸವ, ನಾನಕ್ ಮೊದಲಾದ ವಿಭೂತಿಪುರುಷರೊಂದಿಗೆ ಸದಾ ಮನುಕುಲದ ಉದ್ಧಾರವನ್ನು, ಜಗತ್ತಿನ ಕ್ಷೇಮವನ್ನು ಸಾಧಿಸಿದ, ಮುಂದೆಯೂ ಸಾಧಿಸುವ ಯೇಸು ಸ್ವಾಮಿಗೆ ನಮಸ್ಕಾರ!

ದಿನ ದಿನವೂ ಶಿಲುಬೆಯನೇರಿ ;
ಕ್ಷಣ ಕ್ಷಣವೂ ರಕ್ತವ ಸೋರಿ,
ಲೋಕಕೆ ಪ್ರೇಮ ಅಹಿಂಸೆಯ ಸಾರಿ,
ಮನುಜರ ಪಾಪವ (ಅವತಾರ, ಕುವೆಂಪು)

ತೊಳೆಯುತ್ತಿರುವ ಆ ಹುತಾತ್ಮನಿಗೆ ಸಾವಿರ ಸಾವಿರ ನಮಸ್ಕಾರ! ಭಕ್ತರ ಹೃದಯದಲ್ಲಿ ನಿತ್ಯವೂ ಅವತರಿಪ ಸತ್ಯಾವತಾರನಿಗೆ ಅನವರತ ನಮನ!

---

[1] Jesus lived in India by Holger Kersten, ಎಂಬ ಗ್ರಂಥವನ್ನೋದಬಹುದು.

ಪಂಪ ಪ್ರಶಸ್ತಿ ಪುರಸ್ಕೃತ ಡಾ. ಎಲ್. ಬಸವರಾಜು

೨೦೦೦ನೆಯ ಸಾಲಿನ ಪ್ರತಿಷ್ಠೆಯ ಪಂಪ ಪ್ರಶಸ್ತಿ, ೮೧ ವಸಂತಗಳನ್ನು ದಾಟಿರುವ ಪರಿಣತ ವಯಸ್ಸಿನ ಪ್ರೊಫೆಸರ್ ಎಲ್. ಬಸವರಾಜು ಅವರಿಗೆ ನೀಡಿದ್ದು, ಯೋಗ್ಯತೆಗೆ ಸಂದ ಗೌರವವಾಗಿದೆ. ನಾಲ್ಕಾರು ಮಂದಿ ಅರ್ಹ ವಿದ್ವಾಂಸರಿರುವಾಗ, ಒಬ್ಬರನ್ನಾಯ್ಕೆ ಮಾಡುವುದು ತುಂಬ ಕಷ್ಟದ ಕೆಲಸ. ವಿದ್ವತ್ಸಮಿತಿ ಆ ಕೆಲಸವನ್ನು ಸಮರ್ಪಕವಾಗಿ ಸರ್ವಸಮ್ಮತವಾಗಿ ನಿರ್ವಹಿಸಿದೆ. ಹಳಗನ್ನಡ ನಡುಗನ್ನಡ ಗ್ರಂಥಗಳ ಸಂಪಾದನೆ-ಸಂಶೋಧನೆಯ ಮೂಲಕ ಸಾಹಿತ್ಯಸೇವೆಗೆ ತಮ್ಮನ್ನು ಪ್ರಾಮಾಣಿಕತೆಯಿಂದ ಸಮರ್ಪಿಸಿಕೊಂಡ ಡಾ-ಬಸವರಾಜು ಅವರ ಸಾಧನೆ ಸಿದ್ಧಿ ಅಸಾಧಾರಣವಾದದ್ದು. ಪ್ರತಿಭಾಮೂಲವಾದ ವಿದ್ವತ್ತು, ಸೃಜನಶೀಲ ಸಾಮರ್ಥ್ಯ ಮತ್ತು ಅವಿರತವಾದ ಶ್ರಮ ಒಂದುಗೂಡಿದಾಗ ಅಪರೂಪದ ಸಿದ್ಧಿ ಪ್ರಾಪ್ತವಾಗುತ್ತದೆನ್ನುವುದಕ್ಕೆ ಬಸವರಾಜು ಅವರೆ ನಿದರ್ಶನ. ಮೂಲಪಾಠನಿರ್ಣಯ, ಸಂಶೋಧನೆ-ತೌಲನಿಕ ವಿಮರ್ಶೆ, ಇವು ಸಂಪಾದನೆಯ ಮೂಲ ತತ್ತ್ವಗಳು. ಪರಕಾಯ ಪ್ರವೇಶ ಸಾಮರ್ಥ್ಯ ಹಾಗೂ ಕವಿ ಹೃದಯ ವಿದ್ದರೆ ಮಾತ್ರ ಮೂಲಪಾಠವನ್ನು ನಿರ್ಣಯ ಮಾಡುವ ಶಕ್ತಿ ಸಿದ್ಧಿಸುತ್ತದೆ. ತಾರ್ಕಿಕ ಸಾಮರ್ಥ್ಯ ಹಾಗೂ ಗಹನವೂ ವೈವಿಧ್ಯಮಯವೂ ಆದ ವಿದ್ವತ್ತಿದ್ದರೆ ಸಂಶೋಧನೆ ಮತ್ತು ತೌಲನಿಕ ವಿಮರ್ಶೆ ಸಾಧ್ಯವಾಗುತ್ತವೆ. ಇವೆಲ್ಲವೂ ಬಸವರಾಜು ಅವರಲ್ಲಿ ಸಮೃದ್ಧವಾಗಿವೆ.

ಶಿವದಾಸಗೀತಾಂಜಲಿ, ವಿಕ್ರಮಾರ್ಜುನ ವಿಜಯ, ಆದಿಪುರಾಣ ಮತ್ತು ಛಂದಸ್ಸಂಪುಟ, ಇವಿಷ್ಟರ ಸಂಪಾದನೆಯೆ ಸಾಕಾಗಿತ್ತು, ಅವರ ವಿದ್ವತ್‌ಪ್ರಸಿದ್ಧಿಗೆ. ಶಿವದಾಸಗೀತಾಂಜಲಿಯ ಸ್ವರ ವಚನಗಳನ್ನು ಪರಿಷ್ಕೃತ ಪಾಠಗಳ ಜತೆಗೆ ಪ್ರಪ್ರಥಮವಾಗಿ ಕನ್ನಡ ಲೋಕಕ್ಕೆ ಪರಿಚಯಿಸಿಕೊಟ್ಟ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಆ ಗ್ರಂಥ ಅವರಿಗೆ ಡಿಲಿಟ್ ಪದವಿಯನ್ನು ದೊರಕಿಸಿಕೊಡುತ್ತದೆ. ಹಲವು ಹಸ್ತ ಪ್ರತಿಗಳನ್ನು ಕಣ್ಮುಂದಿರಿಸಿಕೊಂಡು ಪಾಠಗಳನ್ನು ನಿರ್ಣಯಿಸಿದ್ದಾರಲ್ಲದೆ, ಅರ್ಥಾನುಸಾರಿಯಾಗಿ, ಅಂದರೆ ಅರ್ಥಲಯವನ್ನು ಲಕ್ಷಿಸಿ, ಮೂಲಪಾಠಗಳನ್ನು ಮುರಿದು, ಅನಿಯತಪದಿಗಳನ್ನು ಸೃಷ್ಟಿಸಿದ್ದಾರೆ ; ಕಷ್ಟಕರವಾದ ಸಮಾಸ ಸಂಧಿಗಳನ್ನು ಬಿಡಿಸಿ, ವಿರಾಮ ಚಿಹ್ನೆಗಳನ್ನು ಬಳಸಿ, ಬೋಧಕರ ಸಹಾಯವಿಲ್ಲದೆಯೆ, ಕಾವ್ಯಾಭ್ಯಾಸಿಗಳು ವಿದ್ವತ್ತನ್ನು ಸಂಪಾದನೆ ಮಾಡಬಹುದಾದ ಮಾರ್ಗವನ್ನು ಸಮೆದಿದ್ದಾರೆ. ಜತೆಗೆ ಆ ಕೃತಿ ಅವರ ಲೇಖನಿಯ ಮೂಲಕ ಹೊಸಗನ್ನಡ ಗದ್ಯದಲ್ಲಿಯೂ ಅವತರಿಸಿದೆ.

ಆದಿಪುರಾಣದ ಸಂಪಾದನೆ ವಿಶಿಷ್ಟವಾಗಿದೆ. ಇದನ್ನು ಆಧಾರವಾಗಿಟ್ಟುಕೊಂಡು ಗ್ರಂಥ ಸಂಪಾದನಾ ಶಾಸ್ತ್ರದ ಸಿದ್ಧಾಂತಗಳನ್ನು ರೂಪಿಸಬಹುದಾಗಿದೆ. ಹತ್ತು ಹಸ್ತಪ್ರತಿಗಳ ಜತೆಗೆ, ಆ ಕಾವ್ಯಕ್ಕೆ ಮೂಲ ಆಕರವಾದ ಜಿನಸೇನಾಚಾರ್ಯರ ಸಂಸ್ಕೃತದ ಪೂರ್ವಪುರಾಣವನ್ನು ಹೋಲಿಸಿ, ಪಾಠಗಳನ್ನು ನಿರ್ಣಯಿಸಿದ್ದಾರೆ. ಈ ದಿಶೆಯಲ್ಲಿ ಇವರೇ ಮೊದಲಿಗರೆಂಬುದು ನನ್ನ ನೆನಪು. ಈ ಉಪಾಯವನ್ನು ತೌಲನಿಕ ಸಂಪಾದನೆಯೆಂದೇ ಕರೆಯಬಹುದು. ಸಂಪಾದನೆಯ ಜತೆ ಜತೆಯಲ್ಲಿಯೇ ಪೂರ್ವಪುರಾಣ ಹಾಗೂ ಆದಿಪುರಾಣಗಳನ್ನು ತಾಳೆ ಹಿಡಿದು, ಸಾಮ್ಯವೈಷಮ್ಯಗಳನ್ನು ಗುರುತಿಸುವಾಗ, ತೌಲನಿಕ ವಿಮರ್ಶೆಗೆ ಒತ್ತುಕೊಟ್ಟಿದ್ದಾರೆಂದೇ ತೋರುತ್ತದೆ. ಏಕ ಕಾಲದಲ್ಲಿ ಸಾಧಿಸಿರುವ ತೌಲನಿಕ ಸಂಪಾದನೆ ವಿಮರ್ಶೆ ಇಲ್ಲಿಯ ವಿದ್ವತ್ತಿನ ವೈಶಿಷ್ಟ್ಯ. ಇಷ್ಟೇ ಅಲ್ಲ, ಅಡಿ ಟಿಪ್ಪಣಿಗಳಲ್ಲಿ ಸಂಪಾದಿತ ಕೃತಿಯ ಗುಣಾವಗುಣಗಳನ್ನು ಎತ್ತಿತೋರಿಸಿದ್ದಾರೆ. 'ಅದೇ ಪಂಪನು ವೃಷಭನಾಥನನ್ನು ಮಾತನಾಡುವಂತೆ ಚಿತ್ರಿಸಿಲ್ಲ. ಅದು ಅತ್ಯಂತ ಶ್ಲಾಘನೀಯವಾದ ಮಾರ್ಪಾಡು. ಪಂಪನ ಪ್ರಕಾರ ಭರತಸೋದರರು ಸ್ವಂತ

ನಿರ್ಧಾರದಿಂದ ಸನ್ಯಾಸಿಗಳಾಗುತ್ತಾರೆ(ಪುಟ ೪೫೫, ಅಡಿ ಟಿಪ್ಪಣಿ)' ಈ ಅಡಿ ಟಿಪ್ಪಣಿಗಳ ಆಧಾರದ ಮೇಲೆ ಯಾರಾದರೂ ಸುಲಭವಾಗಿ ಒಂದು ಶ್ರೇಷ್ಠ ತೌಲನಿಕ ವಿಮರ್ಶಾಗ್ರಂಥವನ್ನು ರಚಿಸಬಹುದು. ಒಟ್ಟಿನಲ್ಲಿ ಪಂಪನ ಮೂಲಸ್ವರೂಪವನ್ನು ಸಂಪಾದಕರು ಕನ್ನಡಿಗರಿಗೊದಗಿಸಿದ್ದಾರೆಂದೇ ಹೇಳಬಹುದು.

ಜನಪ್ರಿಯ ಕವಿಯಾದ ಸರ್ವಜ್ಞನ ವಚನಗಳ ಸಂಪಾದನೆಯೂ ಕ್ಲಿಷ್ಟಕರವಾದದ್ದೇ. ಅಲ್ಲಿ ಪ್ರಕ್ಷಿಪ್ತಗಳ ಹಾವಳಿಯೇ ಹೆಚ್ಚು. ಪ್ರಾಯಶಃ ಅತ್ಯಂತ ಸಮರ್ಥವಾಗಿ ಪ್ರಾಮಾಣಿಕವಾಗಿ ಶಾಸ್ತ್ರೀಯವಾಗಿ ಸಂಪಾದನೆಗೊಂಡಿರುವ ಗ್ರಂಥ ಇದೊಂದೇ ಎಂದು ಹೇಳಬಹುದು. ಈ ವಚನಗಳ ಅಂಕಿತ 'ಸರ್ವಜ್ಞ' ಅಲ್ಲ 'ಪರಮಾರ್ಥ' ಎಂದು ಸ್ಪಷ್ಟಪಡಿಸಿದ್ದಾರೆ. ಹಳಗನ್ನಡದ ಎಲ್ಲ ಛಂದೋಗ್ರಂಥಗಳನ್ನು ಸಂಪಾದಿಸಿ ಸಂಕಲಿಸಿ ಪಾಂಡಿತ್ಯ ಪೂರ್ಣವಾದ ಪೀಠಿಕೆಯನ್ನು ರಚಿಸಿದ್ದಾರೆ. ಇಲ್ಲಿಯೂ ಸಂಪಾದಕರ ತಾರ್ಕಿಕ ಕೌಶಲವನ್ನೂ, ತೀವ್ರ ತೌಲನಿಕಾ ಸಕ್ತಿಯನ್ನೂ ಕಾಣಬಹುದು. ಇಂಥವರು ಶಬ್ದಮಣಿ ದರ್ಪಣಕ್ಕೆ ಬರೆದಿರುವ ವ್ಯಾಖ್ಯಾನ ಮೌಲಿಕವೂ ಪ್ರಮಾಣ ಭೂತವೂ ಆಗಿರುತ್ತದೆಂಬುದಕ್ಕೆ ಎರಡು ಮಾತಿಲ್ಲ.

ಇಂತೆಯೇ ಬಸವರಾಜು ಅವರು ಅಲ್ಲಮಾದಿ ಶರಣರ ವಚನಗಳನ್ನೂ, ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯನ್ನೂ ಸಂಪಾದಿಸಿದ್ದಾರೆ. ಬಿಗಿಪಟ್ಟು ಅಧ್ಯವಸಾಯಗಳ ಜತೆಗೆ ಪ್ರತಿಭೆ ಮತ್ತು ಸೃಜನ ಶೀಲ ಸಾಮರ್ಥ್ಯವಿರದಿದ್ದರೆ ಇಷ್ಟೊಂದು ಮಹತ್ವಪೂರ್ಣವಾದ ಅಸದೃಶವಾದ ಸಾಹಿತ್ಯಕಾರ್ಯ ಸಾಧ್ಯವಾಗುತ್ತಿರಲಿಲ್ಲ. ವಿಜ್ಞಾನಕ್ಕೆ ಪ್ರಯೋಗ ವಿಜ್ಞಾನ ಅಥವಾ ತಂತ್ರಜ್ಞಾನವಿರುವಂತೆ ಸಾಹಿತ್ಯಕ್ಕೆ ಪ್ರಯೋಗ ಸಾಹಿತ್ಯ ಅಥವಾ ಸಾಹಿತ್ಯ ಶಾಸ್ತ್ರವಿದೆ. ಎರಡೂ ಪರಸ್ಪರ ಪೂರಕಗಳು. ಅವರಲ್ಲಿ ಸೃಜನ ಸಾಮರ್ಥ್ಯದ ಅಕ್ಷಯ ನಿಕ್ಷೇಪವಿದ್ದಂತೆ ತೋರುತ್ತದೆ. ಈ ಅಕ್ಷಯ ಭಂಡಾರ ಠಾಣಾಂತರ ಮತ್ತು ಜಾಲಾರಿ ಕವನ ಸಂಗ್ರಹಗಳ ಅಭಿವ್ಯಕ್ತಗೊಂಡಿದೆ. ಬುದ್ಧ ಚರಿತೆಯನ್ನಾಧರಿಸಿದ ಮಹಾಕಾವ್ಯವೂ ಪ್ರಜನನಗತಿಯಲ್ಲಿದೆಯೆಂದು ಕೇಳಿದ್ದೇನೆ.*

ಸಾಹಿತ್ಯ ಕೃಷಿಯ ಪ್ರಾರಂಭದಲ್ಲಿ ಅವರು ಭಾಸನ ರಾಮಾಯಣ ಸಂಬಂಧವಾದ ಮೂರು ನಾಟಕಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸುತ್ತಾರೆ. ಪ್ರತಿಮಾ ನಾಗಾನಂದ, ಶಾಕುಂತಲ, ಮೃಚ್ಛಕಟಿಕಾ, ಉತ್ತರ ರಾಮ ಚರಿತೆ ನಾಟಕಗಳಿಂದ ಒಂದೊ ಎರಡೊ ಅಂಕಗಳನ್ನು ಆಯ್ದು ಭಾಷಾಂತರಿಸಿ 'ನಾಟಕಾಮೃತ ಬಿಂದುಗಳು' ಎಂಬ ಹೆಸರಿನ ಸಂಕಲನವನ್ನು ಪ್ರಕಟಿಸುತ್ತಾರೆ.

ಬಸವರಾಜು ಅವರು ಸಾಹಿತ್ಯ ಸೇವೆಗಾಗಿ ಆರಿಸಿಕೊಂಡದ್ದು ಸಣ್ಣಕಥೆ ಕಾದಂಬರಿಯಂಥ ಪ್ರಕಾರಗಳ ಸರಸ ಸಲೀಲ ಮಾರ್ಗವಲ್ಲ; ಸಂಪಾದನೆ ಸಂಶೋಧನೆ ವಿಮರ್ಶೆಯ ಜಟಿಲ ಕುಟಿಲ ನಿಮ್ನೋನ್ನತ ಕಷ್ಟಮಾರ್ಗ. ಅಲ್ಲಿ ಶಿಖರ ಪ್ರಾಯದ ಯಶಸ್ಸು ಪಡೆದನಂತರ ಶುದ್ಧ ಸಾಹಿತ್ಯ ಸೃಷ್ಟಿಗೆ ಕೈಹಾಕಿ ಯಶಸ್ಸಿನ ದಾರಿಯಲ್ಲಿರುವುದನ್ನು ನೋಡಿದಾಗ, ಸೃಜನ ಮತ್ತು ಸೃಜನೇತರ ಸಾಹಿತ್ಯಗಳಿಗೆ ಕಾರಣವಾದ ಪ್ರತಿಭೆ ಏಕೈಕವಾದದ್ದೆಂಬುದು ಸ್ಪಷ್ಟವಾಗುತ್ತದೆ. ಉದ್ಯೋಗ ನಿರತರಾಗಿರಲಿ, ನಿವೃತ್ತರಾಗಿರಲಿ ಸಾಹಿತ್ಯ-ಸಂಸ್ಕೃತಿಗಳ ಬಗೆಗಿನ ಅವರ ಕಾಯಕ ನಿಷ್ಠೆಮಾತ್ರ ವಿಶುದ್ಧ, ಅಚಲ; ಆ ನಿಷ್ಠೆಯಿದ್ದದ್ದರಿಂದಲೇ ಅವರು ಗುಣಗಾತ್ರಗಳೆರಡರಲ್ಲಿಯೂ ಸಮೃದ್ಧವಾದ ಸಾಹಿತ್ಯವನ್ನು ಸೃಷ್ಟಿಸಿದ್ದಾರೆಂದು ಹೇಳಬಹುದು.

---

* ಅದು ಇತ್ತೀಚೆಗೆ ಪ್ರಕಟವಾಗಿದೆಯಂತೆ. ನಾನಿನ್ನೂ ನೋಡಿಲ್ಲ.

ಜೆ.ಹೆಚ್.ಪಟೇಲರಿಗೆ ಶರಣು ಶರಣಾರ್ಥಿ

ಕರ್ನಾಟಕದ ಪ್ರಥಮ ದರ್ಜೆಯ ರಾಜಕಾರಣಿಗಳಲ್ಲೊಬ್ಬರೂ, ಮುಖ್ಯಮಂತ್ರಿಯಾಗಿ ಕರ್ನಾಟಕ ಮುನ್ನಡೆಗೆ ಶ್ರಮಿಸಿದವರೂ ಆದ ಶ್ರೀ ಜಯದೇವಪ್ಪ ಹಾಲಪ್ಪ ಪಟೇಲರು ೧೨.೧೨.೨೦೦೦ನೆಯ ದಿನದಂದು ಬೆಳಗ್ಗೆ ೨.೩೦ ಗಂಟೆ ಸಮಯದಲ್ಲಿ ೭೦ ವರ್ಷ ತುಂಬಿದ ಒಂದೆರಡು ತಿಂಗಳಲ್ಲಿಯೇ (ಜನನ ೧.೧೦.೧೯೩೦) ಅವಸಾನ ಹೊಂದಿದ್ದು ವಿಷಾದದ ಸಂಗತಿಯಾಗಿದೆ. ಕಾಗೋಡು ಸತ್ಯಾಗ್ರಹ ಸೃಷ್ಟಿಸಿದ ಖ್ಯಾತ ರಾಜಕಾರಣಿಗಳಲ್ಲಿ ಇವರೂ ಒಬ್ಬರು. ರಾಮಮನೋಹರ ಲೋಹಿಯಾ ಅವರನ್ನು ರಾಜಕೀಯ ಗುರುವೆಂದು ಸ್ವೀಕರಿಸಿ, ಗೋಪಾಲಗೌಡ ಶಾಂತವೇರಿಯವರ ಗರಡಿಯಲ್ಲಿ ಪಳಗಿ, ಜಾರ್ಜ್ ಫರ್ನಾಂಡಿಸ್ ಮಧುಲಿಮಯೆ ಮೊದಲಾದ ಸಮಾಜವಾದಿಗಳ ಸ್ನೇಹದೊಂದಿಗೆ ನಾಡಿನಲ್ಲಿ, ಅದರಲ್ಲಿಯೂ ಕರ್ನಾಟಕದಲ್ಲಿ ಸಮಾಜವಾದ ಸಿದ್ಧಾಂತವನ್ನು ಪಸರಿಸಿದ ನಾಯಕಾಗ್ರ ಗಣ್ಯರವರು.

ಚನ್ನಗಿರಿ ತಾಲ್ಲೂಕಿನ ಕಾರಿಗನೂರಿನ ಪಟೇಲ್ ಹಾಲಪ್ಪನವರು ರಾಜರ ಕಾಲದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಹಾಗೂ ಶ್ರೀಮಂತರು. ಜಯದೇವಪ್ಪ ಪಟೇಲ್ ಅವರ ಮಗ. ಹುಟ್ಟಿನಿಂದ ಶ್ರೀಮಂತರಾದರೂ, ಭಾರಿ ಜಮೀನ್ದಾರರಾದರೂ, ಉಳುವವನಿಗೇ ಭೂಮಿ ಎಂಬ ತತ್ತ್ವಾಧಾರದ ಮೇಲೆ ನಡೆದ ಕಾಗೋಡು ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರವಹಿಸಿದ್ದು, ಲೋಹಿಯಾ ಅವರ ಮುಂದಾಳತ್ವದಲ್ಲಿ ಸಮಾಜವಾದಿಯಾದದ್ದು ಅವರ ಮಾನವೀಯತೆಗೆ ನಿದರ್ಶನವಾಗಿದೆ. ಅವರ ವಿದ್ವತ್ತು, ವಾಗ್ಮಿತೆ, ಸಾಹಿತ್ಯ ಪ್ರೇಮ, ಕುಶಾಗ್ರಮತಿ, ಬಹುಮುಖ ಪ್ರತಿಭೆ, ವಾದನೈಪುಣ್ಯವನ್ನು ನೋಡಿದಾಗ, ವಕೀಲಿಯ ಕಡೆಗೆ ವಾಲಿದ್ದರೆ ಶ್ರೇಷ್ಠ ನ್ಯಾಯವಾದಿಗಳೋ ನ್ಯಾಯಮೂರ್ತಿಗಳೊ ಆಗಬಹುದಿತ್ತು ; ವಿಶ್ವವಿದ್ಯಾನಿಲಯದ ಕಡೆಗೆ ವಾಲಿದ್ದರೆ, ಮಹಾಪ್ರಾಧ್ಯಾಪಕರಾಗಬಹುದಿತ್ತು; ಆ ಎರಡು ಕ್ಷೇತ್ರಕ್ಕಾದ ನಷ್ಟ ರಾಜಕೀಯ ಕ್ಷೇತ್ರಕ್ಕೆ ಲಾಭವಾಯಿತೆಂದೇ ಹೇಳಬಹುದು.

ಜೆ.ಹೆಚ್.ಪಟೇಲರು ವಿದ್ಯಾರ್ಥಿ ದಶೆಯಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುತ್ತಾರೆ. ಕಾನೂನು ವ್ಯಾಸಂಗ ಮುಗಿದನಂತರ ಕೆಲವು ಕಾಲ ಮಾತ್ರ ವಕೀಲರಾಗಿದ್ದು, ೧೯೬೦ರಲ್ಲಿ ತಾಲ್ಲೂಕು ಬೋರ್ಡ್ ಸದಸ್ಯತ್ವದ ಮೂಲಕ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಸಮಾಜವಾದ ಪಕ್ಷದ ಟಿಕೇಟಿನ ಮೂಲಕ ೧೯೬೭ರಲ್ಲಿ ಸಂಸದ್ ಸಭೆಯನ್ನು ಪ್ರವೇಶಿಸಿದ ಅವರು ಸಂಸದ್ ಪಟು ವಾದೀಭಸಿಂಹನೆನಿಸಿಕೊಳ್ಳುತ್ತಾರೆ; ವಿರೋಧ ಹಾಗೂ ಆಡಳಿತ ಪಕ್ಷಗಳ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಇಡೀ ಸಭೆ ಚಕಿತಗೊಳ್ಳುವಂತೆ ತಮ್ಮ ಚೊಚ್ಚಲು ಭಾಷಣವನ್ನು ಕನ್ನಡದಲ್ಲಿ ಮಾಡಿ ಕರ್ನಾಟಕದ ಯಾವ ಸಂಸತ್ ಸದಸ್ಯನಿಗೂ ಇಲ್ಲದ ಸ್ಥೈರ್ಯವನ್ನೂ ಆತ್ಮಗೌರವವನ್ನೂ ಮೆರೆದ ಅಗ್ಗಳಿಕೆಗೆ ಅವರು ಪಾತ್ರರಾಗುತ್ತಾರೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ ಅವರು ಕಾರಾಗೃಹವಾಸ ಅನುಭವಿಸಿದ್ದೂ ಉಂಟು. ಆಮೇಲೆ ಅವರು ಎರಡು ಮೂರುಸಲ ಶಾಸನ ಸಭೆಗೆ ಗೆದ್ದು, ರಾಮಕೃಷ್ಣ ಹೆಗ್ಡೆ, ಬೊಮ್ಮಾಯಿ ಮತ್ತು ದೇವೇಗೌಡರ ಸಚಿವ ಸಂಪುಟಗಳಲ್ಲಿ ಪ್ರತಿಷ್ಠಿತ ಖಾತೆಗಳ ಮಂತ್ರಿಯಾಗುತ್ತಾರೆ. ದೇವೇಗೌಡರು ಪ್ರಧಾನಿಯಾಗುತ್ತಿದ್ದಂತೆ, ಪಟೇಲರು ಕರ್ನಾಟಕದ ಮುಖ್ಯಮಂತ್ರಿಯಾಗಿ ಮೂರೂವರೆ ವರ್ಷ ಆಡಳಿತ ನಡಸುತ್ತಾರೆ.

ರಾಜಕಾರಣಿಗಳಲ್ಲಿ ಅಪರೂಪವೆನ್ನಬಹುದಾದ ವಿದ್ವತ್ತು, ನಿಷ್ಕಾಪಟ್ಯ, ಹಾಸ್ಯ ಪ್ರವೃತ್ತಿ, ವ್ಯಂಗ್ಯ, ಕಟಕಿ, ವಿಡಂಬನೆ ಅವರ ಸಂವಾದದಲ್ಲಿ, ಭಾಷಣಗಳಲ್ಲಿ, ಶಾಸನ ಸಭೆಯಲ್ಲಿ ಸಮೃದ್ಧವಾಗಿ ಮೈದೋರುತ್ತಿದ್ದುವು. ಅವರ ವಿಡಂಬನೆಯಲ್ಲಿ ಅಸೂಯೆಯಾಗಲಿ, ದ್ವೇಷಭಾವನೆಯಾಗಲಿ, ಪ್ರತೀಕಾರ ಬುದ್ಧಿಯಾಗಲಿ ವಿಜೃಂಭಿಸುತ್ತಿರಲಿಲ್ಲ. ಉಪನ್ಯಾಸದ ನಡುನಡುವೆ ಲೀಲಾಜಾಲವಾಗಿ ಹೊರಹೊಮ್ಮುತ್ತಿದ್ದ ಕಥೆ ಉಪಕಥೆಗಳ ಮಸಾಲೆ ಜನಮನವನ್ನು ರಂಜಿಸುತ್ತಿದ್ದುವು. ಅವರ

ಹಗೆಗಳಿಗೂ ಅವು ಪ್ರಿಯವಾಗಿ ವೈರಭಾವವನ್ನು ತಗ್ಗಿಸುತ್ತಿದ್ದುವು. ಹಾಸ್ಯದ ಚಟಾಕಿಗಳ ಮೂಲಕವೇ ವಿರೋಧಿಗಳನ್ನು ನಿಶ್ಶಸ್ತ್ರಗೊಳಿಸುತ್ತಿದ್ದರು. ಪರರ ಟೀಕೆಗಳಿಗವರು ಎಂದೂ ಸೊಪ್ಪು ಹಾಕಿದವರಲ್ಲ. ತಾವು ಮುಖ್ಯಮಂತ್ರಿಯೆಂಬ ಹಮ್ಮುಬಿಮ್ಮಾಗಲಿ, ಪ್ರತಿಷ್ಠಾಹಂಕಾರವಾಗಲಿ, ಬಿಗುಮಾನವಾಗಲಿ ಅವರಲ್ಲಿರಲಿಲ್ಲ; ಸಾರ್ವಜನಿಕ ವೇದಿಕೆಯ ಮೇಲಿದ್ದಾಗ ಎಣ್ಣೆಕುಡಿದವರಂತೆ, ಸುಟ್ಟಮೋರೆಯವರಂತೆ ಬಿಗಿತುಕೊಂಡಿರುತ್ತಿರಲಿಲ್ಲ; ಅಹಂಕಾರ ವಿರಹಿತವಾದ ಪ್ರಸನ್ನತೆ ಅವರ ಮುಖದಲ್ಲಿ ತುಂಬಿ ತುಳುಕುತ್ತಿತ್ತು. ಅಧಿಕಾರದಲ್ಲಿರಲಿ, ಇಲ್ಲದಿರಲಿ, ಅವರು ಸಹಜ ಸರಳವಾಗಿ ನಿರಾಡಂಬರವಾಗಿ, ವಿನಯ ಸೌಜನ್ಯಗಳಿಂದ ವರ್ತಿಸುತ್ತಿದ್ದರು.

ಮುಖ್ಯಮಂತ್ರಿಯಾದಾಗ ಅವರು ಮಾಡಿದ ಮಹಾಕಾರ್ಯವೊಂದು ಚಿರಸ್ಮರಣೀಯವಾದುದು. ಅದು ಏಳು ಹೊಸ ಜಿಲ್ಲೆಗಳ ನಿರ್ಮಾಣಕ್ಕೆ ಸಂಬಂಧಿಸಿದ್ದು. ಸಾವಿರಾರು ವರ್ಷಗಳ ತನಕ ಆ ಜಿಲ್ಲೆಗಳ ಜನ ಅವರನ್ನು ನೆನೆಸಿಕೊಳ್ಳುತ್ತಾರೆ. ಆ ನಿರ್ಮಾಣ ಕಾರ್ಯದಲ್ಲಿ ಹಿಂದಿನವರಲ್ಲಿಲ್ಲದಿದ್ದ ಧೈರ್ಯ ದೂರದೃಷ್ಟಿ ಮತ್ತು ಕರ್ತೃತ್ವಶಕ್ತಿ ಅವರಲ್ಲಿ ಎದ್ದುಕಾಣುತ್ತವೆ.

ಅವರ ಹೃದಯ ಸದಾ ತೆರೆದುಕೊಂಡಿರುವ ಶ್ರೀಮಂತಿಕೆಯ ನಿಧಿ. ಮುಚ್ಚುಮರೆಯೆಂಬುದು ಅವರ ಸ್ವಭಾವಕ್ಕೆ ಪರಕೀಯವಾದದ್ದು. ಪರಿಣಾಮವನ್ನು ಲೆಕ್ಕಿಸದೆಯೇ ಅವರು ತಮ್ಮ ದೋಷ ದೌರ್ಬಲ್ಯಗಳನ್ನು ಡಂಗುರಿಸುತ್ತಿದ್ದುದುಂಟು. ತಾವು ಮಾನಿನಿ ಮದಿರಾಪ್ರಿಯರೆಂದು ಬಹಿರಂಗವಾಗಿ ಘೋಷಿಸುವಲ್ಲಿ ಅವರ ಸತ್ಯನಿಷ್ಠೆ, ಧೃತಿ, ಕೆಚ್ಚೆದೆತನಗಳು ಪ್ರಕಾಶಿತವಾಗುತ್ತವೆ. ತಾವಾಗಿಯೇ ಮೆಚ್ಚಿ ಬಂದ ಪರಸ್ತ್ರೀಯರೊಡನೆ ಭೋಗಿಸುವುದರಲ್ಲಿ, ಅವರನ್ನು ತೃಪ್ತಿಪಡಿಸುವಲ್ಲಿ ತಪ್ಪಿಲ್ಲವೆನ್ನುವ ಅವರ ರಸಿಕತನವನ್ನು ಅಲ್ಲಗಳೆಯುವಂತಿಲ್ಲ. ನಿಸರ್ಗವೊದಗಿಸುವ ಎಲ್ಲ ಸುಖವನ್ನು ಪೂರ್ಣವಾಗಿ ಅನುಭವಿಸಬೇಕಾದ್ದು ಮಾನವ ಧರ್ಮವೆಂಬುದು ಅವರ ಸಿದ್ಧಾಂತವಾಗಿತ್ತೆಂದು ತೋರುತ್ತದೆ. ಅದಕ್ಕಾಗಿ ಅವರು ವಂದ್ಯರೇ ಹೊರತು ನಿಂದ್ಯರಲ್ಲ. ಆದರೆ ಭೌತಿಕ ಸುಖದಲ್ಲಿಯೇ ಜೀವನ ಮುಕ್ತಾಯಗೊಳ್ಳಬಾರದೆಂಬುದನ್ನವರು ತಿಳಿದಿದ್ದರೋ ಇಲ್ಲವೋ ಗೊತ್ತಿಲ್ಲ. ಅಂಥ ತಿಳಿವಳಿಕೆಗೆ ಆಧಾರಗಳು ಸಿಕ್ಕಿಲ್ಲ.

ಪಟೇಲರ ಜ್ಞಾನೈಶ್ವರ್ಯ ಮತ್ತು ಬುದ್ಧಿ ಸಾಮರ್ಥ್ಯ ಅವರ ಆಡಳಿತದಲ್ಲಿ ಮೊಗದೋರಲಿಲ್ಲವೆಂಬ ಮಾತು ಇದ್ದೇ ಇದೆ. ಅವರು ನಿಜಕ್ಕೂ ಜಾತಿದೂರರು, ಉದಾರಚರಿತರು. ಆದರೆ ಜಾತಿವಂತರಾದ ಕೆಲವು ಮಂತ್ರಿಗಳು ಐಎಎಸ್ ಅಧಿಕಾರಿಗಳು ಹಾಗೂ ನೀತಿಹೀನರಾದ ನಿಕಟವರ್ತಿ ಸ್ನೇಹಿತರು ಅವರನ್ನು ತಪ್ಪುದಾರಿಗೆಳೆದರೆಂದು ತೋರುತ್ತದೆ. ಅದರಿಂದಾಗಿ ಅವರ ಆಡಳಿತ ಕಳಂಕ ರಹಿತವಾಗಿದ್ದಂತೆ ತೋರದು. ಮದ್ಯಮಾರಾಟಗಾರರಿಗವರು ಶರಣಾದಂತೆಯೂ ಊಹಾಪೋಹ ನಡೆದಿದೆ. ಅಷ್ಟೇ ಅಲ್ಲ, ಅವರು ಸಮಾಜವಾದದಿಂದ ದೂರಸರಿದು ಮೌಲ್ಯಗಳನ್ನು ಮರೆತು ಮಜಾವಾದದ ಕಡೆಗೆ ವಾಲಿದ್ದರೆಂಬ ಸುದ್ದಿಯೂ ಇದೆ. ಜಾರ್ಜ್ ಫರ್ನಾಂಡಿಸ್‌ರಂಥ ಲೋಹಿಯಾ ವಾದಿಗಳು ಈಗೆಲ್ಲಿದ್ದಾರೆ? ಅವರು ಆರೋಗ್ಯ ದೃಢಕಾಯರಾಗಿದ್ದು, ಜನತಾದಳದ ಎರಡೂ ಶಾಖೆಗಳನ್ನು ಬೆಸೆದಿದ್ದರೆ, ದೇಶಕ್ಕೆ ಒಳಿತಾಗುತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ. ಏನೇ ದೌರ್ಬಲ್ಯಗಳಿದ್ದರೂ ಜೆ.ಹೆಚ್.ಪಟೇಲರು ಜಂಟಲ್‌ಮನ್, ವರ್ಣರಂಜಿತ, ರಸಿಕ, ಗೌರವಾರ್ಹ ಗಣ್ಯವ್ಯಕ್ತಿಯೆಂದು ನಾಡಿಗೆ ನಾಡೇ ಮೆಚ್ಚಿದೆಯೆಂಬುದು ಮರೆಯಲಾಗದ ಸಂಗತಿ.

ದೇಜಗೌ

ಪೋರನ ಧ್ಯೇಯ!

ಸತ್ಯವತಿ
w/o ಡಾ. ಎಸ್. ಹರಿಕೃಷ್ಣ
ಸರ್ಜನ್ ಡೆಂಟಿಸ್ಟ್
ಸುರತ್ಕಲ್ - ೫೭೪ ೧೫೮

೧೯೪೫ನೇ ಇಸವಿಯಲ್ಲಿ, ಕೆನಡಾ ದೇಶದ ಬೇರೊಬರ್ಟ್ಸ್‌ನ ಅಂಗಡಿಯೊಂದರಲ್ಲಿ ಇದ್ದಂಥ ಯಾವುದೋ ಒಂದು ವಸ್ತುವನ್ನು ಕಂಡ ಆ ಹನ್ನೆರಡು ವರ್ಷದ ಪೋರನ ಹೃದಯ ಅದಕ್ಕಾಗಿ ಹಂಬಲಿಸಿತು. ಆದರೆ, ಅದರ ಬೆಲೆಯಾದ 'ಐದು ಡಾಲರ್' ಅವನ ಯೋಗ್ಯತೆಗೆ ಮೀರಿದ್ದಾಗಿತ್ತು. ಆ ಐದು ಡಾಲರ್‌ಗಳಿಂದ ರ್‍ಯೂಬೆನ್ ಎರ್ಲ್‌ನ ಕುಟುಂಬಕ್ಕೆ ಒಂದು ವಾರಕ್ಕೆ ಬೇಕಾದ ದಿನಸಿ ಸಾಮಾನುಗಳನ್ನು ಕೊಂಡು ತರಬಹುದಿತ್ತು.

ರ್‍ಯೂಬೆನ್ ತನ್ನ ತಂದೆಯ ಬಳಿ ಹಣವನ್ನು ಕೇಳುವಂತಿರಲಿಲ್ಲ. ತಂದೆ ಮಾರ್ಕ್‌ಎರ್ಲ್ ಮೀನಿನಿಂದ ಸಂಪಾದಿಸಿದ್ದನ್ನೆಲ್ಲಾ, ಸಾಕಷ್ಟು ಎಳೆದೆಳೆದು, (ಸ್ಥಿತಿಸ್ಥಾಪಕ) ರಬ್ಬರಿನಂತೆ ವಿಸ್ತರಿಸಿ, ತನ್ನ ಐವರು ಮಕ್ಕಳ ಹೊಟ್ಟೆ-ಬಟ್ಟೆಗಳಿಗೆ ಹೇಗೋ ಸರಿಹೊಂದಿಸುತ್ತಿದ್ದಳು ತಾಯಿ ಡೋರಾ.

ಆದರೂ, ಆ ಅಂಗಡಿಯ ಶಿಥಿಲಗೊಂಡ ಬಾಗಿಲನ್ನು ತೆರೆದು. ಆತ ಒಳಗೆ ಅಡಿಯಿಟ್ಟ. ಹಿಟ್ಟಿನ ಚೀಲದ ಅಂಗಿ ಹಾಗೂ ಮಾಸಿದ ಚಡ್ಡಿಯನ್ನು ಧರಿಸಿದ್ದನಾದರೂ, ಹೆಮ್ಮೆಯಿಂದ ನೇರವಾಗಿ ನಿಂತು, ತನಗೆ ಬೇಕಾದ ವಸ್ತುವಿನ ಬಗ್ಗೆ ಅಂಗಡಿಕಾರನಿಗೆ ತಿಳಿಸಿ, ''ಆದರೆ ನನ್ನಲ್ಲೀಗ ಹಣವಿಲ್ಲ; ದಯವಿಟ್ಟು ನನಗಾಗಿ ಅದನ್ನು ತೆಗೆದಿಡಬಲ್ಲಿರಾ?'' ಎಂದು ಪ್ರಶ್ನಿಸಿದ.

''ಪ್ರಯತ್ನಿಸುತ್ತೇನೆ. ಇಲ್ಲಿ ಸುತ್ತಮುತ್ತಲ ಮಂದಿಯ ಬಳಿ ಇಂಥಾ ವಸ್ತುಗಳಿಗಾಗಿ ವಿನಿಯೋಗಿಸುವಂಥ ಹಣ ಅಷ್ಟಾಗಿ ಇರುವುದಿಲ್ಲವಾದ್ದರಿಂದ, ಇದನ್ನು ನಾನು ಕೆಲಸಮಯ ಇಡಬಹುದು''. ಮುಗುಳ್ನಗುತ್ತ ಅಂಗಡಿಯ ಯಜಮಾನ ಉತ್ತರಿಸಿದ.

ತನ್ನ ಹರಿದ ಟೊಪ್ಪಿಯನ್ನೇ ಸ್ಪರ್ಶಿಸಿ ಗೌರವ ಸೂಚಿಸಿದ ಹುಡುಗ ಹೊರಬಂದು, ಮೇ ತಿಂಗಳ ಸೂರ್ಯನ ಬೆಳಕಿನಲ್ಲಿ ಮುನ್ನಡೆದ ಆಗಷ್ಟೇ ಕೊಲ್ಲಿಯ ತರಂಗಗಳಿಂದ ಬೀಸಿ ಬಂದ ಹೊಸ ಕುಳಿರ್ಗಾಳಿಯು ಆತನ ಗಿಡ್ಡ ಕೂದಲನ್ನು ಸವರಿ ಚದರಿಸಿತು. ಆ ಬಾಲಕನ ದಾಪು ನಡಿಗೆಯಲ್ಲೊಂದು ಉದ್ದೇಶವಿತ್ತು. ಆತ ಯಾರಿಗೂ ತಿಳಿಸದೆ, ತಾನೇ 'ಐದು ಡಾಲರ್' ಸಂಪಾದಿಸುವವನಿದ್ದ!

ಪಕ್ಕದ ರಸ್ತೆಯಲ್ಲಿ ಕುಟ್ಟುವ ಶಬ್ದ ಕೇಳಿಸುತ್ತಿದ್ದಂತೆಯೇ ರ್‍ಯೂಬೆನ್‌ನ ಮನದಲ್ಲಿ ಉಪಾಯವೊಂದು ಸ್ಫುರಿಸಿತು.

ಶಬ್ದ ಬಂದ ದಿಕ್ಕಿಗೆ ಧಾವಿಸಿ, ಒಂದು ಕಟ್ಟಡ ನಿರ್ಮಾಣವಾಗುತ್ತಿದ್ದ ಸ್ಥಳದಲ್ಲಿ ಬಂದು ನಿಂತ. ಬೇರೊಬರ್ಟ್ಸ್‌ನ ಜನತೆ ತಾವೇ ಸ್ವತಃ ಕಟ್ಟಿಕೊಳ್ಳುವ ತಮ್ಮ ಮನೆಗಳಿಗಾಗಿ, ಗೋಣಿ ಚೀಲದಲ್ಲಿ ತುಂಬಿಸಿಟ್ಟ ಮೊಳೆಗಳನ್ನು ಸ್ಥಳೀಯ ಕಾರ್ಖಾನೆಗಳಿಂದ ಕೊಂಡುಕೊಳ್ಳುತ್ತಿದ್ದರು. ಕೆಲವು ಸಲ ಆ ಗೋಣಿಚೀಲಗಳನ್ನು ಅವರು ಕಟ್ಟಡವನ್ನು ಕಟ್ಟುವ ಗಡಿಬಿಡಿಯಲ್ಲಿ ಬಿಸುಡುತ್ತಿದ್ದರು. ಅವನ್ನು ತಾನು ಪುನಃ ಕಾರ್ಖಾನೆಗಳಿಗೆ, ಐದು ಸೆಂಟ್‌ಗೆ ಒಂದರಂತೆ ಮಾರಬಹುದೆಂದು ಆತನಿಗೆ ತಿಳಿದಿತ್ತು.

ಆ ದಿನ ಆತನಿಗೆ ಎರಡು ಚೀಲಗಳು ದೊರೆತವು. ಅವನ್ನು ಆತ ಸಂಚಾರೀ ಮರದ ಕಾರ್ಖಾನೆಗೆ ಕೊಂಡೊಯ್ದು, ಮೊಳೆಗಳನ್ನು ಕಟ್ಟುಕಟ್ಟಿ ಇಡುವುದರ ಮೇಲುಸ್ತುವಾರಿ ಮಾಡುವ ವ್ಯಕ್ತಿಗೆ ಮಾರಿದ. ಎರಡು ಕಿಲೋಮೀಟರ್ ದೂರದಲ್ಲಿದ್ದ ತನ್ನ ಮನೆಯತ್ತ

ನವೆಂಬರ್ ೨೦೦೦ದ ರೀಡರ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಇಂದ್ರ ಶರ್ಮ ಅವರ ''ಎ ಬಾಯ್ ವಿತ್ ಎ ಮಿಶನ್'' ಎಂಬ ಲೇಖನದ ಅನುವಾದ

ಒಡಿದ ಹುಡುಗನ ಮುಷ್ಟಿಯ ಬಿಗಿತದೊಳಗೆ ಎರಡು ಸಣ್ಣ ಐದು ಸೆಂಟ್ಸ್ ನಾಣ್ಯಗಳಿದ್ದುವು.

ರ್ಯೂಬೆನ್‌ನ ಮನೆಯ ಬಳಿ ಇದ್ದ ಪುರಾತನ ಉಗ್ರಾಣವೊಂದು, ಈಗ ಮೇಕೆಗಳ ಹಾಗೂ ಕೋಳಿಗಳ ಪರಿವಾರಗಳಿಗೆ ಆವಾಸ ಸ್ಥಾನವಾಗಿತ್ತು. ಅಲ್ಲಿ ದೊರಕಿದ ತುಕ್ಕು ಹಿಡಿದ ಒಂದು ಅಡುಗೆ ಸೋಡಾದ ತಗಡಿನ ಡಬ್ಬಿಯೊಳಗೆ ಈ ನಾಣ್ಯಗಳನ್ನು ಹಾಕಿದ ರ್ಯೂಬೆನ್, ಕಣಜದ ಅಟ್ಟವನ್ನೇರಿ, ಅಲ್ಲಿ ಪೇರಿಸಿಟ್ಟ, ಸುವಾಸನೆಯನ್ನು ಬೀರುತ್ತಿದ್ದ ಹುಲ್ಲಿನ ರಾಶಿಯ ಅಡಿಯಲ್ಲಿ ಅದನ್ನು ಅಡಗಿಸಿಟ್ಟ.

ರ್ಯೂಬೆನ್ ಮನೆಗೆ ಬರುವಷ್ಟರಲ್ಲಿ ರಾತ್ರಿಯೂಟದ ವೇಳೆ ಆಗಿತ್ತು. ಅಡುಗೆ ಮನೆಯ ದೊಡ್ಡ ಮೇಜಿನ ಬಳಿ ಕುಳಿತಿದ್ದ ಅವನ ತಂದೆ ಮೀನಿನ ಬಲೆಯನ್ನು ಸರಿಪಡಿಸುತ್ತಿದ್ದ. ಕಪ್ಪಾದ ಅಡುಗೆಯ ಒಲೆಗಳ ಬಳಿಯಲ್ಲಿದ್ದ ಡೋರಾ ಭೋಜನಕ್ಕೆ ಅಣಿಗೊಳಿಸುತ್ತಿದ್ದಂತೆಯೇ, ರ್ಯೂಬೆನ್ ಮೇಜಿನ ಬಳಿ ತನ್ನ ಜಾಗದಲ್ಲಿ ಕುಳಿತುಕೊಂಡ.

ತಾಯಿಯನ್ನು ನೋಡಿ, ರ್ಯೂಬೆನ್ ಮುಗುಳುನಗೆ ಬೀರಿದ. ಹಗಲನ್ನು ಮುಟ್ಟುವಷ್ಟು ಉದ್ದವಿದ್ದ ಡೋರಾಳ ಸುಂದರ ಕೇಶರಾಶಿಗೆ , ಕಿಟಕಿಯಿಂದ ತೂರಿಬಂದ ಸೂರ್ಯರಶ್ಮಿ ಹೊಂಬಣ್ಣದ ಮೆರುಗನ್ನು ನೀಡಿತ್ತು. ಐದು ಅಡಿ ಮೂರು ಇಂಚು ಎತ್ತರವಿದ್ದ, ತೆಳ್ಳಗಿನ ಮೈಕಟ್ಟಿನ ಸುಂದರಿ ಡೋರಾ, ಎಲ್ಲರನ್ನೂ ತನ್ನೆಡೆಗೆ ಸೆಳೆದಿಟ್ಟುಕೊಂಡಂಥ , ಮನೆಯ ಕೇಂದ್ರ ಬಿಂದುವೇ ಆಗಿದ್ದಳು.

ಹಳೆಯ ಸಿಂಗರ್ ಹೊಲಿಗೆ ಯಂತ್ರದಿಂದ ಮನೆಮಂದಿಗೆಲ್ಲಾ ವಸ್ತ್ರಗಳನ್ನು ಹೊಲಿಯುವುದು, ಅಡಿಗೆ ಮಾಡುವುದು, ರೊಟ್ಟಿ ಬೇಯಿಸುವುದು, ತರಕಾರಿ ಬೆಳೆಸುವುದು, ಮೇಕೆಗಳ ಹಾಲು ಕರೆಯುವುದು, ಮಕ್ಕಳ ಕೊಳೆಯಾದ ಬಟ್ಟೆಯನ್ನು ತಿಕ್ಕೀ ತಿಕ್ಕೀ ಒಗೆಯುವುದು ಮುಂತಾದ ಆಕೆಯ ಎಡೆಬಿಡದ ನಿರಂತರ ಕಾಯಕಗಳಿಗೆ ಕೊನೆ ಎಂಬುದೇ ಇರಲಿಲ್ಲ. ಆದರೂ ಅವಳು ಹರ್ಷವದನೆ ಆಗಿದ್ದಳು. ತನ್ನ ಕುಟುಂಬ ಹಾಗೂ ಅದರ ಅಭ್ಯುದಯಕ್ಕಾಗಿ ಆಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದಳು.

ಪ್ರತಿದಿನವೂ ತನ್ನ ನಿತ್ಯದ ಕೆಲಸಕಾರ್ಯಗಳನ್ನು ಮಾಡುತ್ತ, ಶಾಲೆಗೂ ಹೋಗುತ್ತ, ಅದು ಮುಗಿದನಂತರ ಊರು ತುಂಬ ಸುತ್ತಿ ಮೊಳೆಗಳನ್ನು ತುಂಬಿಡುವಂಥ ಗೋಣಿಚೀಲಗಳನ್ನು ಒಟ್ಟು ಮಾಡುತ್ತಿದ್ದ ರ್ಯೂಬೆನ್. ಕೇವಲ ಎರಡೇ ಕೋಣೆಗಳಿದ್ದ ಆ ಶಾಲೆಗೆ ಬೇಸಿಗೆ ರಜೆಯನ್ನು ಸಾರಿದಾಗ ರ್ಯೂಬೆನ್ ನಷ್ಟು ಸಂತಸಪಟ್ಟ ವಿದ್ಯಾರ್ಥಿ ಬೇರೊಬ್ಬನಿರಲಿಲ್ಲ. ಈಗ ತನ್ನ ಧ್ಯೇಯ ಸಾಧನೆಗೆ ಮೀಸಲಿಡಲು ಆತನಿಗೆ ಬೇಕಾದಷ್ಟು ವೇಳೆ ದೊರಕಿತ್ತು.

ಇಡೀ ಬೇಸಿಗೆಯ ಉದ್ದಕ್ಕೂ, ಮನೆಯ ಇತರ ಕೆಲಸಗಳಾದ ಕಳೆಕೀಳುವುದು, ಗಿಡಕ್ಕೆ ನೀರು ಹೊಯ್ಯುವುದು, ಸೌದೆ ಕಡಿಯುವುದು, ನೀರು ತರುವುದು ಇತ್ಯಾದಿ ಸತತ ಕೆಲಸಕಾರ್ಯಗಳ ಮಧ್ಯದಲ್ಲಿಯೂ, ತನ್ನ ಗುಪ್ತಕಾರ್ಯಾಚರಣೆಯನ್ನು ಮುಂದುವರಿಸಿದ್ದ!

ದಿನಗಳು ಬೇಗನೆ ಉರುಳಿ, ತೋಟದಲ್ಲಿಯ ತರಕಾರಿಗಳನ್ನು ಕೊಯ್ದು, ಹಾಳಾಗದಂತೆ ಡಬ್ಬಿಯಲ್ಲಿ ಶೇಖರಿಸಿಡುವಷ್ಟರಲ್ಲಿ ಶಾಲೆ ಪುನರಾರಂಭವಾಯ್ತು. ಶೀಘ್ರದಲ್ಲಿಯೇ ಮರಗಿಡಗಳ ಎಲೆಗಳು ಉದುರಿ, ಕೊಲ್ಲಿಯ ಕಡೆಯಿಂದ ತಣ್ಣನೆ ಗಾಳಿಯ ಹೊಡೆತ ಪ್ರಾರಂಭವಾಯಿತು. ಆಗಲೂ ಬೀದಿಗಳಲ್ಲಿ ಸುತ್ತುತ್ತ, ತನ್ನ ಅಪೂರ್ವ ನಿಧಿಯಾದ ಗೋಣಿಚೀಲವನ್ನು ಹುಡುಕುವುದರಲ್ಲೇ ನಿರತನಾಗಿದ್ದ ಪುಟ್ಟ ರ್ಯೂಬೆನ್.

ಆಗಾಗ್ಗೆ ಶೀತದಿಂದಲೂ, ಅತ್ಯಂತ ಬಳಲಿಕೆಯಿಂದಲೂ, ಹಸಿವಿನಿಂದಲೂ

ಬಾಧೆಯುಂಟಾಗುತ್ತಿದ್ದರೂ, 'ಆ ಅಂಗಡಿಯಲ್ಲಿಯ ವಸ್ತು'ವಿನ ನೆನಪೇ ಈ ಕಾರ್ಯವನ್ನು ನಿಲ್ಲಿಸದೆ, ಮುಂದುವರಿಯುವಂತೆ ಮಾಡುತ್ತಿತ್ತು. ಎಷ್ಟೋ ಸಲ ಆತನ ತಾಯಿ ''ರ್‍ಯೂಬೆನ್, ನೀನೆಲ್ಲಿದ್ದೆ ? ರಾತ್ರಿಯೂಟಕ್ಕಾಗಿ ನಿನಗೆ ಕಾಯುತ್ತಿದ್ದೆವು'' ಎನ್ನುತ್ತಿದ್ದಳು.

''ಆಟ ಆಡುತ್ತಿದ್ದೆ, ಕ್ಷಮಿಸು ಅಮ್ಮ'' ಎನ್ನುತ್ತಿದ್ದ ಮಗನ ಮುಖವನ್ನು ನೋಡಿ, 'ಹುಡುಗರು' ಎಂದು ತಲೆಯಾಡಿಸುತ್ತಿದ್ದಳಾಕೆ.

ಕಡೆಯಲ್ಲಿ ವಸಂತದಾಗಮನವಾಗಿ ಎಲ್ಲೆಡೆ ಹಚ್ಚ ಹಸುರು ಕಂಗೊಳಿಸಲು , ರ್‍ಯೂಬೆನ್‌ನ ಉತ್ಸಾಹ ಪುಟಿದೆದ್ದಿತು. 'ಸಕಾಲ ಪ್ರಾಪ್ತವಾಗಿದೆ!''

ಓಡಿ ಹೋಗಿ ಹಳೆಯ ಉಗ್ರಾಣದ ಅಟ್ಟವನ್ನೇರಿ, ಹುಲ್ಲಿನ ರಾಶಿಯ ಅಡಿಯಿಂದ ಡಬ್ಬಿಯನ್ನೆಳೆದು, ಮುಚ್ಚಳವನ್ನು ತೆಗೆದ. ನಡುಗುವ ಕೈಗಳಿಂದ ನಾಣ್ಯಗಳನ್ನು ಕೆಳಗೆ ಚೆಲ್ಲಿ, ಎಣಿಸ ತೊಡಗಿದ.

ಪುನಃ ಪುನಃ ಎಣಿಸಿದ! ಇನ್ನು ಇಪ್ಪತ್ತು ಸೆಂಟ್ಸ್ ಮಾತ್ರ ಬೇಕಿತ್ತು. ಈ ಊರಿನಲ್ಲಿ ಇನ್ನೂ ಎಲ್ಲಿಯಾದರೂ ಬಿಸುಟ ಗೋಣಿ ಚೀಲಗಳು ಸಿಗಬಹುದೆ?

ಇನ್ನೂ ನಾಲ್ಕು ಗೋಣಿಚೀಲಗಳನ್ನು ಹುಡುಕಿ, ಆ ದಿನ ಮುಗಿಯುವದರೊಳಗೆ ಅವನ್ನು ಮಾರಬೇಕಿತ್ತು. ಡಬ್ಬಿಯನ್ನು ಪುನಃ ಅಲ್ಲಿಯೇ ಅಡಗಿಸಿಟ್ಟು, ಚೀಲಗಳನ್ನರಸುತ್ತಾ ಬೀದಿಗಿಳಿದು ಓಡಿದ ರ್‍ಯೂಬೆನ್.

ನೆರಳುಗಳು ಉದ್ದುದ್ದವಾಗುತ್ತಾ ಇರುವಾಗ ರ್‍ಯೂಬೆನ್ ಕಾರ್ಖಾನೆಯ ಬಳಿಗೆ ಬಂದ. ಗೋಣಿಚೀಲ ತೆಗೆದುಕೊಳ್ಳುವವನು ಆಗಷ್ಟೇ ಬೀಗ ಹಾಕುವುದರಲ್ಲಿದ್ದ.

''ದಯವಿಟ್ಟು ಈಗಲೇ ಬೀಗ ಹಾಕಿಬಿಡಬೇಡಿ''.

ದನಿ ಬಂದ ದಿಕ್ಕಿಗೆ ತಿರುಗಿ ನೋಡಿದ ಆತನಿಗೆ ಬೆವರಿ ಕೊಳಕಾದ ರ್‍ಯೂಬೆನ್ ಕಂಡ.

''ನಾಳೆ ಬಾರೋ ಹುಡುಗ'' ಎಂದನವ.

''ನಾನು ಈಗಲೇ ಈ ಚೀಲಗಳನ್ನು ಮಾರಬೇಕು. ದಯವಿಟ್ಟು ಇಲ್ಲ ಎನ್ನಬೇಡಿ'' ಎಂದು ಗೋಗರೆಯುವ ಬಾಲಕನ ಸ್ವರದಲ್ಲಿ ಆತ ನಡುಕವನ್ನು ಗುರುತಿಸಿದ. ಯಾವ ಗಳಿಗೆಯಲ್ಲಾದರೂ ರ್‍ಯೂಬೆನ್‌ನ ಕಣ್ಣುಗಳಿಂದ ನೀರು ತೊಟ್ಟಿಕ್ಕಬಹುದಾಗಿತ್ತು.

''ಹಣದ ಅಗತ್ಯ ಅಷ್ಟೊಂದು ಇದೆಯೇ?''

''ಅದೊಂದು ಗುಟ್ಟು!''

ಆ ವ್ಯಕ್ತಿ ಚೀಲಗಳನ್ನು ತೆಗೆದುಕೊಂಡು, ತನ್ನ ಕಿಸೆಯಿಂದ ನಾಲ್ಕು ನಾಣ್ಯಗಳನ್ನು ತೆಗೆದು ರ್‍ಯೂಬೆನ್‌ನ ಕೈಗಿತ್ತ. ಕೃತಜ್ಞತೆಗಳನ್ನು ಅಸ್ಪಷ್ಟವಾಗಿ ಗುಣುಗುಣಿಸುತ್ತ ತಿಳಿಸಿದ ಬಾಲಕ ಮನೆಗೆ ಓಡಿದ.

ಅಲ್ಲಿಂದ ತಗಡಿನ ಡಬ್ಬಿಯನ್ನು ಹಿಡಿದುಕೊಂಡು ಅಂಗಡಿಗೆ ಓಡಿದ. ನಾಣ್ಯಗಳನ್ನು ಗಲ್ಲಾಪೆಟ್ಟಿಗೆಯ ಮೇಲೆ ಸುರಿಯುತ್ತ ''ನನ್ನ ಹತ್ತಿರ ಹಣ ಇದೆ'' ಎಂದು ಅಂಗಡಿಯವನ ಮುಂದೆ ಗಂಭೀರವಾಗಿ ನುಡಿದ ರ್‍ಯೂಬೆನ್.

ಕಿಟಕಿಯ ಬಳಿ ಸಾರಿ, ರ್‍ಯೂಬೆನ್‌ನ ಅಪೂರ್ವ ಸಂಪತ್ತನ್ನು ತಂದಿತ್ತ ಅಂಗಡಿಯ ಯಜಮಾನ, ಅದರ ಧೂಳನ್ನು ಝಾಡಿಸಿ, ಒರೆಸಿ, ಒಂದು ಕಂದು ಬಣ್ಣದ ಕಾಗದದಿಂದ ಅದನ್ನು ಮೃದುವಾಗಿ ಸುತ್ತಿದ. ಚೆಂದ ಮಾಡಿ ಕಟ್ಟಿದ ಆ ಪೊಟ್ಟಣವನ್ನು ರ್‍ಯೂಬೆನ್‌ಗೆ ನೀಡಿದ.

ಓಡೋಡಿ ಮನೆ ತಲುಪಿದ ರ್‍ಯೂಬೆನ್, ಮುಂದಿನ ಬಾಗಿಲೊಳಗೆ ನುಗ್ಗಿದ. ಅಡುಗೆ ಮನೆಯಲ್ಲಿ ಒಲೆಗಳನ್ನು ಉಜ್ಜಿ ಸ್ವಚ್ಛಗೊಳಿಸುತ್ತಿದ್ದ ತಾಯಿಯ ಬಳಿಗೆ ಓಡಿಕೊಂಡೇ ಬಂದ ಆತ, ''ಇಲ್ಲಿ! ಅಮ್ಮಾ , ಇಲ್ಲಿ!'' ಎನ್ನುತ್ತ ಆ ಸಣ್ಣ ಡಬ್ಬಿಯನ್ನು, ಕೆಲಸ ಮಾಡಿ ದೊರಗಾದ ಅವಳ ಕೈಯಲ್ಲಿ ಇರಿಸಿದ.

ಕಾಗದ ಹರಿದುಹೋಗದಂತೆ ಜಾಗರೂಕತೆಯಿಂದ ಆಕೆ ಹೊರಹೊದಿಕೆಯನ್ನು ಬಿಡಿಸಿದಾಗ, ಅದರೊಳಗೆ ಒಂದು ಸುಂದರವಾದ

ನೀಲಿ ಮಖಮಲ್ಲಿನ ಆಭರಣದ ಪೆಟ್ಟಿಗೆ ಗೋಚರಿಸಿತು. ಅದರ ಮುಚ್ಚಳವನ್ನು ಎತ್ತುತ್ತಿದ್ದಂತೆ, ಕಣ್ಣೀರು ಆಕೆಯ ದೃಷ್ಟಿಯನ್ನು ಮಂದಗೊಳಿಸಿತು.

ಸಣ್ಣ ಬಾದಾಮಿ ಆಕಾರದ, ಮಹಿಳೆಯರ ಉಡುಪನ್ನು ಅಲಂಕರಿಸುವ ಪದಕದ ಮೇಲೆ ಸುವರ್ಣಾಕ್ಷರಗಳಲ್ಲಿ ''ಅಮ್ಮಾ'' ಎಂಬ ಪದವಿತ್ತು.

೧೯೪೬ನೇ ಇಸವಿಯ ಆ ದಿನ 'ತಾಯಂದಿರ ದಿನ'ವಾಗಿತ್ತು!

ಅಂಥ ಒಂದು ಉಡುಗೊರೆಯನ್ನು ಆಕೆ ಅದುವರೆಗೂ ಪಡೆದೇ ಇರಲಿಲ್ಲ. ಮದುವೆಯ ಉಂಗುರ ಬಿಟ್ಟು ಬೇರೆ ಆಭರಣವೂ ಆಕೆಯ ಬಳಿ ಇರಲಿಲ್ಲ. ಪ್ರೀತಿ-ಸಂತಸಗಳನ್ನು ಹೊರಸೂಸುವ ಸುಂದರ ಮುಗುಳುನಗೆಯೊಂದಿಗೆ ಮೌನವಾಗಿ ಮಗನನ್ನು ತಬ್ಬಿ ಹತ್ತಿರಕ್ಕೆಳೆದು ಕೊಂಡಳು ಡೋರಾ.

* * *

೧೯೪೭ರಲ್ಲಿ ಮಾರ್ಕ್ ಎರ್ಲ್ ಟೋರೊಂಟೋಗೆ ಹೋದ. ಡೋರಾ ಮತ್ತು ಮಕ್ಕಳು ಆತನಿಂದ ಕರೆ ಬರುವವರೆಗೂ ಬೇ ರೊಬರ್ಟ್ಸ್‌ನಲ್ಲಿಯೇ ಇದ್ದರು. ಎರಡು ವರ್ಷಗಳ ನಂತರ ಎರ್ಲ್ ಕುಟುಂಬ ಪುನಃ ಒಂದುಗೂಡಿತು.

೧೯೮೩ನೇ ಇಸವಿಯಲ್ಲಿ ಎಪ್ಪತ್ತೈದು ವರ್ಷದ ಡೋರಾ ಎರ್ಲ್, ಟೊರೊಂಟೋದಲ್ಲಿ ನಿಧನಳಾದಳು. ತನ್ನ ಅತ್ಯಂತ ಬೆಲೆ ಬಾಳುವ ವಸ್ತುಗಳನ್ನು ತನ್ನ ಮಗನಾದ ರ್ಯೂಬೆನ್‌ಗೆ ನೀಡಬೇಕೆಂದು ಆಕೆ ತನ್ನ ಉಯಿಲಿನಲ್ಲಿ ಸೂಚಿಸಿದ್ದಳು.

ಈಗ ಎಪ್ಪತ್ತರ ಹರೆಯವನ್ನು ಸಮೀಪಿಸಿರುವ ರ್ಯೂಬೆನ್, ತನ್ನ ಇಬ್ಬರು ಮಗಂದಿರು ಹಾಗೂ ಐವರು ಮೊಮ್ಮಕ್ಕಳೊಂದಿಗೆ ಓಂಟಾರಿಯೋದಲ್ಲಿ ವಾಸಿಸುತ್ತಿರುವನು. ಸ್ಥಿರಾಸ್ತಿ ವ್ಯವಹಾರದ ಏಜೆಂಟ್ ಆಗಿದ್ದ ಆತ ಎರಡು ವರ್ಷಗಳ ಕೆಳಗಷ್ಟೇ ನಿವೃತ್ತಿಯನ್ನು ಹೊಂದಿದ್ದ. ಆತನ ಪತ್ನಿ ಲಿಲ್ಲಿಯನ್ ನಲವತ್ತೇಳು ವರ್ಷದವಳು. ಆಕೆ ತನ್ನ ಪತಿಯ ಬಗ್ಗೆ ಹೀಗೆ ಹೇಳುತ್ತಾಳೆ: ''ತನ್ನ ತಾಯಿಗೆ ಉಡುಪನ್ನಲಂಕರಿಸುವ ಪದಕವನ್ನು ಉಡುಗೊರೆ ಇತ್ತ ಪ್ರೀತಿಯ ಬಾಲಕ ರ್ಯೂಬೆನ್, ಇಷ್ಟು ವರ್ಷವಾದರೂ ಒಂದಿನಿತೂ ಬದಲಾಯಿಸಿಲ್ಲ''.

ತಾಯಿಯ ನೆನಪಾಗುತ್ತಿದ್ದಂತೆ ರ್ಯೂಬೆನ್‌ನ ಕಣ್ಣಾಲಿಗಳು ತುಂಬಿ ಬರುತ್ತವೆ. ''ಪ್ರಪಂಚದಲ್ಲಿಯೇ ಅತ್ಯಂತ ಸುಂದರಿ ನನ್ನ ಅಮ್ಮ!'' ಎಂಬುದು ಮಗನ ಉದ್ಗಾರ!

ನಿಜ ಬೇಂದ್ರೆಯವರು ಹಾಡಿರುವಂತೆ
ಸುಗ್ಗಿ ನಗಿ ನಕ್ಕಾಗ ಮೊಗ್ಗಿ ಬಿಚ್ಚಿತ ಒಳಗ
ಹಿಗ್ಗಿ ಪಾಡಾಗಿ ಮಾಗಿಸಿತು ಹರೆಯವು
ಬಗ್ಗದ ಎದೆಯ ಬಾಗಿಸಿತು.

ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು.

-ಮಹಾಭಾರತ

ತುಳಸಿಯ ಔಷಧೀಯ ಗುಣಗಳು

ಜಿ.ಎನ್. ಅನಂತವರ್ಧನ
ಮನೆಸಂಖ್ಯೆ ೮ 'ಅತ್ರಿ' ಕಾಮಾಕ್ಷಿ -
ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು-೫೭೦ ೦೦೯

ತುಳಸಿ ಔಷಧ ಗಿಡ ಮಾತ್ರವಲ್ಲ ಬಲು ಜನಪ್ರಿಯ ಮನೆಮದ್ದಿನ ಗಿಡ ಕೂಡ. ಪ್ರಪಂಚಾದ್ಯಂತ ಇದರ ವ್ಯಾಪ್ತಿ ಇದೆ. ಮುಖ್ಯವಾಗಿ ನ್ಯೂಗಿನಿ, ಇಥಿಯೋಪಿಯ, ಅಬಿಸೀನಿಯ, ಬ್ರೆಜಿಲ್, ಜಪಾನ್, ಚೈನಾ, ಫಿಲಿಫೈನ್ಸ್, ಬರ್ಮಾ, ಇಂಡೋಚೈನಾ, ವಿಯೆಟ್ನಾಮ್, ಲಾವೋಸ್, ಕಂಬೋಡಿಯಾ, ಸಿಂಗಪುರ, ಫಿಜಿ , ಇತ್ಯಾದಿ ಕಡೆ ಲಭ್ಯ. ಇದು ಹಿಂದೂಗಳಿಗೆ ಅತಿ ಪವಿತ್ರವಾದ ಗಿಡ. ಅವರಲ್ಲಿ ಯಾವುದೇ ಪೂಜಾ ಅಥವಾ ಶುಭ ಕಾರ್ಯ ತುಲಸಿ ಇಲ್ಲದೆ ನಡೆಯುವುದಿಲ್ಲ.

ತುಳಸಿಯಲ್ಲಿ ಅನೇಕ ವಿಧಗಳಿದ್ದರೂ ಮುಖ್ಯವಾಗಿ ಎರಡನ್ನು ಗುರುತಿಸಬಹುದು : ೧. ಹಸುರು ತುಳಸಿ ೨. ಕಪ್ಪು(ಕೃಷ್ಣ) ತುಳಸಿ.

ತುಳಸಿಯ ಬಹುನಾಮಗಳು : ತುಳಸಿಯಲ್ಲಿ ಅತಿ ಹೆಚ್ಚಿನ ರಸವಿರುವುದರಿಂದ ಇದನ್ನು ''ಸುರಸ'' ಎಂದೂ ಎಲ್ಲ ಗ್ರಾಮಗಳಲ್ಲಿ ಸಮೃದ್ಧವಾಗಿ ಬೆಳೆಯುವುದರಿಂದ ''ಸುರಮ್ಯ'' ಮತ್ತು ''ಸುಲಭ'' ಎಂದೂ ಕರೆಯುತ್ತಾರೆ. ತುಂಬ ಹೂ ಬಿಡುವುದರಿಂದ ಇದು ಬಹುಮಂಜಾರಿ. ಇದನ್ನು ಆಂಗ್ಲದಲ್ಲಿ Holy Basil; ಹಿಂದಿಯಲ್ಲಿ ತುಲಸಿ ; ಸಂಸ್ಕೃತದಲ್ಲಿ ತುಳಸಿ, ವಿಷ್ಣುಪ್ರಿಯ; ಲ್ಯಾಟಿನ್ ಭಾಷೆಯಲ್ಲಿ ಓಸಿಮುವ್ ಸಾಕ್‌ಟಮ್. ತುಳಸಿಯ ಎಲೆಗಳು, ಬೀಜಗಳು, ಕಾಂಡ ಮತ್ತು ಬೇರು ಉಪಯೋಗಕ್ಕೆ ಬರುತ್ತವೆ.

ಕ್ರಿಯೆಗಳು : ಕಫನಿವಾರಿಣಿ, ಜ್ವರವಿರೋಧಿ, ಉದ್ದೀಪಕ, ಜೀರ್ಣಕಾರಿ ಮತ್ತು ವಾತಹರ.

ಗುಣಗಳು : ತುಸು ಒಗರು ಮತ್ತು ಖಾರ, ಸುಗಂಧಯುಕ್ತ ಹಾಗೂ ಉತ್ತೇಜಕ.

ಪರಿಹಾರಗಳು : ಆಯುರ್ವೇದದಲ್ಲಿ ಇದನ್ನು ಜೀರ್ಣಶಕ್ತಿಯ ವ್ಯತ್ಯಾಸ ಮತ್ತು ಕಫ ಹಾಗೂ ವಾತ ರೋಗಗಳಲ್ಲಿ ಉಪಯೋಗಿಸಲಾಗುವುದು. ಜ್ವರ, ಹುಳು, ಚರ್ಮಕಾಯಿಲೆ (ಕುಷ್ಠರೋಗ ಸೇರಿ) ಮತು ಮೂತ್ರದೋಷ ಇತ್ಯಾದಿ ರೋಗಗಳಲ್ಲಿ ಉಪಯೋಗ. ಹೃದಯದ ಉತ್ತೇಜನಕ್ಕೆ ಇದು ಬಲು ಉಪಯುಕ್ತ. ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗೆ ಮತ್ತು ಸಾಮಾನ್ಯ ನಿತ್ರಾಣ(ನಿಶ್ಶಕ್ತಿ), ಕಡಿಮೆ ರಕ್ತದೊತ್ತಡ ಮತ್ತು ವಿಷ ಕೀಟಗಳ ಕಡಿತಕ್ಕೆ ಪರಿಣಾಮಕಾರಿ.

ಪುಪ್ಪುಸದ ಕಾಯಿಲೆ, ತೀವ್ರ ಮತ್ತು ನಿರಂತರ ಶೀತ, ಕೆಮ್ಮು, ಸೈನಸೈಟೀಸ್ ಹಾಗೂ ಅಸ್ತಮಾ ಕಾಯಿಲೆಗಳಿಗೆ ಬಹಳ ಪ್ರಯೋಜನಕಾರಿ. ಶೀತಜ್ವರ(ಇನ್‌ಫ್ಲೂಎಂಜಾ), ಮಲೇರಿಯ, ಟೈಫಾಯಿಡ್(ಆಂತ್ರಜ್ವರ), ಸಿಡುಬು, ಶೀತಾಳ ಸಿಡುಬು (ಚಿಕನ್ ಪಾಕ್ಸ್) ಮತ್ತು ದಡಾರ (ಮೀಸಲ್ಸ್) ಇತ್ಯಾದಿ ಸಾಂಕ್ರಾಮಿಕ ರೋಗಗಳಿಗೆ ಇದು ಬಲು ಉಪಕಾರಿ. ಸಕ್ಕರೆ ಕಾಯಿಲೆ ಉಳ್ಳವರಲ್ಲಿ ಇದರ ಸೇವನೆಯು ಆಶ್ಚರ್ಯಕರ ಗಮನಾರ್ಹ ಫಲಿತಾಂಶ ನೀಡಿದೆ.

ತುಳಸಿಯು ರೋಗವನ್ನು ವಾಸಿಮಾಡುವುದಲ್ಲದೆ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ತಡೆಗಟ್ಟುತ್ತದೆ. ವಾಯುಮಾಲಿನ್ಯ, ಜಲಮಾಲಿನ್ಯ ಇತ್ಯಾದಿ ಪರಿಸರದ ನಿಯಂತ್ರಣದಲ್ಲಿ ಇದು ಬಹಳ ಮುಖ್ಯ ಕಾರ್ಯವಹಿಸುತ್ತದೆ.

ಅಂತರಂಗಿಕ (ದೇಹದೊಳಗಿನ) ಉಪಯೋಗಗಳು:

೧. ಜ್ವರ : ಸಾಮಾನ್ಯ ಜ್ವರ ಮತ್ತು ಮಲೇರಿಯ ಜ್ವರ, ಶೀತ ಹಾಗೂ ಎಲುಬು

ಅಕ್ಟೋಬರ್ ೨೦೦೦ ದ ಭವನ್ಸ್ ಜರ್ನಲಿನಲ್ಲಿ ವೈದ್ಯ ಸುರೇಶ ಚತುರ್ವೇದಿ ಅವರು ಬರೆದ 'ಮೆಡಿಸಿನಲ್ ಪ್ರಾಪರ್ಟೀಸ್ ಆಫ್ ತುಳಸಿ' ಲೇಖನದ ಕನ್ನಡಾನುವಾದ.

ಗಳಲ್ಲಿ ನೋವು, ಈ ಖಾಯಿಲೆಗಳಿಗೆ ತುಳಸಿ ಎಲೆ ರಸವನ್ನು ಜೇನಿನಲ್ಲಿ ಮಿಶ್ರಣ ಮಾಡಿ ದಿನಕ್ಕೆರಡು ಬಾರಿ ಸೇವಿಸಬೇಕು.

೨. ಶೀತ ಮತ್ತು ಕೆಮ್ಮು : ತೀವ್ರ ಶೀತ ಹಾಗೂ ಕೆಮ್ಮಿಗೆ ತುಳಸಿ ಎಲೆಯ ರಸ, ಶುಂಠಿ ರಸ ಮತ್ತು ವಿಳ್ಯದೆಲೆಯ ರಸವನ್ನು ಜೇನಿನಲ್ಲಿ ತೆಗೆದುಕೊಳ್ಳಬೇಕು.

೩. ಹುಳು: ಹೊಟ್ಟೆ ಹುಳುವಿಗೆ ವಯಸ್ಸಿಗನುಗುಣವಾಗಿ ಐದರಿಂದ ಹತ್ತು ತುಳಸಿ ಎಲೆಯನ್ನು ಬೆಲ್ಲದೊಂದಿಗೆ ಜಗಿದು ತಿನ್ನುವುದು.

೪. ಯಕೃತ್ತು ಕಾಯಿಲೆ: ಮಕ್ಕಳ ಯಕೃತ್ತು ಕಾಯಿಲೆಗೆ ತುಳಸಿ ಎಲೆಯ ರಸ ಮತ್ತು ಲೋಳೆ ಸರದ ರಸ ಸೇವಿಸಬೇಕು.

೫. ಅಪಸ್ಮಾರ(ಮೂರ್ಛೆ ರೋಗ) : ತುಳಸಿ ರಸಕ್ಕೆ ಸಣ್ಣ ಕಲ್ಲುಪ್ಪು ಸೇರಿಸಿ ಹನಿಯನ್ನು ಮೂಗಿಗೆ ಬಿಡುವುದು.

೬. ಹೊಟ್ಟೆ ನೋವು: ಹದಿನೈದು ತುಳಸಿಎಲೆ, ಸ್ವಲ್ಪ ಕಲ್ಲುಪ್ಪು ಹಾಕಿ ಕಷಾಯ ತಯಾರಿಸಿ . ಇದು ವಾಯು ತೊಂದರೆ, ಜಠರಗರುಳಿನ ಉರಿಯೂತಕ್ಕೆ ಉಪಕಾರಿ, ಹಾಗೂ ಅಸ್ತಮಾ ಕಾಯಿಲೆಗೂ ಸಹಕಾರಿ.

೭. ಭೇದಿ : ಹತ್ತು ತುಳಸಿ ಎಲೆಗಳನ್ನು ದನದ ಹಾಲಿನಲ್ಲಿ ಅರೆದು ದಿನಕ್ಕೆರಡು ಸಲ ತೆಗೆದುಕೊಳ್ಳುವುದು.

೮. ವಾಂತಿ: ಒಂದು ಚಾ ಚಮಚ ತುಳಸಿ ರಸಕ್ಕೆ ಸ್ವಲ್ಪ ಜೇನು ಸೇರಿಸಿ ಸೇವಿಸಿದರೆ ತತ್‌ಕ್ಷಣ ವಾಂತಿ ತಹಬಂದಿಗೆ ಬರುತ್ತದೆ.

ಬಾಹ್ಯರೂಪದ (ದೇಹದ ಹೊರಗಿನ) ಉಪಯೋಗಗಳು :

೧. ರಿಂಗ್‌ವರ್ಮ್: ತುಳಸಿ ರಸವನ್ನು ರಿಂಗ್‌ವರ್ಮ್ ಹೊಂದಿದ ಸ್ಥಳಕ್ಕೆ ದಿನಕ್ಕೆರಡು ಅಥವಾ ಮೂರು ಸಲ ಹಚ್ಚಬೇಕು.

೨. ಕಿವಿ ನೋವು : ಎರಡು ಮೂರು ಬಿಂದು ತುಳಸಿ ರಸಕ್ಕೆ ಸ್ವಲ್ಪ ಕರ್ಪೂರ ಮಿಶ್ರ ಮಾಡಿ ದಿನಕ್ಕೆ ಎರಡು ಬಾರಿ ಕಿವಿಗೆ ಹಾಕಬೇಕು.

೩. ಹಲ್ಲು ನೋವು : ತುಳಸಿ ಎಲೆಯನ್ನು ಕರಿಮೆಣಸಿನೊಂದಿಗೆ ಅರೆದು ಸಣ್ಣ ಗುಳಿಗೆ ಮಾಡಿ ನೋವಿರುವ ಹಲ್ಲಿನಲ್ಲಿ ಇಟ್ಟುಕೊಳ್ಳಬೇಕು.

೪. ಹಾವು ಕಡಿತ : ಹಾವು ಕಡಿದಾಗ ತುಳಸಿಯ ಬೇರನ್ನು ನೀರಲ್ಲಿ ಅರೆದು ಕಚ್ಚಿದ ಗಾಯಕ್ಕೆ ಲೇಪಿಸಬೇಕು. ತುಳಸಿ ಎಲೆಯನ್ನು ಅರ್ಧ ಗಂಟೆಗೊಮ್ಮೆ ತಿನ್ನುತ್ತಿರಬೇಕು.

೫. ಚರ್ಮ ಕಾಯಿಲೆ : ಪ್ರಾತಃಕಾಲದಲ್ಲಿ ಐದು ತುಳಸಿ ಎಲೆಗಳನ್ನು ಜಗಿದು ತಿನ್ನಬೇಕು, ಸಂಜೆ ಸೂರ್ಯ ಕಂತುವ ಮುನ್ನ ಐದು ಎಲೆ ತಿನ್ನಬೇಕು. ತುಳಸಿ ಎಲೆಯನ್ನು ಅರೆದು ಪೇಸ್ಟು ತಯಾರಿಸಿ ಅದಕ್ಕೆ ನಿಂಬೆರಸ ಮಿಶ್ರ ಮಾಡಿ ಕಾಯಿಲೆ ಇರುವ ಭಾಗಕ್ಕೆ ಹಚ್ಚಬೇಕು.

ಗಂಟಲು, ಉಸಿರಾಟ, ಜೀರ್ಣಕ್ರಿಯೆ, ಯಕೃತ್ತು ಮತ್ತು ಇತರ ಇಂದ್ರಿಯಗಳು ಸಮರ್ಪಕವಾಗಿ ಕೆಲಸ ಮಾಡಲು ಕರಿತುಳಸಿ (ಕೃಷ್ಣ ತುಳಸಿ) ಬಹಳ ಪ್ರಯೋಜನಕಾರಿ.

ಅರ್ಬುದ ರೋಗ : ಎಲ್ಲ ರೀತಿಯ ಅರ್ಬುದ ರೋಗಗಳಿಗೂ ೫೦ಗ್ರಾಂವ್ ಮೊಸರಿಗೆ ೧೦-೧೫ ತುಳಸಿ ಎಲೆಯ ಸರಿಯನ್ನು(ಪೇಸ್ಟ್) ಹಾಕಿ ದಿನ ಬೆಳಗ್ಗೆ ಖಾಲಿ ಹೊಟ್ಟೆಗೆ ತೆಗೆದುಕೊಳ್ಳಬೇಕು. (ಮೊಸರಿಲ್ಲದಿದ್ದ ಪಕ್ಷದಲ್ಲಿ ಜೇನು ಉಪಯೋಗಿಸಬಹುದು). ಇದರಿಂದ ರೋಗ ಗುಣವಾಗದಿದ್ದರೂ ಕಾಯಿಲೆ ಹಬ್ಬದಂತೆ ಎತಡೆಯುತ್ತದೆ .

ಬಂಜೆತನ: ತುಳಸಿಯ ಬೀಜ ಬಂಜೆತನಕ್ಕೆ ದಿವ್ಯ ಔಷಧಿ. ಒಂದು ಗ್ರಾಮ್ ತುಳಸಿ ಬೀಜದ ಪುಡಿಯನ್ನು ಬೆಲ್ಲದೊಂದಿಗೆ ಮಿಶ್ರ ಮಾಡಿ ದಿನಕ್ಕೆರಡು ಸಲ ತೆಗೆದುಕೊಳ್ಳಬೇಕು.

ಮಧುಮೇಹ(ಸಕ್ಕರೆ ರೋಗ) : ಹತ್ತು ತುಳಸಿ ಎಲೆಗಳನ್ನು ಬೆಳಗ್ಗೆ ಖಾಲಿ ಹೊಟ್ಟೆಗೆ ತೆಗೆದುಕೊಳ್ಳಬೇಕು.

ಜಂಗಮವಾಣಿಯಿಂದ ಸ್ಥಗಿತವಾದ ಜೀವಂತವಾಣಿ

ಡಿ.ವಿ.ಶಾಮಣ್ಣ
ನಂ.೧೦೯೧, 'ಆರಭಿ', ೧ನೇ ಮೇನ್,
೩ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩

'ಮಾಹಿತಿ ಕ್ರಾಂತಿ'ಯ ಆನೆ ನಡೆಯಲ್ಲಿ ಒಂದು ತಮಾಷೆ ನಡೆಯಿತು: ನಾವೆಲ್ಲ ಒಬ್ಬರನ್ನೊಬ್ಬರು ಮಾತನಾಡಿಸುವುದನ್ನು ನಿಲ್ಲಿಸಿಬಿಟ್ಟೆವು.

ಈಚೆಗೆ ಸ್ನೇಹಿತರೊಬ್ಬರ ಜೊತೆ ಪಾರ್ಕಿನಲ್ಲಿ ಸುತ್ತಾಡುತ್ತಿದ್ದೆ. ಸಂಜೆ ಸೊಗಸಾಗಿತ್ತು, ನಾವಿಬ್ಬರೂ ಉಲ್ಲಾಸದಿಂದ ಮಾತನಾಡುತ್ತಾ ನಡೆಯುತ್ತಿದ್ದೆವು. ನನ್ನ ಸ್ನೇಹಿತರ ಮೊಬೈಲ್ ಫೋನ್(ಜಂಗಮವಾಣಿ) ಸದ್ದು ಮಾಡಿ ನಮ್ಮ ಸಂಭಾಷಣೆಗೆ ಅಡ್ಡಿಮಾಡಿತು- ಈ ಸಂಭಾಷಣೆಯಿಂದ ನಾನು ದೂರವಾಗಿ ಅದೃಶ್ಯನಾಗಿಬಿಟ್ಟೆ.

ಜಂಗಮವಾಣಿಯಲ್ಲಿ ಮಾತನಾಡುತ್ತಿದ್ದ ಜನರಿಂದ ಪಾರ್ಕ್ ತುಂಬಿಹೋಗಿತ್ತು. ಯಂತ್ರದೊಡನೆ ಸಂಭಾಷಣೆಯಲ್ಲಿ ಮಗ್ನರಾಗಿದ್ದ ಇವರುಗಳು ತಮ್ಮ ಮುಂದೆ ನಡೆದು ಹೋಗುತ್ತಿದ್ದವರನ್ನು ಗಮನಿಸುವುದಾಗಲೀ, ನೋಡಿ ನಗುವುದಾಗಲೀ, ಮಕ್ಕಳನ್ನು ಮಾತಾಡಿಸುವುದಾಗಲೀ, ಅವರ ನಾಯಿಮರಿಗಳನ್ನು ನಿಂತು ಮುದ್ದಿಸುವುದಾಗಲೀ- ಏನನ್ನೂ ಮಾಡುತ್ತಿರಲಿಲ್ಲ. ಯಂತ್ರದಿಂದ ಬರುತ್ತಿದ್ದ ಬಂಧನಮುಕ್ತ ಎಲೆಕ್ಟ್ರಾನಿಕ್ ಧ್ವನಿಯು ಮಾನವ ಸಂಪರ್ಕಕ್ಕಿಂತ ಉತ್ತಮವೆಂಬುದು ಸ್ಪಷ್ಟವಾಗಿತ್ತು- ಸ್ಥಾವರಲಿಂಗಕ್ಕಿಂತ ಜಂಗಮವಾಣಿಲೇಸು?

ದೂರವಾಣಿಯು ನಿಮ್ಮನ್ನು ದೂರವಿದ್ದವರೊಡನೆ ಸಂಬಂಧ ಕಲ್ಪಿಸುವ ಸಾಧನವಾಗಿತ್ತು. ಈಗ ಅದು ನಿಮ್ಮ ಪಕ್ಕದಲ್ಲಿದ್ದವರನ್ನೇ ದೂರಮಾಡುವ ಯಂತ್ರವಾಗಿದೆ. ಈಚೆಗೆ ನಾನು ಮತ್ತು ನನ್ನ ಮೂರು ಮಿತ್ರರು ಹರಟೆ ಹೊಡೆಯುತ್ತಾ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದೆವು. ವಾಹನ ಚಾಲಕ ನಮ್ಮೆಲ್ಲರನ್ನೂ ಸುಮ್ಮನಿರಲು ಹೇಳಿದ- ಆತನ ಜಂಗಮವಾಣಿಯಲ್ಲಿ ಮತ್ತೊಂದು ತುದಿಯಲ್ಲಿದ್ದವರ ಮಾತು ಸರಿಯಾಗಿ ಕೇಳುತ್ತಿರಲಿಲ್ಲವಂತೆ. ಪರಿಣಾಮ: ಹೆದ್ದಾರಿಯಲ್ಲಿ ಖುಷಿಯಿಂದ ಚಲಿಸುತ್ತಿದ್ದ ನಾಲ್ಕು ಮಿತ್ರರಿಗೂ ಮಾತನಾಡಲು ಅವಕಾಶವಿಲ್ಲ. ಸಂಪರ್ಕವನ್ನು ಸುಲಭ ಮಾಡಲೆಂದು ಕಂಡುಹಿಡಿದ ಸಾಧನವೊಂದು ನಾವು ಮಾತಾಡದಂತೆ ಮಾಡಿತ್ತು!

ಪರಸ್ಪರ ಸಂಪರ್ಕವನ್ನು ಹೆಚ್ಚುಮಾಡುವ ತಂತ್ರವಿದ್ಯೆ ಬಂದಂತೆಲ್ಲಾ, ನನಗೇಕೋ ಇತರರಿಂದ ಹೆಚ್ಚು ಹೆಚ್ಚು ದೂರವಾದಂತೆ ಭಾಸವಾಗುತ್ತದೆ. ಸಂಪರ್ಕ ತಂತ್ರವಿದ್ಯೆಯ ಪ್ರತಿಯೊಂದು ಮುನ್ನಡೆಯೂ ಮಾನವ ಸಂಪರ್ಕದ ಅನ್ಯೋನ್ಯತೆಗೆ ತಡೆಯಾಗಿದೆ. ಈಗಂತೂ ಇ-ಮೇಲ್ ಮತ್ತು ಇಂಟರ್‌ನೆಟ್‌ನ ದಿಢೀರ್ ಸಂದೇಶ ರವಾನೆ ಸೌಲಭ್ಯಗಳಿಂದಾಗಿ ಒಬ್ಬರನ್ನೊಬ್ಬರು ನೋಡದೆ, ಮಾತಾಡದೆ ಸಂಪರ್ಕಿಸಬಹುದು. ವಾಯ್ಸ್ ಮೇಲ್ (ಧ್ವನಿಟಪ್ಪಾಲು) ಸೌಕರ್ಯವಿದ್ದರಂತೂ ಯಾರನ್ನೂ ಭೇಟಿಮಾಡಲು ಪ್ರಯತ್ನಿಸದೆಯೇ ಸಂಪೂರ್ಣ ಸಂಭಾಷಣೆಗಳನ್ನು ನಿರ್ವಹಿಸಬಹುದು. ನಮ್ಮಮ್ಮನಿಂದ ನನಗೇನಾದರೂ ಪ್ರಶ್ನೆಯಿದ್ದರೆ ಅದಕ್ಕೆ ಉತ್ತರವನ್ನು ಅವರ ಧ್ವನಿಟಪ್ಪಾಲು ಯಂತ್ರದಲ್ಲಿ ಬಿಟ್ಟಿರುತ್ತೇನೆ.

ಸೆಪ್ಟೆಂಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಮೈಕೇಲ್ ಆಲ್ ಏರ್ ರವರ 'ಫಾರ್ ಕಾನ್‌ವರ್ಸೇಷನ್ ಪ್ರೆಸ್ # 1' ಲೇಖನದ ಭಾವಾನುವಾದ

ಮಾನವ ಸಂಪರ್ಕಕ್ಕೆ ಸಂಬಂಧಪಟ್ಟಂತೆ ಊಹಿಸಬಹುದಾದ ಪ್ರತಿಯೊಂದು ಚಟುವಟಿಕೆಯೂ ಹೆಚ್ಚು ಕಡಿಮೆ ಸ್ವಯಂಚಾಲಿತವಾದಂತೆಯೇ, ಬುದ್ಧಿಭ್ರಮಣೆಯ ಮಟ್ಟವೂ ಹೆಚ್ಚುತ್ತದೆ. ನಿಮಗೆ ಯಾರದ್ದಾದರೂ ದೂರವಾಣಿಯ ಸಂಖ್ಯೆಯು ಗೊತ್ತಿಲ್ಲವೆಂದಿಟ್ಟುಕೊಳ್ಳಿ. ಅದನ್ನು ತಿಳಿದುಕೊಳ್ಳಲು ಮತ್ತೊಬ್ಬರನ್ನು ಸಂಪರ್ಕಿಸುವ ಅಗತ್ಯವಿಲ್ಲ ದೂರವಾಣಿಯ ಮಾರ್ಗದರ್ಶನವೂ ಈಗ ಸ್ವಯಂಚಾಲಿತವಾಗಿದೆ.

ವಾಹನ ಇಂಧನ ಭರ್ತಿಮಾಡಲು ಬಂಕ್‌ಗೆ ಹೋದಾಗ, ನಿಮ್ಮನ್ನು ನಗುತ್ತ ಎದುರುಗೊಂಡು ಪೆಟ್ರೋಲ್ ತುಂಬಿಸುವ ಅಲ್ಲಿನ ಕೆಲಸಗಾರನ ನೆನಪಿದೆ ತಾನೆ? ಪೆಟ್ರೋಲ್ ಬಂಕ್‌ನಲ್ಲಿ ಕ್ರೆಡಿಟ್ ಕಾರ್ಡ್ ಉಪಯೋಗವಿರುವ ದೇಶಗಳಲ್ಲಿ, ಅಲ್ಲಿನ ನೌಕರರೊಡನೆ ನಕ್ಕು ಮಾತನಾಡಿ ಮಾನವ ಸಂಪರ್ಕವಿಟ್ಟುಕೊಳ್ಳುವ ಅಗತ್ಯವೂ ಇಲ್ಲ.

ಬ್ಯಾಂಕ್‌ನಲ್ಲಿ ಖಾತೆಗೆ ಹಣ ಕಟ್ಟಬೇಕೆ ? ಸ್ವಯಂ ಚಾಲಿತ ಯಂತ್ರಕ್ಕೆ ಕಾರ್ಡ್ ತುರುಕಿ ಕೆಲಸವನ್ನು ಮುಗಿಸುವುದಕ್ಕಾಗುವಾಗ, ನಿಮ್ಮ ಪಕ್ಕದ ಮನೆಯಲ್ಲೇ ವಾಸಿಸುವ ಬ್ಯಾಂಕ್ ಗುಮಾಸ್ತನನ್ನು ಮಾತನಾಡಿಸುವ ಅಗತ್ಯವಾದರೂ ಎಲ್ಲಿದೆ?

ಇನ್ನು ಮುಂದೆ ತಿಂಗಳ ಜಿನಸು ಖರೀದಿಸಲು ಅಂಗಡಿಗೆ ಹೋದಾಗ ಮಾನವ ಸಂಪರ್ಕದ ಆವಶ್ಯಕತೆಯಿಲ್ಲ. ಈಗಾಗಲೇ ಹಲವು ದೊಡ್ಡ ಅಂಗಡಿಗಳಲ್ಲಿ ನೀವು ಖರೀದಿಸಿರುವ ಸಾಮಾನುಗಳನ್ನು 'ಸ್ವಯಂ ಶೋಧಕ' ಯಂತ್ರದ ಮೂಲಕ ಸೋಡಿಸಿ, ಕಾರ್ಡ್ ಮೂಲಕ ಹಣ ಪಾವತಿ ಮಾಡಿ, ಗಲ್ಲದಲ್ಲಿ ಕುಳಿತು ನಿಮ್ಮನ್ನು ನೋಡಿ, ನಮಸ್ಕಾರ ಹೇಗಿದ್ದೀರಿ ?' ಎಂದು ಕೇಳಿ ಕಿರುಕುಳ ಕೊಡುವ ಗುಮಾಸ್ತರ ದೃಷ್ಟಿಗೆ ಸಿಕ್ಕದೆ ಹೊರಬರಬಹುದು.

ಹಾಗೆಂದು ನಾನು 'ಯಂತ್ರದ್ವೇಷಿ'ಯೇನಲ್ಲ. ನನ್ನ ಬಳಿಯೂ ಜಂಗಮವಾಣಿಯಿದೆ, ಕ್ರೆಡಿಟ್ ಕಾರ್ಡ್ ಇದೆ, ಧ್ವನಿ ಟಪ್ಪಾಲು ಯಂತ್ರವಿದೆ. ಎಲೆಕ್ಟ್ರಾನಿಕ್ ಅಂಚೆಯ ಸೌಲಭ್ಯವಿದೆ. ಇವ್ಯಾವುದನ್ನೂ ತ್ಯಜಿಸಬೇಕಾಗಿಲ್ಲ. ಯುಕ್ತವಾಗಿ ಬಳಸಿಕೊಂಡಲ್ಲಿ ಇವೆಲ್ಲವೂ ಮಹತ್ತರ ಸಾಧನೆಗಳೇ ಸರಿ. ಆದರೆ ಇವುಗಳಿಂದಾಗುವ ಅನುದ್ದೇಶಿತ ಪರಿಣಾಮಗಳು ನನ್ನನ್ನು ಹಲ್ಲುಗಿಂಜುವಂತೆ ಮಾಡುತ್ತವೆ.

ಖುದ್ದಾಗಿ ಮಾತಾಡಿ ಮಾಡಬೇಕಾದ ಕೆಲಸದಿಂದ ತಪ್ಪಿಸಿಕೊಳ್ಳಲು ಇ-ಮೇಲ್ ಅನ್ನು ಹೆಚ್ಚು ಹೆಚ್ಚು ಬಳಸುತ್ತಿದ್ದೇನೆ. ಮಾತಾಡಲು ಸಮಯವಿಲ್ಲವೆಂಬ ನೆಪಮಾಡಿ, ಧ್ವನಿ ಟಪ್ಪಾಲಿನ ಮೂಲಕ ಪ್ರಶ್ನೆಗಳಿಗೆ ಉತ್ತರಿಸಿ ಸಮಾಧಾನ ಪಟ್ಟುಕೊಳ್ಳುತ್ತಿದ್ದೇನೆ. ಸಂಪರ್ಕವನ್ನು ಹೆಚ್ಚಿಸುವುದಕ್ಕೆಂದೇ ಮೀಸಲಾದ ಮಾಹಿತಿ ಉದ್ದಿಮೆಯು ನನ್ನ ಒಂಟಿತನವನ್ನು ಹೆಚ್ಚಿಸುತ್ತಿದೆ: ಕನಿಷ್ಠ ನನ್ನಲ್ಲಿ ಸುಪ್ತವಾಗಿರುವ ಸಮಾಜಕಂಟಕ ಪ್ರವೃತ್ತಿಗೆ ಕುಮ್ಮಕ್ಕಂತೂ ನೀಡುತ್ತಿದೆ.

ಎಂದೇ ನಾನು ತಂತ್ರವಿದ್ಯೆ ನಿಬಂಧನೆಯ ಈ ಕಡಿವಾಣವನ್ನು ಹಾಕಿಕೊಂಡಿದ್ದೇನೆ: ನನ್ನ ಅಕ್ಕಪಕ್ಕ ವಾಸಿಸುವರ ಜೊತೆ ದೂರವಾಣಿ ಮೂಲಕ ಸಂಭಾಷಣೆ ಇಲ್ಲ, ಸ್ನೇಹಿತರೊಡನಿದ್ದಾಗ ಜಂಗಮವಾಣಿ ಬಳಕೆ ಇಲ್ಲ, ಮನೆಯಲ್ಲಿಯೇ ಇದ್ದಾಗ ಧ್ವನಿಟಪ್ಪಾಲು ಉಪಯೋಗವಿಲ್ಲ.

"ಅಬ್ಬಾ! ಎಂಥಾ ಅದ್ಭುತ ತಂತ್ರವಿದ್ಯೆ" ಎಂದು ನೀವು ಉದ್ಗರಿಸಿದ್ದನ್ನು ಕೇಳಲು ಪಕ್ಕದಲ್ಲಿ ಜನ ಇರಬೇಕು ತಾನೆ!

ನವಜಾತ ಶಿಶುವಿನ ಪಾಲನೆ

ಡಾ. ಸಿ.ಎಸ್.ಕಮಲ
೧೪೯೮/೨೪ "ಶ್ರೀ ಹರಿಕೃಪ"
ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರ
ಮೈಸೂರು-೫೭೦ ೦೦೪

ಜನನದ ತನಕ ಶಿಶು ತನ್ನ ಬೆಳೆವಣಿಗೆಗೆ ಬೇಕಾಗುವ ಪರಿಸರ, ಆಹಾರ ಮುಂತಾದವುಗಳಿಗೆ ತಾಯಿಯ ದೇಹವನ್ನೇ ಅವಲಂಬಿಸಿರುತ್ತದೆ. ಅದು ಜನಿಸಿದಕ್ಷಣದಿಂದಲೇ ಈ ಎಲ್ಲವನ್ನೂ ತಾನೇ ಪೂರೈಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಇದರ ಜೊತೆಗೆ ಹೊರಗಿನ ಪ್ರಪಂಚದ ಮಲಿನ ಪರಿಸರ, ಹೆತ್ತವರಿಗೆ ಶಿಶು ರಕ್ಷಣೆ ಬಗ್ಗೆ ತಪ್ಪು ತಿಳುವಳಿಕೆ, ಆಧುನಿಕ ವ್ಯವಹಾರದ ಒತ್ತಡದ ಪರಿಣಾಮ ಮುಂತಾದವು ಕೂಡ ಮಗುವಿನ ಸರಿಯಾದ ಬೆಳೆವಣಿಗೆಗೆ ತೊಂದರೆ ಉಂಟುಮಾಡಬಹುದು. ಆದ್ದರಿಂದ ಶಿಶುಪಾಲಕರು ಮಗುವಿನ ರಕ್ಷಣೆ ಬಗ್ಗೆ ಸರಿಯಾದ ಮಾಹಿತಿಗಳನ್ನು ತಿಳಿದಿರಬೇಕು.

ಶಿಶುವಿನ ಅಳಿವು, ಉಳಿವು ಮತ್ತು ಆರೋಗ್ಯ ಸಾಮಾನ್ಯವಾಗಿ ಜನನ ವೇಳೆಯಲ್ಲಿ ಅದರ ಪಕ್ವತೆ ಬೆಳವಣಿಗೆಯ ಮಟ್ಟ ಮತ್ತು ದೇಹದ ತೂಕವನ್ನು ಅವಲಂಬಿಸಿರುತ್ತವೆ. ೪೦ ವಾರಗಳ ಗರ್ಭಾವಸ್ಥೆ ಕಳೆದು ಹುಟ್ಟಿ, ಶಿಶುವಿನ ತೂಕ ೨.೫ ಕೆ.ಜಿ. ಅಥವಾ ಅದಕ್ಕಿಂತ ಹೆಚ್ಚು ಇದ್ದು ಮನೆಯಲ್ಲಿ ಸರಿಯಾಗಿ ಲಾಲನೆ ಪಾಲನೆ ಮಾಡಿದರೆ ಯಾವ ತೊಂದರೆಯೂ ಇಲ್ಲದೆ ಬೆಳೆಯುತ್ತದೆ.

ಅಪಕ್ವಶಿಶುಗಳು ಮತ್ತು ೨.೫ ಕೆ.ಜಿ.ಗಿಂತ ಕಡಿಮೆ ತೂಕದ ಮಕ್ಕಳಿಗೆ ವಿಶೇಷ ಆರೈಕೆ ಮತ್ತು ಮಕ್ಕಳ ವೈದ್ಯರ ಯುಕ್ತ ಸಲಹೆಯ ಅಗತ್ಯ ಇವೆ. ಹೆರಿಗೆಗಳು ಆಸ್ಪತ್ರೆಯಲ್ಲಿ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಗುವುದು ಒಳ್ಳೆಯದು. ಮನೆಗಳಲ್ಲಿ ಹೆರಿಗೆ ಮಾಡಿಸುವುದಾದರೆ, ತರಬೇತಿ ಹೊಂದಿರುವ ಸ್ಥಳೀಯ ದಾದಿಯರಿಂದ ಅಥವಾ ಆರೋಗ್ಯ ಸಹಾಯಕಿಯರಿಂದಲೇ (ಹೆಲ್ತ್ ಅಸಿಸ್ಟೆಂಟ್ಸ್) ಮಾಡಿಸಬೇಕು.

ಶಿಶುವಿನ ಉಪಚಾರದಲ್ಲಿ ಅರಿಯಬೇಕಾದ ಮುಖ್ಯ ಅಂಶಗಳಿವು:

೧. ಶಿಶುವಿಗೆ ರೋಗದ ಸೋಂಕು ತಾಗದಿರುವಂತೆ ನೋಡಿಕೊಳ್ಳುವುದು.
೨. ಮಗುವಿನ ದೇಹೋಷ್ಣತೆಯನ್ನು ಕಾಯ್ದುಕೊಳ್ಳುವುದು.
೩. ಪೋಷಕ ಆಹಾರ ಪೂರೈಕೆ
೪. ಶಿಶುವಿನ ಮೈಯಲ್ಲಿ ಪ್ರಕೃತಿ ಸಹಜವಾಗಿ ಕಾಣಬರುವ ಹಲವು ಲಕ್ಷಣಗಳನ್ನು ತಿಳಿದಿರುವುದು.
೫. ಶಿಶುವಿನಲ್ಲಿ ಅಸ್ವಾಸ್ಥ್ಯದ ಪ್ರಾರಂಭ ಚಿಹ್ನೆಗಳನ್ನು ಗುರುತಿಸುವುದು.

ಸೋಂಕನ್ನು ತಡೆಗಟ್ಟುವುದು ಹೇಗೆ? ನವಜಾತ ಶಿಶುಗಳಲ್ಲಿ ರೋಗ ನಿರೋಧಕ ಶಕ್ತಿ ಇನ್ನೂ ಪ್ರಬಲವಾಗಿ ವೃದ್ಧಿಸಿರುವುದಿಲ್ಲ. ರೋಗದ ಸೋಂಕು ಮಕ್ಕಳಲ್ಲಿ ಬೇಗ ಉಂಟಾಗುತ್ತದಲ್ಲದೇ ಅದರ ದುಷ್ಪರಿಣಾಮಗಳೂ ಹೆಚ್ಚು. ಅದರಿಂದ ಶಿಶುವಿನ ಜೀವಕ್ಕೇ ಅಪಾಯ. ಮಗುವಿನ ರೋಗನಿರೋಧಕ ಶಕ್ತಿಯನ್ನು ವೃದ್ಧಿಸಲು ಅದು ತಾಯಿಯ ಗರ್ಭದಲ್ಲಿದ್ದಾಗಲೇ ಪ್ರಾರಂಭ ಮಾಡಬಹುದು. ಸ್ತ್ರೀಯು ಮೊದಲಬಾರಿಗೆ ಗರ್ಭಿಣಿಯಾದಾಗ ತಿಂಗಳಿಗೊಂದರಂತೆ ಎರಡು ಟೆಟನಸ್ ಟಾಕ್ಸಾಯಿಡ್ (ಟಿ.ಟಿ.) ಚುಚ್ಚುಮದ್ದನ್ನೂ, ಎರಡನೆಯಬಾರಿ ಗರ್ಭಿಣಿಯಾದಾಗ ಒಂದು ಬಾರಿ ಟಿಟಿ ಚುಚ್ಚುಮದ್ದನ್ನೂ ಕೊಡಿಸಬೇಕು. ಈ ಲಸಿಕೆಯನ್ನು ಗರ್ಭಿಣಿಗೆ ಕೊಡುವ ಮೂಲಕ ಮಗುವಿಗೆ ಬರಬಹುದಾದ ಧನುರ್ವಾಯು ಖಾಯಿಲೆ

ಯನ್ನು ತಡೆಗಟ್ಟಬಹುದು. ತಾಯಿಯಲ್ಲಿ ರಕ್ತಬಲಕಡಿಮೆ ಇದ್ದರೆ ಅವಳಿಗೆ ಸೋಂಕು ರೋಗ ಬರುವ ಸಾಧ್ಯತೆ ಹೆಚ್ಚಾಗಿ, ಅದರ ದುಷ್ಪರಿಣಾಮ ಕೂಡ ಮಗುವಿನ ಮೇಲೆ ಉಂಟಾಗಬಹುದು. ಆದ್ದರಿಂದ ಗರ್ಭಿಣಿಯರು ೪ ತಿಂಗಳು ತುಂಬಿದನಂತರ, ಮೂರು ತಿಂಗಳಕಾಲ ಪ್ರತಿದಿನ ಕಬ್ಬಿಣಾಂಶಯುಕ್ತ ಗುಳಿಗೆಗಳನ್ನು ದಿನಕ್ಕೆ ಒಂದರಂತೆ ಸೇವಿಸಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ಹೆರಿಗೆಗಳು ಮನೆಗಳಲ್ಲೇ ಆಗುತ್ತವೆ. ಪ್ರಸವದ ಕೊಠಡಿಯ ಮಾಲಿನ್ಯ, ಕೊಳಕು ಅಲಗು (ಬ್ಲೇಡು) ಅಥವಾ ಕತ್ತಿಯಿಂದ ಹೊಕ್ಕಳು ಬಳ್ಳಿಯನ್ನು ಕತ್ತರಿಸುವುದು, ಕತ್ತರಿಸಿದ ಹೊಕ್ಕಳ ತುದಿಗೆ ಸಗಣಿಲೇಪನ ಮಾಡುವುದು, ಮುಂತಾದ ಆಚರಣೆಗಳಿಂದ ಸಹ ಧನುರ್ವಾಯು ಮತ್ತು ಇತರ ರೋಗಗಳ ಸೋಂಕುಂಟಾಗುತ್ತದೆ. ಹೆರಿಗೆ ಯಾವ ಜಾಗದಲ್ಲೇ ಆದರೂ ಹಲವು ಹೆರಿಗೆಸಂಬಂಧ ಸುರಕ್ಷಿತ ಆಚರಣೆಗಳನ್ನು ಅನುಸರಿಸಲೇಬೇಕು. ಹೆರಿಗೆಕೋಣೆ, ಪ್ರಸವಕ್ಕೆ ಮತ್ತು ಪ್ರಸವದನಂತರ ಮಗುವಿಗೆ ಉಪಯೋಗಿಸುವ ಬಟ್ಟೆಗಳು ಬಹಳ ಶುಚಿಯಾಗಿರಬೇಕು. ಹೆರಿಗೆ ಮಾಡಿಸುವವರು ಕೈಗಳನ್ನು ಸಾಬೂನು ಉಪಯೋಗಿಸಿ ಚೆನ್ನಾಗಿ, ಶುಭ್ರವಾಗಿ ತೊಳೆದಿರಬೇಕು. ಹೊಕ್ಕಳು ಬಳ್ಳಿಯನ್ನು ಕತ್ತರಿಸುವ ಅಲಗು ಮತ್ತು ಕಟ್ಟುವದಾರ ಹೊಸದಾಗಿ, ಶುಚಿಯಾಗಿರಬೇಕು. ಹೊಕ್ಕಳು ಬಳ್ಳಿಗೆ ಸಗಣಿ, ಪೌಡರ್, ಮುಲಾಮು ಅಥವಾ ಬೇರೆ ಏನನ್ನೂ ಹಚ್ಚಬಾರದು. ಅದಕ್ಕೆ ಬಟ್ಟೆ ಅಥವಾ ಬ್ಯಾಂಡೇಜನ್ನೂ ಕಟ್ಟಬಾರದು. ೬-೭ ದಿನಗಳ ನಂತರ ಅದು ತಾನಾಗೇ ಬಿದ್ದು ಹೋಗುತ್ತದೆ. ಆದರೆ ೧-೨ ಘಂಟೆಯನಂತರ ಇದು ಸ್ವಲ್ಪ ಸಂಕುಚಿಸಿ ಕಟ್ಟಿದ ದಾರದ ಗಂಟು ಸಡಿಲವಾಗಿ ರಕ್ತ ಬರಬಹುದು. ಹಾಗಾದ ಪಕ್ಷದಲ್ಲಿ ಅದಕ್ಕೆ ಮತ್ತೊಂದು ದಾರ ಕಟ್ಟಬೇಕು. ಹೆಚ್ಚು ರಕ್ತಸ್ರಾವವಾದರೆ ಶಿಶುವಿನ ಆರೋಗ್ಯ ಕೆಡುತ್ತದೆ.

ಶಿಶುಜನನದ ಬಳಿಕ ೨೪ಗಂಟೆಗಳ ಕಾಲ ಸ್ನಾನ ಮಾಡಿಸದಿರುವುದೇ ಲೇಸು. ಶುಚಿಯಾದ, ಮೆತ್ತಗಿರುವ ಬಟ್ಟೆಯಲ್ಲಿ ಮಗುವನ್ನು ಶುಭ್ರವಾಗಿ ಒರೆಸಿದರೆ ಸಾಕು. ಮಗುವಿನ ದೇಹಕ್ಕೆ ಜಿಡ್ಡಿನಂತಹ ಪದಾರ್ಥ ಅಂಟಿಕೊಂಡಿರುತ್ತದೆ. ಇದಕ್ಕೆ ವರ್ನಿಕ್ಸ್ ಕ್ಯಾಸಿಯೋಸ ಅನ್ನುತ್ತಾರೆ. ಇದರಿಂದ ಮಗು ಬೆಚ್ಚಗಿರಲು ಅನುಕೂಲವಾಗುತ್ತದೆ. ದೇಹದ ಉಷ್ಣತೆ ಅತ್ಯಂತ ಕಡಿಮೆಯಾದರೂ ರೋಗದ ಸೋಂಕುಂಟಾಗುತ್ತದೆ.

ತಾಯಿಯೇ ಆಗಲಿ, ಯಾರೇ ಆಗಲಿ ಮಗುವನ್ನು ಎತ್ತಿಕೊಳ್ಳುವ ಮುನ್ನ ಸಾಬೂನಿನಿಂದ ಚೆನ್ನಾಗಿ ಕೈ ತೊಳೆದಿರಬೇಕು. ಚರ್ಮದ ಅಥವಾ ಶ್ವಾಸಕೋಶದ ಸೋಂಕು, ಅತಿಸಾರ ಇರುವವರು ಪೂರ್ತಿ ಖಾಯಿಲೆ ವಾಸಿ ಆಗುವವರೆಗೆ ಮಗುವನ್ನು ಅನಿವಾರ್ಯವಿಲ್ಲದೇ ಎತ್ತಿಕೊಳ್ಳಬಾರದು. ಖಾಯಿಲೆ ಮಕ್ಕಳಿರುವೆಡೆಗೆ, ಜನಜಂಗುಳಿ ಇರುವೆಡೆಗೆ ಶಿಶುವನ್ನು ಕರೆದೊಯ್ಯಬಾರದು.

ಮೊಲೆಹಾಲು ಉತ್ಪನ್ನವಾಗುವುದಕ್ಕೆ ಮುಂಚೆ ಸಕ್ಕರೆನೀರು, ಗ್ಲೂಕೋಸ್‌ನೀರು, ಜೇನುತುಪ್ಪ, ಇತರೇ ಹಾಲು ಮುಂತಾದವನ್ನು ಮಗುವಿಗೆ ಕುಡಿಸಬಾರದು. ಇವನ್ನು ಕುಡಿಸಿದರೆ ರೋಗದ ಸೋಂಕು ತಗಲುವ ಸಂಭವವಿರುತ್ತದಲ್ಲದೆ, ಇದು ಮೊಲೆಹಾಲು ಸಕಾಲಕ್ಕೆ ಸಾಕಷ್ಟು ಪ್ರಮಾಣದಲ್ಲಿ ಉತ್ಪನ್ನವಾಗದೇ ಇರುವುದಕ್ಕೂ ಕಾರಣವಾಗುತ್ತದೆ. ಮಗು ಜನನವಾಗಿ ಒಂದು ಗಂಟೆ ಹೊತ್ತಿಗೆ ಮೊಲೆ ಚೀಪಿಸಲು ಪ್ರಾರಂಭಿಸಬೇಕು. ಮಗುವಿನ ಮೊಲೆ ಚೀಪುವಿಕೆಯೇ ಮೊಲೆಹಾಲು ಉತ್ಪನ್ನಕ್ಕೆ ಪ್ರಚೋದಕ.

ಜನನವಾದ ಮೂರುದಿನಗಳೊಳಗೆ ಬಿ.ಸಿ.ಜಿ. ಲಸಿಕೆ, ಪೋಲಿಯೋ ಡ್ರಾಪ್ಸ್

ಹಾಕಿಸಬೇಕು. ಬಿ.ಸಿ.ಜಿ. ಲಸಿಕೆ ಕ್ಷಯರೋಗವನ್ನೂ, ಪೋಲಿಯೋ ಡ್ರಾಪ್ಸ್ ಮಕ್ಕಳ ಲಕ್ವ-ಖಾಯಿಲೆಯನ್ನೂ, ತಡೆಗಟ್ಟುವುದಕ್ಕೆ ಉಪಯುಕ್ತವಾಗುವುವು.

ಮಗುವಿನಲ್ಲಿ ಮೈಕಾವಿಳಿತವನ್ನು ತಡೆಗಟ್ಟುವಿಕೆ:

ನವಜಾತಶಿಶು ತನ್ನ ದೇಹದ ಉಷ್ಣತೆಯನ್ನು ಸಮರ್ಪಕವಾಗಿ ಕಾಯ್ದುಕೊಳ್ಳಲು ಇನ್ನೂ ಸಮರ್ಥವಾಗಿರುವುದಿಲ್ಲ. ಆದ್ದರಿಂದ ಮಗುವಿಗೆ ಮೈಕಾವಿಳಿತ (ಹೈಪೋಥರ್ಮಿಯ) ಅಂದರೆ ಅತಿಶೈತ್ಯ ಆಗುವ ಸಂಭವವಿರುತ್ತದೆ. ಇದು ಮಕ್ಕಳ ಅಳಿವಿಗೆ ಒಂದು ಮುಖ್ಯಕಾರಣ. ದೇಹದ ಉಷ್ಣತೆ ೩೬° ಸೆ. ಗಿಂತ ಕಡಿಮೆಯಾದರೆ ಜೀವಕ್ಕೇ ಅಪಾಯ. ಅದರಲ್ಲೂ ಕಡಿಮೆತೂಕದ ಮತ್ತು ಅಪಕ್ವಶಿಶುಗಳಲ್ಲಿ ಇದರ ಅಪಾಯ ಇನ್ನೂ ಹೆಚ್ಚು. ಇದನ್ನು ತಡೆಯಲು ಜನನದ ತರುವಾಯ ಮಗುವನ್ನು ತಾಯಿಯ ಪಕ್ಕದಲ್ಲೇ ಮಲಗಿಸಬೇಕು. ತಾಯಿಯ ದೇಹೋಷ್ಣತೆ ಮಗುವನ್ನು ಬೆಚ್ಚಗಿಡುತ್ತದೆ. ಶಿಶುವನ್ನು ಬೆಚ್ಚಗಿನ ಹತ್ತಿಯ ಬಟ್ಟೆಯಲ್ಲಿ ಸುತ್ತಿ ತಲೆಗೆ ಚೆನ್ನಾಗಿ ಹೊದಿಸಿ ಮಲಗಿಸಬೇಕು. ತಾಯಿ ವಿಶ್ರಮಿಸಿಕೊಳ್ಳಲೆಂದು ಹೆರಿಗೆಯನಂತರ ಶಿಶುವನ್ನು ಬೇರೆ ಕೊಠಡಿಯಲ್ಲಿ ಮಲಗಿಸು ವುದು ಮಗುವಿನ ದೃಷ್ಟಿಯಿಂದ ಒಳ್ಳೆಯದಲ್ಲ. ಮಗುವಿರುವ ಕೊಠಡಿಯಲ್ಲಿ ಪಂಖ ಹಾಕಬಾರದು. ಜನನವಾಗಿ ೨೪ಗಂಟೆಗಳ ಕಾಲ ಸ್ನಾನಮಾಡಿಸದೇ ಇರುವುದು ಒಳ್ಳೆಯದು. ಹಾಗೂ ಆಗಾಗ ಅಂಗೈ ಹಿಂಭಾಗವನ್ನು ಮಗುವಿನ ಹೊಟ್ಟೆಯ ಚರ್ಮದ ಮೇಲಿಟ್ಟು ಶಿಶುವಿನ ಉಷ್ಣತೆಯ ಪ್ರಮಾಣವನ್ನು ಅಂದಾಜು ಮಾಡಬಹುದು. ಉಷ್ಣತೆ ಕಡಿಮೆ ಇದೆಯೆಂದು ತೋರಿದರೆ ವೈದ್ಯರಿಗೆ ತೋರಿಸಬೇಕು. ಮಗುವಿಗೆ ಸಾಂಬ್ರಾಣಿ ಹೊಗೆ ಹಾಕುವುದು, ತೊಟ್ಟಿಲಿನ ಕೆಳಗೆ ಸುವಾಸನೆ ಸೂಸುವ ಪುಡಿ ಸಿಂಪಡಿಸಿದ ಕೆಂಡ ಇಡುವುದು- ಈ ಕ್ರಮಗಳು ಮಗುವಿನ ಶ್ವಾಸಕೋಶ ಖಾಯಿಲೆಗಳಿಗೆ ನಾಂದಿಯಾಗಬಹುದು.

ಶಿಶು ಆಹಾರ ಪೂರೈಕೆ : ಶಿಶುವಿಗೆ ನಾಲ್ಕು ತಿಂಗಳು ತುಂಬುವ ತನಕ ಮೊಲೆಹಾಲು ಸಂಪೂರ್ಣ ಮತ್ತು ಅತ್ಯುತ್ತಮ ಆಹಾರ. ಜನಿಸಿದ ಒಂದು ಗಂಟೆಯೊಳಗೆ ಮೊಲೆಹಾಲು ಉಣಿಸಲು ಪ್ರಾರಂಭಿಸಬೇಕು. ಇಷ್ಟು ಜಾಗ್ರತೆಯಾಗಿ ಮೊಲೆ ಚೀಪಿಸುವುದರಿಂದ ಹಾಲು ಶೀಘ್ರದಲ್ಲಿ ಮತ್ತು ಹೆಚ್ಚು ಪ್ರಮಾಣದಲ್ಲಿ ಉತ್ಪನ್ನವಾಗುತ್ತದೆ. ಮಗುವಿನ ಮೊಲೆ ಚೀಪುವ ಕ್ರಿಯೆಯೇ ಮೊಲೆಹಾಲು ಉತ್ಪನ್ನಕ್ಕೆ ಪ್ರಚೋದಕ. ಮೊದಲು ೨ದಿನಗಳು ತಿಳಿಹಳದಿ ತೆಳ್ಳಗಿನ ಗಿಣ್ಣುಹಾಲು ಬರುತ್ತದೆ. ಅದನ್ನು ಚೆಲ್ಲಬಾರದು. ಅದು ಶಿಶುವಿಗೆ ಮುಂದಿನ ದಿನಗಳಲ್ಲಿ ರೋಗನಿರೋಧಕ ಶಕ್ತಿಯನ್ನು ನೀಡುತ್ತದೆ. ಬೇರೆ ಯಾವುದೇ ದ್ರವವನ್ನು ಉದಾ. ಸಕ್ಕರೆ ನೀರು, ಗ್ಲೂಕೋಸ್ ನೀರು, ಹರಳೆಣ್ಣೆ ಮುಂತಾದವನ್ನು ಕೊಡಲೇಬಾರದು. ಇವನ್ನು ಕುಡಿಸಿದರೆ ರೋಗದ ಸೋಂಕಾಗಬಹುದು ಮತ್ತು ಮೊಲೆಹಾಲು ಉತ್ಪನ್ನಕ್ಕೆ ಅಡ್ಡಿಯಾಗಬಹುದು. ಮೊದಲು ೨-೩ ದಿನಗಳ ಕಾಲ ದಿನವಿಡೀ ೧-೧½ ಚಮಚದಷ್ಟು ಹಾಲು ಬಂದರೂ, ಅಷ್ಟೇ ಮಗುವಿಗೆ ಸಾಕಾಗುತ್ತದೆ. ಮಗು ಅತ್ತಾಗಲೆಲ್ಲಾ ಮೊಲೆ ಚೀಪಿಸಬೇಕು. ಯಾವುದೇ ತರಹದ ಟಾನಿಕ್ಕು, ಗ್ರೈಪ್ ವಾಟರ್ ನೀರು ಮುಂತಾದವನ್ನು ಕೊಡುವ ಅವಶ್ಯಕತೆಯಿಲ್ಲ. ತಮ್ಮ ಮೊಲೆಹಾಲು ಸಾಲುತ್ತಿಲ್ಲವೆಂಬ ಅನುಮಾನ, ಆತಂಕ ತಾಯಂದಿರಿಗೆ ಇರುತ್ತದೆ. ಮಗು ಹಾಲು ಕುಡಿದು ೧-೨ ಗಂಟೆ ಕಾಲ ನಿದ್ರಿಸಿ, ೬-೭ಸಲ ಮೂತ್ರ ವಿಸರ್ಜಿಸಿ ಮಗುವಿನ ದೇಹದ ತೂಕ ಕ್ರಮೇಣ ಹೆಚ್ಚುತ್ತಿದ್ದರೆ ಮೊಲೆಹಾಲು ಸಾಕಷ್ಟು ಬರುತ್ತಿದೆಯೆಂದು ತಿಳಿಯಬೇಕು. ಸಾಕಷ್ಟು ಹಾಲು ಉತ್ಪನ್ನವಾಗಲು ತಾಯಿ ಆರಾಮವಾಗಿ ವಿಶ್ರಮಿಸಿ, ಸಂತುಲಿತ ಆಹಾರ ಸೇವಿಸುತ್ತಿರಬೇಕು. ಯಾವುದೇ ಔಷಧಿಯೂ ಹಾಲು

ಉತ್ಪನ್ನಕ್ಕೆ ಉಪಯೋಗವಾಗುವುದಿಲ್ಲ. ಮೊಲೆ ಮತ್ತು ಮೊಲೆತೊಟ್ಟಿನ ಗಾತ್ರಕ್ಕೂ, ಹಾಲು ಉತ್ಪನ್ನಕ್ಕೂ ಏನೂ ಸಂಬಂಧವಿಲ್ಲ. ಆದರೆ ಹಾಲನ್ನು ಕುಡಿಸುವಾಗ ಮೊಲೆ ತೊಟ್ಟನ್ನೂ ಮತ್ತು ಅದರ ಸುತ್ತವಿರುವ ಕಲೆಯ ಭಾಗವನ್ನೂ ಮಗುವಿನ ಬಾಯೊಳಗೆ ಇಡಬೇಕು. ಮೊಲೆತೊಟ್ಟನ್ನು ಮಾತ್ರ ಬಾಯೊಳಗಿರಿಸುವುದರಿಂದ, ಅದಕ್ಕೆ ಗಾಯವಾಗಿ ಹಾಲುಣಿಸುವುದು ಕಷ್ಟವಾಗುತ್ತದೆ.

ತಾಯಿಯ ಮರಣ ಅಥವಾ ಅವಳಿಗೆ ತೀವ್ರತರ ಖಾಯಿಲೆ ಇದ್ದು ಹಾಲುಣಿಸಲು ಅಶಕ್ತಳಾದ ಸಂದರ್ಭದಲ್ಲಿ ಚೆನ್ನಾಗಿ ಕಾಸಿ ತಣ್ಣಗಿಸಿದ ಹಸುಹಾಲಿಗೆ ಸಕ್ಕರೆ ಹಾಕಿ ಕುಡಿಸಬೇಕು. ಹಾಲಿಗೆ ನೀರು ಬೆರೆಸಬಾರದು. ಹಾಲನ್ನು ಒಳಲೆಯಲ್ಲಿ ಅಥವಾ ಚಮಚದಲ್ಲಿ ಕುಡಿಸಬೇಕು. ಶೀಶೆಯಿಂದ ಮಾತ್ರ ಕುಡಿಸಲೇ ಬಾರದು. ಹಸು ಹಾಲು ಕುಡಿಸುವ ಮಕ್ಕಳಿಗೆ, ಮಧ್ಯ ಮಧ್ಯದಲ್ಲಿ ದಿನಕ್ಕೆ ೩-೪ಬಾರಿ ಕಾಸಿ ಆರಿಸಿದ ನೀರು ಕುಡಿಸಬೇಕು. ಶಿಶುವಿಗೆ ೪-೬ ತಿಂಗಳುಗಳು ತುಂಬಿದ ಮೇಲೆ ಸ್ವಲ್ಪ ಸ್ವಲ್ಪವಾಗಿ ಬೇರೆ ಆಹಾರ ಪದಾರ್ಥಗಳನ್ನು ತಿನ್ನಿಸುವ ರೂಢಿಮಾಡಬೇಕು.

ಈ ಶಿಶುವಿನ ಆರೈಕೆ ಪೂರೈಕೆಗಳು ಮುಗಿದು, ತಾಯಿಯ ದೇಹ ಮತ್ತು ಮನಃಸ್ಥಿತಿ ಸುಧಾರಿಸಿ, ಮಹಿಳೆಯು ಮುಂದಿನ ಗರ್ಭಧಾರಣೆಗೆ ಸಂಪೂರ್ಣವಾಗಿ ಶಕ್ತಳಾಗುವುದಕ್ಕೆ ೩ ವರ್ಷವಾದರೂ ಬೇಕು. ಶಿಶುವಿನ ಮತ್ತು ತಾಯಿಯ ಆರೋಗ್ಯದ ಹಿತದೃಷ್ಟಿಯಿಂದ ಮುಂದಿನ ಗರ್ಭಧಾರಣೆಗೆ ಮಧ್ಯದಲ್ಲಿ ಕನಿಷ್ಠ ೩ ವರ್ಷ ಅಂತರವಾದರೂ ಇರುವುದು ಒಳ್ಳೆಯದು.

ಶಿಶುವಿನ ಜನನಾನಂತರದ ಹಲವು ಸ್ವಾಭಾವಿಕ ಲಕ್ಷಣಗಳು: ಶಿಶುವಿನಲ್ಲಿ ಕಾಣಬರುವ ಕೆಲವು ಲಕ್ಷಣಗಳು ತಾಯಿಗೆ ಗಾಬರಿಯೆನಿಸಿದರೂ ಇವು ಹಲವು ಮಕ್ಕಳಲ್ಲಿ ಸ್ವಾಭಾವಿಕವಾಗಿಯೇ ಕಂಡುಬರುವುದರಿಂದ ಹಾನಿಕರವಲ್ಲ.

೧. ನವಜಾತ ಶಿಶು ಮೊದಲು ಕೆಲವು ದಿನಗಳು ೧೮-೨೦ಗಂಟೆ ಕಾಲ ನಿದ್ರಿಸುತ್ತದೆ.

೨. ಶೇಕಡಾ ೫೦-೬೦ ಶಿಶುಗಳಿಗೆ ಜನಿಸಿದ ಎರಡನೇ ಅಥವಾ ಮೂರನೇ ದಿನದಿಂದ ಹಳದಿ ಕಾಮಾಲೆ ಕಾಣಿಸಿಕೊಳ್ಳುತ್ತದೆ. ಮುಂದೆ ಒಂದು ವಾರದಲ್ಲಿ ತಾನೇ ತಾನಾಗಿ ಮಾಯವಾಗಿ ಬಿಡುತ್ತದೆ. ಇದು ಬಹಳ ತೀಕ್ಷ್ಣವಾದರೆ ಮಾತ್ರ ವೈದ್ಯರಿಗೆ ತೋರಿಸಬೇಕು. ಆದರೆ ಜನಿಸಿದ ೨೪ಗಂಟೆಗಳ ಮುನ್ನವೇ ಕಾಣಿಸಿದರೆ ಅದು ತೀವ್ರಖಾಯಿಲೆಯನ್ನು ಸೂಚಿಸುತ್ತದೆ. ಹಾಗಾದಲ್ಲಿ ವಿಳಂಬಿಸದೇ ತಜ್ಞವೈದ್ಯರಿಗೆ ತೋರಿಸಬೇಕು.

೩. ಮೊಲೆ ಹಾಲು ಕುಡಿಯುವ ಮಕ್ಕಳು ದಿನಕ್ಕೆ ೮-೧೦ಬಾರಿ ಸ್ವಲ್ಪ ತೆಳ್ಳಗೆ ಮಲ ವಿಸರ್ಜನೆ ಮಾಡುತ್ತವೆ.

೪. ಬೆನ್ನ ಮೇಲೆ ಅಗಲವಾದ ನೀಲಿಮಚ್ಚೆಗಳಿರುತ್ತವೆ. ಇದಕ್ಕೆ ಮಂಗೋಲಿಯನ್ ಸ್ಪಾಟ್ ಎನ್ನುತ್ತಾರೆ. ಮುಂದೆ ೫-೬ ತಿಂಗಳುಗಳಲ್ಲಿ ಇವು ಮಾಯವಾಗುತ್ತವೆ.

೫. ತಾಯಿಯಿಂದ ಪಡೆದುಬಂದ ಹಾರ್ಮೋನುಗಳಿಂದಾಗಿ ಹೆಣ್ಣು ಮಗುವಿನ ಮೊಲೆಯ ಗಾತ್ರ ದಪ್ಪವಾಗಿರುವುದು, ಎರಡನೇ ಅಥವಾ ಮೂರನೇ ದಿನದಿಂದ ಮಗುವಿನ ಯೋನಿಯ ದ್ವಾರದಿಂದ ಬಿಳಿ ಅಥವಾ ಕೆಂಪು ಸ್ರಾವ ಉಂಟಾಗುವುದು ಕಾಣಬರುತ್ತದೆ. ಹೀಗೆ ಊದಿರುವ ಮಗುವಿನ ಮೊಲೆಯನ್ನು ಹಿಂಡಿ ಹಾಲು ತೆಗೆಯಬಾರದು. ಹಾಗೆ ತೆಗೆದರೆ ರೋಗದ ಸೋಂಕುತಗಲಿ, ಕೆಂಪಾಗಿ ನೋವುಂಟಾಗುತ್ತದೆ. ಮಗುವಿನ ಯೋನಿಯಿಂದ ಬಿಳೀ ಕೆಂಪುಸ್ರಾವವಿದ್ದರೆ, ಮಗುವಿನ ಬಾಹ್ಯ ಜನನಾಂಗವನ್ನು ನೀರಿನಿಂದ ತೊಳೆದು ಶುಚಿಯಾಗಿಟ್ಟರೆ ಸಾಕು. ಮುಂದೆ ೨ ಅಥವಾ ೩ ದಿನಗಳಲ್ಲಿ ಮಗುವಿನ ಮೊಲೆಯಿಂದ ಹಾಲು

ಬರುವುದು , ಯೋನಿಯಿಂದ ಬಿಳೀಕೆಂಪು ಸ್ರಾವವಾಗುವುದು ತಾನಾಗೆ ಮಾಯವಾಗುತ್ತವೆ. ಇದಕ್ಕೆ ಚಿಕಿತ್ಸೆಯ ಅಗತ್ಯವಿಲ್ಲ.

೬. ಶಿಶು ಹಾಲು ಕಕ್ಕಿಕೊಳ್ಳುವುದು ಸ್ವಾಭಾವಿಕ. ಮಗುವನ್ನು ಮಗ್ಗಲು ಮಲಗಿಸಿ, ಹಾಲು ಮೂಗಿನೊಳಗೆ ಹೋಗದಂತೆ ನೋಡಿಕೊಂಡರೆ ಸಾಕು.

೭. ಎರಡನೇ ಅಥವಾ ಮೂರನೇ ದಿನ ಕೆಲವು ಮಕ್ಕಳಿಗೆ ಕೆಂಪು ಗಂಧೆಗಳು ಎದೆಯಮೇಲೆ, ಹೊಟ್ಟೆಯ ಮೇಲೆ ಕಾಣಿಸಿಕೊಳ್ಳಬಹುದು. ಇವು ಕೀವುಗುಳ್ಳೆಗಳನ್ನು ಹೋಲುತ್ತವೆ. ಇದಕ್ಕೆ ಎರಿತೀಮ ಟಾಕ್ಸಿಕಮ್ ಎನ್ನುತ್ತಾರೆ. ಮಗು ಲವಲವಿಕೆಯಿಂದಿದ್ದು, ಹಾಲು ಸರಿಯಾಗಿ ಕುಡಿಯುತ್ತಿದ್ದರೆ ಗಾಬರಿಯಾಗಬೇಕಿಲ್ಲ. ೨ ದಿನಗಳಲ್ಲಿ ಇದು ತಾನೆ ತಾನಾಗಿ ಹೋಗಿ ಬಿಡುತ್ತದೆ. ಇದಕ್ಕೆ ಚಿಕಿತ್ಸೆಯ ಅಗತ್ಯವಿಲ್ಲ.

ನವಜಾತ ಶಿಶುವಿನಲ್ಲಿ ತೀವ್ರತರ ಖಾಯಿಲೆಯ ಲಕ್ಷಣಗಳು: ಈ ಕೆಳಗೆ ತಿಳಿಸಿರುವ ಯಾವುದೇ ಲಕ್ಷಣ ಮಗುವಿನಲ್ಲಿ ಕಂಡುಬಂದಲ್ಲಿ ಸ್ವಲ್ಪವೂ ವಿಳಂಬ ಮಾಡದೇ ತಜ್ಞ ವೈದ್ಯರಿಂದ ಪರೀಕ್ಷೆ ಮಾಡಿಸಬೇಕು.

೧. ಮೊಲೆಹಾಲು ಚೀಪಲು ಮಗು ಕಷ್ಟಪಡುವುದು, ಸರಿಯಾಗಿ ಕುಡಿಯದೇ ಇರುವುದು.

೨. ಸಾಧಾರಣಕ್ಕಿಂತ ಹೆಚ್ಚು ಹೆಚ್ಚು ನಿದ್ರಿಸುವುದು.

೩. ಸ್ಪರ್ಶಿಸಿದಾಗ ಮಗುವಿನ ದೇಹ ತಣ್ಣಗಿರುವುದು.

೪. ಕೆಮ್ಮು, ಜ್ವರ.

೫. ವೇಗದ ಉಸಿರು ಇಲ್ಲವೇ ಕಷ್ಟದಿಂದ ಉಸಿರಾಟ, ಪಕ್ಕೆ ಎಳೆತ.

೬. ಉಬ್ಬರಿಸಿದ ಹೊಟ್ಟೆ.

೭. ಪದೇ ಪದೇ ವಾಂತಿಯಾಗುವುದು, ಹಸುರು/ ಹಳದಿ ಬಣ್ಣದ ವಾಂತಿ.

೮. ದೇಹ ನೀಲಿ ಬಣ್ಣವಾಗುವುದು.

೯. ತೀಕ್ಷ್ಣವಾದ ಹಳದಿಕಾಮಾಲೆ, ಜನಿಸಿದ ೨೪ ಗಂಟೆಯೊಳಗೆ ಕಾಮಾಲೆ ಕಾಣಿಸುವುದು.

೧೦. ಸೆಳೆವು.

೧೧. ಪಟ್ಟು ಹಿಡಿದ ಅಳು



ಜೀವಗೋಲದ ಸಂಜೀವಿನಿ- ಜಲಸಂಪತ್ತು

ಪ್ರೊ.ಎಂ.ಆರ್.ನಾಗರಾಜು
ಎಫ್-೩, ಎಸ್.ಎಫ್.ಎಸ್.
ನಿವಾಸಿಗಳು,೭ನೇ ಬಿ ಅಡ್ಡರಸ್ತೆ
ಯಲಹಂಕ ಉಪನಗರ
ಬೆಂಗಳೂರು-೫೬೦ ೦೬೪

ರಸಾಯನಶಾಸ್ತ್ರದ ಉಗಮಕ್ಕೆ ಕಾರಣವಾದದ್ದು-ಎಲ್ಲರೋಗಗಳನ್ನು ವಾಸಿ ಮಾಡಬಲ್ಲ ಸಾವನ್ನೂ ಹೋಗಲಾಡಿಸಬಲ್ಲ ಸಂಜೀವಿನಿಗಾಗಿ ಹುಡುಕಾಟ. ಆ ಬಗೆಯ ಅಮೃತ ದೊರೆಯಲಿಲ್ಲವೆನ್ನುವುದು ಸಿ.ಮಿ. ಆದರೆ ಅದರಷ್ಟೇ ಮಹತ್ವದ ಮತ್ತೊಂದು ದ್ರವವನ್ನು ಕಲ್ಪಿಸಬಹುದು. ಆ ದ್ರವವೆಂದರೆ -ಜೀವಿಗಳ ಹುಟ್ಟು ಹಾಗೂ ಉಳಿವಿಗೆ ಕಾರಣವಾದ ದ್ರವ- ಆ ದ್ರವದ ಅಭಾವದಿಂದ ಜೀವಿಗೋಲವೇ ನಿರ್ಜೀವಿಗೋಲವಾಗುವ ಸಂಭವವುಂಟು. ಈ ದ್ರವವೂ ಅಮೃತದಷ್ಟೇ ಮಹತ್ವದ್ದು . ಏಕೆಂದರೆ ಮಾನವನು ಹುಟ್ಟಿ ಬೆಳೆದದ್ದರಿಂದಲ್ಲವೇ ಅಮರತ್ವವನ್ನು ನೀಡಬಲ್ಲ ಅಮೃತಕ್ಕಾಗಿ ಹಂಬಲಿಸಿದ್ದು! ಭೂಮಿಯೆಂಬ ಗ್ರಹದಲ್ಲಿ ಇತರ ಆಕಾಶ ಕಾಯಗಳಿಗೆ ಹೋಲಿಸಿದಾಗ ಅಪರೂಪವಾದದ್ದೆಂದರೆ ವಿವಿಧ ಜೀವಿಭರಿತ ಜೀವಿಗೋಲ. ಇದಕ್ಕೆ ಅನುವು ಮಾಡಿಕೊಟ್ಟದ್ದು-ಅಮೃತೋಪಮದ್ರವವಾದ ನೀರು.

ಹಿಮಾಲಯದ ಮಂಜುಗಡ್ಡೆ ಕರಗಿ ಹರಿವಾಗ ಆ ನೀರು ಹರಿದು ಹೋಗುವ ಪಂಜಾಬ್ ಕೃಷಿ ಉದ್ದಿಮೆಯಿಂದ ನಳನಳಿಸುತ್ತಿರುವ ರಾಜ್ಯ-ಆದರೆ, ಸಿಂಧೂ ನದಿಯಿಂದ ದೂರ ಉಳಿದು ಆ ನೀರಿನ ಸೌಕರ್ಯದಿಂದ ವಂಚಿತವಾದ ರಾಜಸ್ಥಾನ(ಈ ರಾಜ್ಯವು ಪಂಜಾಬದ ಪಕ್ಕದಲ್ಲೇ ಇದೆ ? ನೀರಿನ ಕೊರತೆಯಿಂದಾಗಿ ಮರುಭೂಮಿ. ಇಲ್ಲಿ ಜೀವಿ ವೈವಿಧ್ಯವಾಗಲಿ ಕೃಷಿ ಉದ್ದಿಮೆಯಾಗಲಿ ಇರದು. ನೀರಿನ ಅಸಮರ್ಪಕ ನಿರ್ವಹಣೆಯಿಂದಾಗಿ ಮರುಭೂಮಿಯ ಪ್ರದೇಶ ವಿಸ್ತಾರಗೊಳ್ಳುತ್ತಿದೆಯೆಂಬುದು ಶೋಚನೀಯ ವಿಷಯ.

ಒಂದಂಶ ಸುಸ್ಪಷ್ಟ. ನಮ್ಮ ನಿತ್ಯ ಜೀವನದಲ್ಲಿ ಸುಪರಿಚಿತವಾಗಿರುವ ಹಾಗೂ ನಾವು ಧಾರಾಳವಾಗಿ ದುಂದು ಮಾಡುತ್ತಿರುವ ನೀರು ಅತ್ಯಂತ ಸತ್ವಯುತವಾಗಿ ತನ್ನ ಪಾತ್ರವನ್ನು ನಿರ್ವಹಿಸಿದೆ. ಐತಿಹಾಸಿಕ ಹಾಗೂ ಸಾಮಾಜಿಕ ಬದಲಾವಣೆಗಳು ಅಷ್ಟೇಕೆ ಜೀವಿಗಳು ತಮ್ಮ ದೇಹರಚನೆಯನ್ನು ಬದಲಾಯಿಸುತ್ತಾ ಮೀನಿನಿಂದ ಮಾನವಸ್ಥಿತಿಗೆ ಬರಲು ಕಾರಣವಾದ ವಿಕಸನದಲ್ಲಿ ನೀರಿನ ಪಾತ್ರ ಅತ್ಯಂತ ಮಹತ್ವದ್ದು. ಜೀವಿಗಳ ವಲಸೆಯಿಂದ ಹಿಡಿದು ನಾಗರಿಕತೆಗಳ ಹೊಡೆದಾಟದವರೆಗೆ-ಇದರಿಂದಾದ ಘಟನೆಗಳು.

ಒಳನಾಡಿನ ಒಣನೆಲವನ್ನು ನಂದನವಾಗಿ ಉಪವನವಾಗಿ ಕೃಷಿಯೋಗ್ಯ ಭೂಮಿಯಾಗಿ ಪರಿವರ್ತಿಸುವ ಮಾಂತ್ರಿಕತೆ ನೀರಿಗಿದೆ. ದಾರಿ ಬದಿಯ ಕೊಳ, ದೊಣೆಯಂತಹ ಕಿರು ಆಕರಗಳು,ದನಕರುಗಳ ದಾಹವನ್ನಿಂಗಿಸುವುದಲ್ಲದೆ ಅನೇಕ ಜೀವಿಗಳಿಗೆ ಆಸರೆಯಾಗಿರುತ್ತದೆ. ಗರಿಷ್ಟ ಕೆರೆಗಳಿರುವ ಕೀರ್ತಿ ದಕ್ಷಿಣ ಭಾರತಕ್ಕೆ , ಅದರಲ್ಲೂ ಕರ್ನಾಟಕಕ್ಕೆ ವಿಶೇಷ ವಾಗಿ ಕೋಲಾರ ಜಿಲ್ಲೆಗೆ ಸಲ್ಲುತ್ತದೆ. ಬೃಹತ್ ಅಣೆಕಟ್ಟುಗಳಿಗಿಂತ ಈ ಬಗೆಯ ಕೆರೆಗಳು ಅನೇಕ ರೀತಿಯಿಂದ ಉಪಯುಕ್ತವಾದವು. ಜನಗಳು ಒಂದೆಡೆ ನೆಲಸದಂತೆ ಅನೇಕ ಪ್ರದೇಶಗಳಿಗೆ ಹಂಚಿಹೋಗುವಂತೆ ಮಾಡಲು ಇವು ಉಪಯುಕ್ತ ಅಂತರ್ಜಲ ಹೆಚ್ಚಳಕ್ಕೂ ಇವು ಸಹಾ

ಮೂಲ ಪ್ರೇರಣೆ : ನೊಬೆಲ್ ಪ್ರಶಸ್ತಿ ವಿಜೇತ ಸರ್ ಸಿ.ವಿ.ರಾಮನ್ನರ ಪ್ರಬಂಧ

ಯಕ. ಜೀವಗೋಲ ನಾಟಕದ ಪಾತ್ರಧಾರಿ ಹಾಗೂ ಸೂತ್ರದಾರಿ-ನೀರು.

ಆದರೆ, ದಿನಗಳೆದಂತೆ ಈ ಕೆರೆಗಳು ಹೂಳಿನಿಂದ ಮುಚ್ಚಿ ಹೋಗುತ್ತವೆ. ಇದರ ಪರಿಣಾಮವಾಗಿ ಕೆರೆಗಳ ಆಳ ಕಡಿಮೆ ಆಗಿ ನೀರು ಹೆಚ್ಚು ವಿಸ್ತಾರಕ್ಕೆ ಹರಡಿ ಹೋಗುತ್ತದೆ. ಆಗ ನೀರು ಆವಿಯಾಗುವ ದರ ಹೆಚ್ಚಿ ಬಹಳ ಬೇಗನೇ ಕೆರೆಯಲ್ಲಿನ ನೀರು ಇಲ್ಲವಾಗುತ್ತದೆ. ಇದರಿಂದ ಬೆಳೆಗೂ ಅಂತರ್ಜಲವಾಗಿ ಭೂಮಿ ಸೇರಲೂ ಆಸ್ಪದವಿಲ್ಲ.

ಕೆರೆಗಳು ಅತ್ಯಂತ ಮೋಹಕವಾದವು. ಸೂರ್ಯೋದಯದ ವೇಳೆ ಹಾಗೂ ಸೂರ್ಯಾಸ್ತದಲ್ಲಿ ಅವುಗಳ ರಮ್ಯತೆ ಮತ್ತಷ್ಟು ಹೆಚ್ಚು. ನೀರಿನ ಈ ಆಕರಗಳನ್ನು ಕಣ್ಣಿಗೆ ಹೋಲಿಸಬಹುದು. ಬಿಸಿಲಿನಲ್ಲಿ ಹೊಳಪಾಗಿ ಸಂಜೆಯಾಗುತ್ತಾ ಹೋದಂತೆ ಮಂಕಾಗಿ ಕಾಣುವ ಇವು ಆ ವೇಳೆಯ ಸ್ಥಿತಿಗತಿ ಯನ್ನು ಬಿಂಬಿಸುತ್ತವೆ.

ವಿವಿಧ ಕೆರೆಗಳ ನೀರಿನ ಬಣ್ಣ ವಿವಿಧ ಬಗೆಯದು. ಹರಿಯುವ ನೀರು ಹೊತ್ತು ತರುವ ನುಣ್ಣನೆಯ ಮಣ್ಣಿನ ಕಣ ಹಾಗೂ ಕೆರೆಯಲ್ಲಿ ಬೆಳೆಯುವ ಪಾಚಿ ಮತ್ತಿತರ ಅಂಶಗಳು ಕೆರೆಯನೀರಿನ ಬಣ್ಣವನ್ನೂ ನಿರ್ಧರಿಸುತ್ತವೆ. ಕೆರೆಯನೀರಿನ ಬಣ್ಣವನ್ನಾಧರಿಸಿ ನೀರು ಹರಿದು ಬರುವ ಪಾತ್ರದ ಮಣ್ಣಿನ ಸ್ವರೂಪವನ್ನು ತಿಳಿಯಬಹುದಾಗಿದೆ. ವೇಗವಾಗಿ ಹರಿದ ನೀರು ಭಾರವಾದ ಕಣಗಳನ್ನು ಒಯ್ಯಬಲ್ಲದು. ಹಗುರವಾದ ಕಣಗಳು ಸಾಗಿದಷ್ಟು ದೂರ ಭಾರವಾದ ಕಣಗಳು ಸಾಗಲಾರವು. ಏನೇ ಆಗಲಿ, ಹರಿವನೀರು ಮಣ್ಣಿನ ಮೇಲ್ಮೈ ಪದರದ ಕೊಚ್ಚಣೆ ಮಾಡಿ ಅದಕ್ಕುಂಟು ಮಾಡುವ ಹಾನಿ ಅಗಾಧವಾದದ್ದು. ತಾನು ಹೊತ್ತುತಂದ ಮಣ್ಣಿನ ಕಣವನ್ನು ಹೊಳೆಯ ನೀರು ಸಾಗರಕ್ಕೊಯ್ಯಲಾರದು. ಒಯ್ದಿದ್ದರೆ ಸಾಗರದ ಬಣ್ಣವೂ ಬೇರೆಯಾಗಿರುತ್ತಿತ್ತು. ಸಾಗರದ ಲವಣಜಲದ ಸಂಪರ್ಕ ಬರುತ್ತಿದ್ದ ಹಾಗೆಯೇ ಮಣ್ಣಿನ ಕಣಗಳು ಭೂಮಿಗೆ ತಲುಪುವುವು. ಹೀಗಾಗಿ ನದಿ ಮುಖಜ ಭೂಮಿ ಅತ್ಯಂತ ಫಲವತ್ತಾಗಿರುವ ಪ್ರದೇಶ.

ಹರಿವ ನೀರು ಜೀವಿಗಳಿಗೆ ಆಸರೆಯಾಗುವುದಲ್ಲದೆ ಮಣ್ಣು ರೂಪುಗೊಳ್ಳಲು ಕಾರಣವಾದದ್ದು . ಒಮ್ಮೆ ಬಂಡೆ ಕಲ್ಲಾಗಿದ್ದದ್ದು ಸವಕಳಿಗೆ ಒಳಗಾಗಿ ಸಣ್ಣಮಣ್ಣಿನ ಕಣವಾಗಿ ಭೂಮಿಯ ಮೇಲ್ಪದರದಲ್ಲಿ ಹರಡಿಕೊಳ್ಳುವಂತೆ ಮಾಡಿದ್ದೂ ಹರಿವ ನೀರಿನ ಕಾರ್ಯವೇ! ಆದರೆ, ವೈರುಧ್ಯವೆಂದರೆ ಮೇಲ್ಮೈ ಮಣ್ಣಿನ ರೂಪುಗೊಳ್ಳುವಿಕೆಗೆ ಕಾರಣವಾದ ನೀರು ಪ್ರವಾಹವಾಗಿ ಹರಿದು ಅದಕ್ಕೆ ಮಾರಕವಾಗಿಯೂ ಪರಿಣಮಿಸುವುದು. ಈ ಪ್ರವಾಹದ ಪ್ರಕೋಪವನ್ನು ಮತ್ತಷ್ಟು ಅಂಶಗಳು ಕೆರಳಿಸುವವು. ಆ ಪೈಕಿ - ಭೂಮಿಯ ಹೊರಮೈನ ಏರಿಳಿತಗಳು, ಸಸ್ಯ ಸಂಪತ್ತಿನ ವಿನಾಶ ಮತ್ತು ಕೊರಕಲುಗಳು ಮಣ್ಣಿನ ಕೊಚ್ಚಣೆಯನ್ನು ಅಧಿಕಗೊಳಿಸುವವು. ಇದರಿಂದಾಗಿ ಬೇಸಾಯದ ಭೂಮಿಗೆ ಆಗುವ ಹಾನಿ ಗಣನೀಯ -ಇದನ್ನು ತಪ್ಪಿಸಲು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕು. ಭೂಮಿಯನ್ನು ಸ್ತರಗೊಳಿಸಿ ಬದುಗಳನ್ನು ನಿರ್ಮಾಣ ಮಾಡುವ ಮೂಲಕ ಹರಿವ ನೀರಿನ ವೇಗವನ್ನು ತಗ್ಗಿಸುವುದು, ನೀರಿನ ದಂಡೆಯಲ್ಲಿ ಸಸ್ಯಗಳನು ನೆಡುವುದು- ಮೊದಲಾದ ಕ್ರಮಗಳಿಂದ ನೀರು ವೇಗವನ್ನು ಪಡೆಯುವುದನ್ನೇ ತಪ್ಪಿಸಬೇಕಾಗುವುದು.

ನೀರು ಜೀವಾಧಾರ ದ್ರವ. ಎಲ್ಲ ಸಸ್ಯಗಳು ಹಾಗೂ ಪ್ರಾಣಿಗಳು ತಮ್ಮ ಜೀವಕೋಶದಲ್ಲಿ ಸುಮಾರು ಶೇಕಡಾ ಎಪ್ಪತ್ತರಷ್ಟು ನೀರಿನಿಂದ ಕೂಡಿವೆ. ನೀರಿನ ಪಾತ್ರವಿಲ್ಲದೆ ಯಾವುದೇ ಜೈವಿಕ ಚಟುವಟಿಕೆಯೂ ನಡೆಯದು. ಈ ನೀರು ಪ್ರಾಣಿಗಳಿಗೆ ನೀರಿನ ಆಕರಗಳು ಹಾಗೂ ಆಹಾರದ ಜೀರ್ಣಿಸುವಿಕೆಯಿಂದ ದೊರೆಯು

ವುದು. ಸಸ್ಯಗಳಿಗಾದರೋ ಮಣ್ಣಿನ ಪದರದಲ್ಲಿರುವ ಪಸೆಯು ಒದಗಿಸುವುದು. ಮಣ್ಣಿನ ತೇವಾಂಶವಾದರೋ ಒಟ್ಟಾರೆಯಾಗಿ ಮಳೆ ನೀರನ್ನು ಆಧರಿಸಿದ್ದು. ಮಣ್ಣಿನ ಸವಕಳಿ ಹಾಗೂ ಮಳೆ ಬೀಳಿಕೆಯ ಅನಿಶ್ಚಿತತೆ ಭಾರತದ ಬೇಸಾಯಕ್ಕೆ ಒದಗಿರುವ ಗಂಡಾಂತರಗಳು. ಹೀಗೆ ಅಪರೂಪದ್ದೂ ಅಮೂಲ್ಯವಾದದ್ದೂ ಆಗಿರುವ ನೀರು ನೇರವಾಗಿ ಹರಿದು ಹೋಗಿ ನಿರುಪಯುಕ್ತವಾಗದಂತೆ ಸಂಗ್ರಹಿಸಿ ಬಳಕೆ ಮಾಡುವುದು ಅಗತ್ಯ. ಆದರೆ ಹರಿವ ನೀರಿನ ಬಹುಪಾಲು ಸಾಗರ ಸೇರುತ್ತಿರುವುದು ವಾಸ್ತವ. ಜಲಸಂಪನ್ಮೂಲದ ಸದ್ಬಳಕೆಯೂ ರಾಷ್ಟ್ರೀಯ ಸವಾಲಾಗಿದ್ದು ಅದನ್ನು ರಾಷ್ಟ್ರ ಮಟ್ಟದಲ್ಲಿ ನಿರ್ವಹಿಸಬೇಕು. ಭಾರತದ ಬಹಳಷ್ಟು ಭೂಮಿ ಕುರುಚಲು ಬೆಳೆಯದಾಗಿದ್ದು ಅದನ್ನು ಫಲವತ್ತುಗೊಳಿಸಿ ಸಮೃದ್ಧ ದೇಶ ನಿರ್ಮಾಣಕ್ಕೆ ದಾರಿಮಾಡಿ ಕೊಡಬೇಕು. ನೀರಿನ ಸದ್ಬಳಕೆಯಿಂದ ಅರಣ್ಯೀಕರಣವನ್ನೂ ಸಾಧಿಸಬಹುದಾಗಿದೆ. ಯುಕ್ತ ಮರಗಳನ್ನು ವ್ಯವಸ್ಥಿತವಾಗಿ ಬೆಳೆಯುವ ಮೂಲಕ ಉಪವನ ಕಾಡುಗಳನ್ನು ಬೆಳೆಯಬಹುದು. ಇದು ನಮ್ಮ ದೇಶದಲ್ಲಿ ತುರ್ತಾಗಿ ಆಗಬೇಕಾದದ್ದು. ಇದು ಪ್ರತ್ಯಕ್ಷ ಹಾಗೂ ಪರೋಕ್ಷಲಾಭಗಳಿಗೆ ಕಾರಣವಾಗಬಲ್ಲದು. ಮಣ್ಣಿನ ಸವಕಳಿ ತಪ್ಪಿಸಲು ಮತ್ತು ಇನ್ನಷ್ಟು ಮಳೆ ನೀರಿನ ಸದ್ಬಳಕೆ ಕೈಗೊಳ್ಳಲು ಇದು ಕಾರಣವಾಗುವುದಲ್ಲದೆ ಸಹಜ ಗೊಬ್ಬರ ಪೂರೈಕೆಗೂ ಅನುಕೂಲ ಮಾಡಿಕೊಡುವುದು.

ಜಲಪ್ರವಹನ ನಿಯಂತ್ರಣ ಹಾಗೂ ಆದರ ದಕ್ಷ ಬಳಕೆ ಜೀವನಮಟ್ಟ ಸುಧಾರಣೆ ಹಾಗೂ ಗ್ರಾಮೀಣ ಜೀವನಮಟ್ಟ ಸುಧಾರಣೆಗೆ ಕಾರಣವಾಗುವುದಲ್ಲದೆ ನಗರ ವಲಸೆಯನ್ನು ತಪ್ಪಿಸಬಲ್ಲದು. ದೋಣಿ ಮತ್ತು ತೆಪ್ಪಗಳ ವ್ಯವಸ್ಥೆಗೆ ಅನುವು ಮಾಡಿಕೊಡುವ ಮೂಲಕ ಆಂತರಿಕ ಸಾರಿಗೆ ವ್ಯವಸ್ಥೆಗೆ ದಾರಿ ಮಾಡಿಕೊಡುವುದು, ರಸ್ತೆ ಸಾರಿಗೆ ಹಾಗೂ ರೈಲು ಸಾಗಣೆ ಬಗ್ಗೆ ಚರ್ಚಿಸುವ ನಾವು ಆಂತರಿಕಜಲಸಂಪರ್ಕದ ಬಗ್ಗೆ ಆಲೋಚಿಸುವುದಿಲ್ಲ. ನೀರಿನ ಸದ್ಬಳಕೆಯ ಮೂಲಕ ಜಲವಿದ್ಯುತ್ ಪಡೆಯುವ ಸಾಧ್ಯತೆ ಬಗ್ಗೆ ಪ್ರಯತ್ನಿಸಬಹುದು. ಬೃಹತ್ ಜಲ ವಿದ್ಯುಜ್ಜನಕಗಳ ಬದಲಿಗೆ ಕಿರುಜಲ ವಿದ್ಯುತ್ ಸ್ಥಾವರಗಳ ಬಗೆಗೆ ಆಲೋಚಿಸಲೂ ಬಹುದು. ಅಂತರ್ಜಲದ ಮಟ್ಟ ಹೆಚ್ಚಳಕ್ಕೂ ಇದು ಅನುವು ಮಾಡಿಕೊಡಬಲ್ಲದು.

ನೀರು ಒಂದರ್ಥದಲ್ಲಿ ಅತ್ಯಂತ ಸುಪರಿಚಿತ ದ್ರವವೂ ಹೌದು. ಇನ್ನೊಂದರ್ಥದಲ್ಲಿ ಅಸಾಮಾನ್ಯ ಭೌತಿಕ ಹಾಗೂ ರಾಸಾಯನಿಕ ಲಕ್ಷಣಗಳುಳ್ಳ ದ್ರವವೂ ಹೌದು. ನೀರಿನ ಆಣವಿಕ ಮಟ್ಟದ ಅಧ್ಯಯನ ಇನ್ನೂ ಅಪೂರ್ಣವಾಗಿರುವ ಸಂಶೋಧನಾ ಕ್ಷೇತ್ರ ಹಾಗೂ ನೀರಿನ ಪ್ರಶಸ್ತ ಬಳಕೆಯು ಸಮಾಜವಿನ್ನೂ ಸಾಧಿಸಬೇಕಾದ ಗುರಿ.

ಭೂಲೋಕದಲ್ಲಿ ಏನನ್ನು ಸಾಧಿಸಬೇಕಾದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ಮೈಯಲ್ಲಿ ಯಾವ ಪರಿವರ್ತನೆಯಾಗಬೇಕಾಗಿದ್ದರೂ ಅದು ಮೊದಲು ಮನದಲ್ಲಿ ಮೊಳೆತು ಬೇರೂರಬೇಕು.

-ರಾಷ್ಟ್ರಕವಿ ಕುವೆಂಪು

ಒಂದು ಬಕೀಟು ಕಲ್ಲಿದ್ದಲು

ಟಿ.ವಿ. ಅನ್ನಪೂರ್ಣಮ್ಮ
೧೨೧೩/೫೮, ೨ನೇ ಕ್ರಾಸ್
ನಾಗಪ್ಪ ಬ್ಲಾಕ್, ಶ್ರೀರಾಮಪುರ
ಬೆಂಗಳೂರು-೫೬೦ ೦೨೧

ಪೋಲೆಂಡಿನ ಮಕೊಟೌನಲ್ಲಿ ವಾಸಿಸುತ್ತಿದ್ದ ನಾನು ಹದಿಮೂರು ವರ್ಷದ ಒಬ್ಬ ಸಣಕಲ ಹುಡುಗನಾಗಿದ್ದೆ. ನಮ್ಮ ಕಟ್ಟಡದಲ್ಲಿದ್ದ ಒಬ್ಬ ನೆರೆಮನೆಯಾಕೆ ಅಡುಗೆ ಮಾಡಲು ಹಾಗೂ ಬಿಸಿಮಾಡಿಕೊಳ್ಳಲು ಪ್ರತಿದಿನ ಒಂದು ಬಕೀಟಿನಷ್ಟು ಕಲ್ಲಿದ್ದಲನ್ನು ತಂದುಕೊಡಬೇಕೆಂದು ಕೇಳಿದಳು. ಐದನೆಯ ಅಂತಸ್ತಿನಲ್ಲಿ ವಾಸಿಸುತ್ತಿದ್ದ ಆಕೆ ಗೌರವಸ್ಥ ವಾಸ್ತುಶಿಲ್ಪಿ ಯಾಗಿದ್ದಳು. ನಮ್ಮ ಎರಡನೇ ಅಂತಸ್ತಿನ ಮನೆಗೆ ಕಲ್ಲಿದ್ದಲನ್ನು ತೆಗೆದುಕೊಂಡು ಬರುವುದು ಆಗ ನನ್ನ ಚಿಲ್ಲರೆ ಕೆಲಸಗಳಲ್ಲಿ ಒಂದಾಗಿತ್ತು. ನೆರೆಮನೆಯಾಕೆಯಿಂದ ಹಣ ತೆಗೆದುಕೊಳ್ಳಬಾರದೆಂಬುದು ಅಜ್ಜಿಯ ಅಭಿಪ್ರಾಯವಾಗಿತ್ತು. ಆದರೆ ತಾಯಿಯ ಪ್ರಕಾರ ಹಣ ತೆಗೆದುಕೊಳ್ಳುವುದರಲ್ಲಿ ತಪ್ಪೇನಿರಲಿಲ್ಲ.

"ಒಂದು ಬಕೀಟು ಕಲ್ಲಿದ್ದಲಿಗೆ ಅವನು ಒಂದೆರಡು ನಾಣ್ಯಗಳನ್ನು (ಪೋಲೆಂಡಿನ ನಾಣ್ಯ ಸ್ಲೋಟಿ ಹತ್ತು ಪೆನ್ನಿ ಬೆಲೆಯುಳ್ಳದ್ದು) ಏಕೆ ಸಂಪಾದಿಸಬಾರದು? ಕೆಲಸ ಮಾಡಿಸಿಕೊಂಡವರು ಹಣಕೊಡಲೇ ಬೇಕು.

ಹಾಗಾಗಿ ಕೆಲಸವೆಂದರೇನು, ಹಣದ ಮಹತ್ವವೇನು ಎಂದು ಕಲಿಯುವ ಅವಕಾಶ ನನಗೆ ಸಿಕ್ಕಿತು. ಹಣವನ್ನು ಸಿನಿಮಾ ನೋಡಲು ಹಾಗೂ ಹದಿಹರೆಯದವರಿಗಾಗಿ ಇದ್ದ ಒಂದು ದೈನಿಕ ಪತ್ರಿಕೆಗಾಗಿ ಖರ್ಚುಮಾಡಿದೆ.

ಸಂಯುಕ್ತ ಸಂಸ್ಥಾನದಲ್ಲಿ ಆರುತಿಂಗಳು ಇದ್ದನಂತರ ನಾನು ಪೋಲೆಂಡಿನಿಂದ ಬರಲಿರುವ ೧೫ ವರ್ಷದ ನನ್ನ ಏಕಮಾತ್ರ ಪುತ್ರ ಮಸಾಯಿಕ್‌ಗಾಗಿ ಎದುರು ನೋಡುತ್ತಿದ್ದಾಗ, ಆ ಮುಂಚಿನ ಅನುಭವ ನೆನಪಿಗೆ ಬಂತು. ವಿದ್ಯಾಭ್ಯಾಸವನ್ನು ಬಿಟ್ಟು ಬೇರೆ ಯಾವ ಜವಾಬ್ದಾರಿಯೂ ಇಲ್ಲದೆ ಸುಖವಾದ ವಾತಾವರಣದಲ್ಲಿ ಅವನು ಬೆಳೆದವನು. ಮಸಾಯಿಕ್, ಅಮೆರಿಕಾ ದಲ್ಲಿದ್ದರೆ, ಹೊಸ ವಿಚಾರಗಳನ್ನು ಕಲಿಯುವುದರ ಜೊತೆಗೆ ಕೆಲಸದ ಮಹತ್ವವನ್ನೂ ಪರಿಗಣಿಸುವಂತಾಗಬೇಕೆಂದು ನಾನು ತೀರ್ಮಾನಿಸಿದೆ.

ಆದರೆ ಇಲ್ಲಿ ಅವನೇನು ಮಾಡಬಲ್ಲ ? ಮೊದಲನೆಯದಾಗಿ ನನ್ನ ಮನಸ್ಸಿಗೆ ಬಂದ ವಿಚಾರವೇನೆಂದರೆ ವೃತ್ತ ಪತ್ರಿಕೆಗಳನ್ನು ವಿತರಿಸುವುದು. ಆನ್ ಅರಬರ್ ನ್ಯೂಸ್ ಪತ್ರಿಕೆ ಯಾವಾಗಲೂ ಸಹಾಯ ಅಪೇಕ್ಷಿಸುತ್ತಿತ್ತು. ಆದ್ದರಿಂದ ಪಟ್ಟಿಯಲ್ಲಿರುವಂತೆ ಪತ್ರಿಕೆಯನ್ನು ವಿತರಿಸಬೇಕಾದ ಚಂದಾದಾರರಿರುವ ಒಂದು ರಸ್ತೆಯ ಕೆಲಸವನ್ನು ವಹಿಸಿಕೊಳ್ಳಲು ಮಸಾಯಿಕ್ ಕೇವಲ ಒಂದು ತಿಂಗಳು ಕಾಯಬೇಕಾಯಿತು. ನಿಜವಾಗಿಯೂ ಅವನಿಗೆ ಭಾವೋದ್ರೇಕವಾಯಿತು.

ಸಂಜೆಯ ವೃತ್ತಪತ್ರಿಕೆಗಳ ಕಟ್ಟನ್ನು ಒಂದು ಟ್ರಕ್ ಮನೆಗೆ ಕೊಟ್ಟಿತು. ಅನಂತರ ಮೊದಲ ಸುತ್ತಿಗೆ ನಾನು ನನ್ನ ಕಾರಿನಲ್ಲಿ ಮಸಾಯಿಕ್‌ನ ಜೊತೆಗೆ ಹೋದೆ. ಅಂದು ಸೋಮವಾರ. ಕೆಲಸ ಅವನಿಗೆ ಸುಲಭವೆನಿಸಿತು. ಒಂದು ವೃತ್ತಪತ್ರಿಕೆಯನ್ನು ಬಾಲ್ಕನಿಗೆ ಎಸೆಯುವುದು, ಕೆಲವು ಕಡೆ ಒಂದೆರಡು ಹೆಜ್ಜೆ ಹೋಗಿ ಮುಂಬಾಗಿಲ ಮುಂದೆ ಅಥವಾ ಅಂಚೆಯ ಪೆಟ್ಟಿಗೆಯೊಳಗೆ ಹಾಕುವುದು. ಸುಮಾರು

ನವೆಂಬರ್ ೧೯೯೯ ರ ರೀಡರ್ಸ್ ಡೈಜೆಸ್ಟ್ ಅಂದ್ರಾಜ್ ಕ್ರಾಜ್ ಎಷ್ಕರ 'ಎ ಬಕೆಟ್ ಆಫ್ ಕೋಲ್' ಲೇಖನದ ಕನ್ನಡಾನುವಾದ

ಒಂದು ಘಂಟೆಯಷ್ಟು ಸಮಯದೊಳಗೆ ಎಪ್ಪತ್ತು ವಿಳಾಸದಾರರಿಗೆ ಪತ್ರಿಕೆಯನ್ನು ವಿತರಿಸುವುದು ನಮಗೆ ಸಾಧ್ಯವಾಯಿತು.

ನಾವು ಕೆಲಸ ಮುಗಿಸಿದಾಗ ಮಸಾಯಿಕ್ ಕೇಳಿದ ''ಅಪ್ಪಾ ನಾನು ಎಷ್ಟು ಸಂಪಾದಿಸಿದೆ''?

''ನಿನಗೆ ಬೇಗ ತಿಳಿಯುವುದು'' ಎಂದು ನಾನು ಉತ್ತರಿಸಿದೆ.

ಮಂಗಳವಾರ ಮಸಾಯಿಕ್ ತಾನೇ ಪತ್ರಿಕೆಗಳನ್ನು ವಿತರಿಸಿದ. ಅವನ ತಾಯಿ ಜೊಸಿಯಾ ಎಲ್ಲಾ ವೃತ್ತಪತ್ರಿಕೆಗಳನ್ನೂ ಸುರಳಿ ಮಾಡಿಕೊಟ್ಟಳು. ಅವನು ಅದನ್ನು ತನ್ನ ಬೈಕಿನ ಕ್ಯಾರಿಯರ್ ಮೇಲೆ ಇಟ್ಟುಕೊಂಡು ಸವಾರಿ ಮಾಡಿಕೊಂಡು ಹೋದ. ನಲವತ್ತೈದು ನಿಮಿಷಗಳ ಅನಂತರ ಹಿಂತಿರುಗಿದಾಗ ಅವನು ಬಹಳ ಆತಂಕಗೊಂಡಿದ್ದ. ಚಂದಾದಾರರ ಪಟ್ಟಿಯನ್ನು ಪರಿಶೀಲಿಸುತ್ತಾ ಯಾರನ್ನಾದರೂ ಬಿಟ್ಟೆನೋ ಎಂದು ಚಿಂತಿಸುತ್ತಿದ್ದ. ವಾಸ್ತವವಾಗಿ ಮಾರನೆಯ ದಿನ ಒಂದು ದೂರೂ ಇದ್ದಿತು.

ಶುಕ್ರವಾರದ ಹೊತ್ತಿಗೆ ಮಸಾಯಿಕ್ ತನ್ನನ್ನು ಒಬ್ಬ ಪರಿಣಿತನೆಂದುಕೊಂಡ. ವೃತ್ತಪತ್ರಿಕೆಗಳನ್ನು ಹಂಚುವುದು ಒಂದು ದೊಡ್ಡ ಕೆಲಸವೇ? ಶಾಲೆಯಿಂದ ಹಿಂತಿರುಗಿದ ಅನಂತರ ಪತ್ರಿಕೆಗಳ ಕಟ್ಟುಕಟ್ಟಿ ಕ್ಯಾರಿಯರ್ ಮೇಲೆ ಇಟ್ಟುಕೊಂಡು, ವಾಕ್‌ಮನ್ ಚಾಲೂ ಮಾಡಿ ಬೈಸಿಕಲ್‌ನ ಮೇಲೆ ಹೊರಟ.

ಆದರೆ ಭಾನುವಾರ ಕೆಲಸ ಕಷ್ಟಕರವಾಗಿತ್ತು. ಅಂದು ಮಧ್ಯಾಹ್ನದ ಬದಲು ಬೆಳಿಗ್ಗೆ ೬ ಘಂಟೆಗೇ ಪತ್ರಿಕೆಗಳನ್ನು ವಿತರಿಸಬೇಕಾಗಿತ್ತು. ಅದು ಚಳಿಗಾಲ. ಇನ್ನೂ ಕಷ್ಟವೆಂದರೆ ಭಾನುವಾರದ ಪತ್ರಿಕೆಗಳು ಸುಮಾರು ಒಂದೊಂದು ಕಿಲೋನಷ್ಟು ಇರುತ್ತಿತ್ತು. ಮಸಾಯಿಕ್‌ನ ಬೈಸಿಕಲ್ ಉಪಯೋಗಕ್ಕೆ ಬರುತ್ತಿರಲಿಲ್ಲ. ವೃತ್ತಪತ್ರಿಕೆಗಳು ನನ್ನ ಮೋಟಾರು ಗಾಡಿಯ ಹಿಂದಿನ ಸೀಟನ್ನು ತುಂಬಿದುವು. ಮಸುಕಾದ ದೃಷ್ಟಿಯಿಂದ ನಾನು ಮೋಟಾರು ಗಾಡಿಯನ್ನು ನಡೆಸಿದೆ. ನನ್ನ ಮಗ ಕೊರೆತದಿಂದ ತನ್ನ ಕೈಗಳನ್ನು ರಕ್ಷಿಸಿಕೊಳ್ಳುವ ಪ್ರಯತ್ನಮಾಡುತ್ತಾ ಪತ್ರಿಕೆಗಳನ್ನು ಹಂಚಿದ.

ನಾವು ಇನ್ನೂ ಯಾವಾಗ ಮುಗಿಸುತ್ತೇವೆ? ಕೆಲಸದ ಮೂಲಕ ಮಕ್ಕಳಿಗೆ ಕಲಿಸುವ ಅಮೆರಿಕಾದ ರೀತಿಯನ್ನು ಮೌನವಾಗಿ ಶಪಿಸುತ್ತಾ ಧೃತಿಗೆಟ್ಟು ಆಶ್ಚರ್ಯಪಟ್ಟೆ.

ಒಂದೂವರೆ ಘಂಟೆಯನಂತರ ನಾವು ಮನೆಗೆ ಹಿಂದಿರುಗಿದಾಗ ಮಸಾಯಿಕ್ ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡ ''ಅಪ್ಪಾ, ನನಗೆ ಸಾಕಾಯಿತು. ನನಗೆ ಹಣವೂ ಬೇಡ, ಕೆಲಸವೂ ಬೇಡ, ನಾನು ಕೆಲಸ ಬಿಟ್ಟೆನೆಂದು ದಯವಿಟ್ಟು ಅವರಿಗೆ ಹೇಳಿಬಿಡಿ'' ಎಂದ.

ಆತಂಕದಿಂದ ಕೇಳಿದೆ ''ಖಂಡಿತವಾಗಿಯೂ ? ಅದು ನಿನ್ನ ಕೆಲಸ, ನಿನ್ನ ಹಣ. ನಿನಗೆ ಬೇಕಾದಂತೆ ಮಾಡು. ನೀನೇ ಅವರನ್ನು ಸಂಪರ್ಕಿಸಿ ಕೆಲಸ ನಿನಗೆ ಕಷ್ಟಕರವೆಂದು ಹೇಳಬೇಕು.

ಕೋಪದಿಂದ ಅವನು ನನ್ನ ಕಡೆ ನೋಡಿ ಹೇಳಿದ ''ಇಂಗ್ಲಿಷ್ ಭಾಷೆಯಲ್ಲಿ ನಾನು ಅವರಿಗೆ ಎಲ್ಲವನ್ನೂ ವಿವರಿಸಲಾರೆ''.

''ಅದು ನಿನಗೆ ಬಿಟ್ಟಿದ್ದು'' ಎಂದು ನಾನು ಸಂಭಾಷಣೆಯನ್ನು ಮುಗಿಸಿದೆ. ಮರುದಿನ ಸೋಮವಾರ. ಮಸಾಯಿಕ್ ಮಧ್ಯಾಹ್ನ ಶಾಲೆಯಿಂದ ಹಿಂದಿರುಗಲಿಲ್ಲ. ಸಂಜೆ ೫ ಘಂಟೆಗೆ ನಾನು ಮನೆಗೆ ಬಂದಾಗ ವೃತ್ತಪತ್ರಿಕೆಗಳ ಕಟ್ಟು ಇನ್ನೂ ಅಲ್ಲೇ ಇತ್ತು.

'ಅವನು ಎಲ್ಲಿ ಹೋಗಿರಬಹುದು' ಎಂದು ಜೆಸಿಯಾ ಆತಂಕಗೊಂಡಳು.

ಕೋಪದಿಂದ ಪತ್ರಿಕೆಗಳನ್ನು ಮೋಟಾರು ಗಾಡಿಯಲ್ಲಿಟ್ಟುಕೊಂಡು ನಾನೇ ವಿತರಿಸಿದೆ.

ಸಂಜೆ ಏಳು ಘಂಟೆಗೆ ಮಸಾಯಿಕ್ ಏನೂ

ಆಗೇ ಇಲ್ಲವೇನೋ ಎಂಬಂತೆ ಬಂದ. ವೃತ್ತಪತ್ರಿಕೆಗಳ ಬಗ್ಗೆ ನಾನು ಒಂದು ಮಾತನ್ನೂ ಆಡಲಿಲ್ಲ.

''ನಾನೂ ನನ್ನ ಸ್ನೇಹಿತರ ಜೊತೆ ಸಿನಿಮಾಕ್ಕೆ ಹೋಗಿದ್ದೆ. ಅಪ್ಪಾ, ನೀವು ಅವರಿಗೆ ತಿಳಿಸಿ ದಿರಾ?'' ಊಟಕ್ಕೆ ಕುಳಿತುಕೊಳ್ಳುವಾಗ ಅಂಜುತ್ತಾ ಅಂಜುತ್ತಾ ಅವನು ಕೇಳಿದ.

''ಇಲ್ಲ ನಾನು ಏನೂ ಮಾಡಲಿಲ್ಲ. ನೀನೇ ಅವರಿಗೆ ಹೇಳಬೇಕಾಗಿತ್ತು''.

''ಹಾಗಾದರೆ ವೃತ್ತಪತ್ರಿಕೆಗಳು ಎಲ್ಲಿವೆ?''

ಅವನ ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಾ ಉತ್ತರ ಕೊಟ್ಟೆ ''ಇನ್ನೂ ನಿನಗಾಗಿ ಕಾಯು ತ್ತಿವೆ''. ಭಯಪಟ್ಟು ಅವನು ಕೇಳಿದ, ''ನೀವು ಗಂಭೀರವಾಗಿ ಹೇಳುತ್ತಿರುವಿರಾ?''

''ಇಲ್ಲ, ನಿನಗಾಗಿ ನಾನು ಅವುಗಳನ್ನು ವಿತರಿಸಿದೆ'' ಸಾಧ್ಯವಾದಷ್ಟು ಶಾಂತ ಧ್ವನಿಯಲ್ಲಿ ಅವನಿಗೆ ವಿವರಿಸಿದೆ.

ಮಸಾಯಿಕ್ ನನ್ನಡೆಗೆ ಹಾರಿ ಬಂದ. ನನಗೆ ಧನ್ಯವಾದಗಳನ್ನು ಹೇಳಬೇಡ ಎಂದು ಅವನನ್ನು ತಡೆದೆ. ನೀನು ಕಟ್ಟುಪಾಡಿಗೊಳ ಗಾಗಿದ್ದವರಿಗಾಗಿ ಮಾತ್ರ ನಾನು ಆ ಕೆಲಸಮಾಡಿದೆ. ನನ್ನ ೧೫ ವರ್ಷದ ಮಗ ಕೇವಲ ಒಬ್ಬ ಬೇಜವಾಬ್ದಾರಿಯ ಮಗು ಎಂದು ಒಪ್ಪಿಕೊಳ್ಳಲು ನನಗೆ ಬಹಳ ಬೇಸರ ವಾಗುತ್ತಿದೆ. ನೀನು ಈ ಕೆಲಸಕ್ಕೆ ಲಾಯಕ್ಕಿಲ್ಲ ವೆಂದು ಹೇಳಲು ನಾಳೆ ನಾನು ಅವರನ್ನು ಸಂಪರ್ಕಿಸುತ್ತೇನೆ.

ಮಸಾಯಿಕ್ ಬಾಗಿಲನ್ನು ದಡಾರೆಂದು ಮುಚ್ಚಿಕೊಳ್ಳುತ್ತಾ ತನ್ನ ಕೊಠಡಿಗೆ ಹೋದ. ಊಟಕ್ಕೂ ಕೆಳಗೆ ಬರಲಿಲ್ಲ. ಮಾರನೆಯ ಬೆಳಿಗ್ಗೆ ತನ್ನ ಬೆಳಗಿನ ತಿಂಡಿಯನ್ನು, ಕುರುಕುತ್ತಾ ಮೌನವಾಗಿ ಬಹಳ ಬೇಗ ಮುಗಿಸಿದ. ತನ್ನ ಚೀಲವನ್ನು ಸೆಳೆದುಕೊಂಡು ಶಾಲೆಗೆ ಓಡಿ ಹೋದ. ಮಧ್ಯಾಹ್ನ ಪ್ರತಿನಿತ್ಯ ಕ್ಕಿಂತ ಮುಂಚೆ ಹಿಂತಿರುಗಿದ. ವೃತ್ತಪತ್ರಿಕೆಗಳು ನಮ್ಮ ಮನೆಯ ಮುಂದೆ ಇದ್ದುವು. ಒಂದು ಮಾತನ್ನೂ ಆಡದೆ ಅವುಗಳನ್ನು ವಿತರಿಸಲು ಸಿದ್ಧಪಡಿಸಿ ತನ್ನ ಬೈಸಿಕಲ್ಲನ್ನು ಈಚೆಗೆ ತೆಗೆದ. ನನ್ನನ್ನೂ ಜೋಸಿಯಾಳನ್ನೂ ಅಪ್ಪಿಕೊಂಡ.

''ದಯವಿಟ್ಟು ಕ್ಷಮಿಸಿ'' ಎಂದು ಹೇಳಿದ.

ಮಸಾಯಿಕ್ ಮೊದಲ ಯುದ್ಧದಲ್ಲಿ ಗೆದ್ದ. ನಮ್ಮ ಮಗ ಜವಾಬ್ದಾರಿ ಎಂಬುದರ ಅರ್ಥವನ್ನು ಕಂಡುಕೊಂಡಿದ್ದಾನೆ.

ಎರಡನೆ ವಾರದ ಕೊನೆಯಲ್ಲಿ ಅವನಿಗೆ ಸಂಬಳದ ಚೆಕ್ ಸಿಕ್ಕಿತು. ಬಹಳ ಆತುರ ಹಾಗೂ ಸಂಭ್ರಮದಿಂದ ಅವನು ಆ ಲಕೋಟೆಯನ್ನು ತೆರೆದುದನ್ನು ನಾನು ಗಮನಿಸಿದೆ ಅದು ಅವನ ಎರಡನೇ ವಿಜಯ.

ಮುಂದಿನ ದಿನಗಳು ಮಸಾಯಿಕ್‌ಗೆ ಹೂವಿನ ಹಾಸಿಗೆಯಾಗಿರಲಿಲ್ಲ. ಎರಡು ತಿಂಗಳ ಅನಂತರ, ವಸಂತ ಋತು ಬಂದಾಗ, ಮಸಾಯಿಕ್ ಹೇಳಿದ, ''ಅಪ್ಪಾ, ಈ ವರ್ಷದ ಶಾಲಾ ದಿನಗಳು ಮುಗಿಯುವಾಗ, ನಾನು ವೃತ್ತಪತ್ರಿಕೆಗಳನ್ನು ವಿತರಿಸುವ ಕೆಲಸವನ್ನು ನಿಲ್ಲಿಸಲು ಅಪೇಕ್ಷಿಸುತ್ತೇನೆ. ಬೇಸಿಗೆಯ ರಜಾದಿನಗಳಲ್ಲಿ ನಾನು ಕೆಲಸಮಾಡಬೇಕೆಂದು ಖಂಡಿತ ನೀವು ಅಪೇಕ್ಷಿಸುವುದಿಲ್ಲ ಅಲ್ಲವೇ?''

'ಸರಿ, ತೀರ್ಮಾನ ನಿನ್ನದು. ಆದರೆ ಕೆಲಸವನ್ನು ನೀನು ಮುಂದುವರಿಸಿದರೆ, ಪ್ರತಿ ತಿಂಗಳು ನೀನು ಸಂಪಾದಿಸುವಷ್ಟು ಮೊತ್ತವನ್ನು ನನ್ನ ಕಡೆಯಿಂದ ಕೊಡುತ್ತೇನೆ.

'ಹಾಗಾದರೆ ನಾನು ಆ ಮೊತ್ತದ ಅರ್ಧ ಭಾಗ ಮಾತ್ರ ತೆಗೆದುಕೊಳ್ಳುತ್ತೇನೆ. ಕೆಲಸ ಮಾಡುವುದಿಲ್ಲ' ಎಂದು ಸೂಚಿಸಿದ.

''ಖಂಡಿತ ಅದು ಸಾಧ್ಯವಿಲ್ಲ'' ನಾನು ನಕ್ಕೆ.

ಸಂಯುಕ್ತ ಸಂಸ್ಥಾನದ ಸುತ್ತಮುತ್ತಲಿನ ಜಾಗಗಳಿಗೆ ನಾವು ಪ್ರವಾಸ ಹೊರಟೆವು.

ಮಸಾಯಿಕ್ ಕೆಲಸ ಮಾಡುವುದನ್ನು

ನಿಲ್ಲಿಸಿದ. ಆದರೆ ಹಿಂತಿರುಗಿದ ನಂತರ ತನ್ನ ಕೆಲಸವನ್ನು ಮತ್ತೆ ಪಡೆದುಕೊಂಡ. ಮಂಜು ಬೀಳುವ ಚಳಿಗಾಲದಲ್ಲಿಯೂ ಅವನು ತನ್ನ ಕೆಲಸವನ್ನು ನಿಲ್ಲಿಸಲಿಲ್ಲ. ಅವನು ತನ್ನ ಬೈಸಿಕಲ್ಲನ್ನು ಮನೆಯಲ್ಲೇ ಬಿಟ್ಟು, ವೃತ್ತಪತ್ರಿಕೆಗಳನ್ನು ತೆಗೆದುಕೊಂಡು ಎಲ್ಲೆಡೆ ನಡೆದುಕೊಂಡು ಹೋಗಬೇಕಾಗುತ್ತಿತ್ತು. ಅವನು ಬ್ಯಾಂಕಿನಲ್ಲಿ ತನ್ನ ಒಂದು ಖಾತೆಯನ್ನೂ ತೆರೆದ. ಅವನಿಗೆ ನಾನು ಕೊಟ್ಟ ವಿಶೇಷ ಬೋನಸ್ ಹಣವನ್ನೂ ಅದಕ್ಕೆ ಜಮಾ ಮಾಡಿದೆ.

ಅವನು ಪೋಲೆಂಡಿಗೆ ಹಿಂತಿರುಗಿದಾಗ ಒಂದು ವಿ.ಸಿ.ಆರ್. ಮತ್ತು ಒಂದು ಹಳೆಯ ವಿಂಡ್ ಸರ್ವಿಂಗ್ ಬೋರ್ಡ್(ಗಾಳಿಯ ಸಹಾಯದಿಂದ ತೊರೆ ನೆರೆಯ ಮೇಲೆ ಹೋಗಲು ಹಲಗೆ) ಜೊತೆಗೆ ಸ್ಕೀಯಿಂಗ್ ಗೇರ್ (ನೀರ್ಗಲ್ಲಮೇಲೆ ಓಡಾಡಲು ಅಂಗಾಲಿಗೆ ಬಿಗಿದುಕೊಳ್ಳುವ ಮರದ ತುಂಡು) ಕೊಂಡುಕೊಂಡ.

ಶೀಘ್ರವೇ ನನ್ನ ತಾಯಿಯಿಂದ ಒಂದು ಪತ್ರ ಬಂತು. ಆಕೆ ಬರೆದಿದ್ದಳು "ಮಸಾಯಿಕ್ ಮಹತ್ತರವಾದ ಬದಲಾವಣೆ ಹೊಂದಿದ್ದಾನೆ" ಅವನು ಬಹಳ ಗಂಭೀರ ಸ್ವಭಾವದವನೂ, ಶ್ರಮಜೀವಿಯೂ ಆಗಿದ್ದಾನೆ. ನನಗೆ ಎಂಥ ಉತ್ತಮನಾದ ಮೊಮ್ಮಗನಿದ್ದಾನೆ"!

ಎಂಥ ಉತ್ತಮನಾದ ಮೊಮ್ಮಗ-ನನ್ನ ಪ್ರೀತಿಯ-ಅಮ್ಮ- ಈ-ಬದಲಾವಣೆ ಇದ್ದಕ್ಕಿದ್ದಂತೇ ಆದುದಲ್ಲ. ಹಾಗೆಂದಿಗೂ ಆಗುವುದೂ ಇಲ್ಲ. ಇದಕ್ಕೆ ಬೇಕಾಗಿರುವುದು ಒಂದು ಬಕ್ಕೀಟು ಕಲ್ಲಿದ್ದಲು. ಮೂವತ್ತು ವರ್ಷದ ಹಿಂದೆ ನಾನು ಕಲಿತ ಪಾಠಕ್ಕೆ ನಿನಗೆ ಧನ್ಯವಾದಗಳು. ಆ ಪಾಠವನ್ನು ನಾನು ನನ್ನ ಮಗನಿಗೆ ರವಾನಿಸಿದ್ದೇನೆ.



ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು.

-ಮಹಾಭಾರತ

ಉಂಬ ಜಂಗಮನಿಗಿಕ್ಕಿದ ಬೋನ

ಡಾ. ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ.ಸಂಘ, ಬಾಗಲಕೋಟ-೫೮೭೧೦೧

ಒಂದು ಮಧ್ಯಮ ಗಾತ್ರದ ಊರು. ಊರಿನಲ್ಲಿ ಒಂದು ಒಳ್ಳೆಯ ಕಾಲೇಜು. ಕಾಲೇಜಿನ ಪ್ರಿನ್ಸಿಪಾಲರ ಮನೆ. ಕಾಲೇಜಿಗೆ ಸಮೀಪದಲ್ಲಿತ್ತು. ಪ್ರಿನ್ಸಿಪಾಲರು ಪ್ರತಿಭಾವಂತರು. ದಕ್ಷ ಆಡಳಿತಗಾರರು, ಎಲ್ಲರಿಗೂ ಅವರನ್ನು ಕಂಡರೆ ಭಯ ಭಕ್ತಿ. ಬಡ ವಿದ್ಯಾರ್ಥಿಗಳಿಗೆ ಅವರು ಕೊಡುವ ಪ್ರೋತ್ಸಾಹವು ಎಂಥವರನ್ನು ದಂಗು ಬಡಿಸುತ್ತಿತ್ತು.

ಅಂದು ಜನವರಿ ೧೭ ದಿನಾಂಕು. ಅವರ ಮನೆಯಲ್ಲಿ ಸಡಗರ ಕಾಣುತ್ತಿತ್ತು. ಮನೆಗೆ ತಳಿರು ಕಟ್ಟಿದ್ದರು. ಬಾಗಿಲ ಮುಂದೆ ನೀರು ಚಿಮುಕಿಸಿ ದೊಡ್ಡ ರಂಗವಲ್ಲಿ ಹಾಕಿದ್ದರು. ಮನೆಯ ಯಜಮಾನತಿ ಪ್ರಿನ್ಸಿಪಾಲರು ಹಾಗೂ ಅವರ ಮಕ್ಕಳು ಹೊಸ ಬಟ್ಟೆಯುಟ್ಟು ಓಡಾಡುತ್ತಿದ್ದರು. ದೂರದಿಂದಲೇ ನೋಡಿದರೆ ಒಳಗಿನ ಸಂಭ್ರಮದ ಅರಿವು ಆಗುತ್ತಿತ್ತು. ಕಾಲೇಜು ನಡೆಯುತ್ತಿತ್ತು. ಕಾರಣ ಪ್ರಿನ್ಸಿಪಾಲರು ರಜೆ ಹಾಕಿ ಮನೆಯಲ್ಲಿಯೇ ಇದ್ದರು. ಮನೆಯ ಕೆಲಸಕ್ಕೆ ಇದ್ದ ಆಳು ಎಲ್ಲ ಕಡೆ ಓಡಾಡಿ ಅಂಥಿಂಥ ಕಾರ್ಯಗಳನ್ನು ಮಾಡುತ್ತಿದ್ದ. ಅವನೂ ಸ್ವಚ್ಛವಾದ ಬಟ್ಟೆ ಧರಿಸಿದ್ದ ಹಣೆಗೆ ವಿಭೂತಿ ಧಾರಣೆ ಮಾಡಿದ್ದ.

ಮಧ್ಯಾಹ್ನದ ಹೊತ್ತಿಗೆ ಮನೆಯಿಂದ ಸಿಹಿ ತಿನಿಸುಗಳ ಸುವಾಸನೆ ಸೂಸತೊಡಗಿತು. ಮನೆಯಲ್ಲಿ ಅಂದು ಪ್ರಿನ್ಸಿಪಾಲರ ತಂದೆಯವರ ದಿನವಿತ್ತು. ತಂದೆಯವರ ಫೋಟೋ ಇಟ್ಟು ಪೂಜೆ ಮಾಡಿದ್ದರು. ಎಡೆ ಮಾಡಿದರು. ಕರ್ಪೂರ ಹಚ್ಚಿ ಕಾಯಿ ಒಡೆದರು. ಎಲ್ಲರೂ ಭಕ್ತಿಯಿಂದ ಅಜ್ಜನ ಫೋಟೋಗೆ ಸಾಷ್ಟಾಂಗ ನಮಸ್ಕಾರ ಹಾಕಿದರು. ಪ್ರಿನ್ಸಿಪಾಲರು ತಂದೆಯ ಫೋಟೋವಿಗೆ ನಮಸ್ಕರಿಸಿದರು.

ಅಡುಗೆ ಮನೆಯಿಂದ ವಾರ್ತೆ ಬಂದಿತು. ಅಡುಗೆ ಎಲ್ಲವೂ ಸಿದ್ಧವಾಗಿದೆ. ಐದು ಜನ ಜಂಗಮರನ್ನು ಕರೆದುಕೊಂಡು ಬಂದು ಪ್ರಸಾದಕ್ಕೆ ಕೂಡ್ರಿಸಬೇಕು. ಪ್ರಿನ್ಸಿಪಾಲರು ಒಳ್ಳೆಯದೆಂದು ಮನೆ ಬಿಟ್ಟು ಹೊರಬಂದರು. ಮನೆಯ ಆಳು ಮಗನನ್ನು ಕರೆದರು. ''ವೀರಣ್ಣ ಪೇಟೆಗುಂಟ ಸಂದಿಗಳಲ್ಲಿ ನಡೆಯುತ್ತ ಹೋಗು. ಇಂದು ಮಧ್ಯಾಹ್ನದ ಊಟಕ್ಕೆ ಗತಿ ಇಲ್ಲ ಎನ್ನುವ ಐದು ಜನರನ್ನು ಕರೆದುಕೊಂಡು ಬಾ, ಅವರಿಗೆ ಊಟ ಮಾಡಿಸುವೆನೆಂದು ಮಾತ್ರ ಹೇಳು''. ವೀರಣ್ಣನಿಗೆ ವಿಚಿತ್ರ ಎನಿಸಿತು. ಕಾಲೇಜಿನಲ್ಲಿ ಏಳೆಂಟು ಜನ ವಿದ್ವಾಂಸರಾದ ಜಂಗಮ ಅಧ್ಯಾಪಕರಿದ್ದಾರೆ. ಅವರು ಬೇಡ ಎಂದರೆ ಸಮೀಪದಲ್ಲೆ ಕೆಲವು ಮಠಗಳಿವೆ. ಮಠದ ಸ್ವಾಮಿಗಳಿಗೆ ಹೇಳಿದರೆ ಇನ್ನೂ ಯುಕ್ತ. ಇಂಥದೂ ಬೇಡ ಎಂದರೆ ಸ್ವಲ್ಪೇ ದೂರದಲ್ಲಿ ಬೋರ್ಡಿಂಗ್ ವಿದ್ಯಾರ್ಥಿಗಳಿದ್ದಾರೆ. ಇವೆಲ್ಲ ಬಿಟ್ಟು ಗೊತ್ತಿಲ್ಲದವರನ್ನು ಹುಡುಕುವುದು ಅರ್ಥಹೀನ ಎನ್ನುತ್ತ ವೀರಣ್ಣ ನಡೆದ.

ಕರ್ನಾಟಕ ಆ ಭಾಗವು ಪದೇ ಪದೇ ಬರಗಾಲಕ್ಕೆ ಈಡಾಗುವಂಥದು. ಅಲ್ಲಿಯ ಬಿಸಿಲು ವಿಪರೀತ. ಅದರಲ್ಲಿ ನಡೆಯುವುದೆಂದರೆ ಅಗ್ನಿ ಹಾದಂತೆಯೇ. ಅಂಥ ಬಿಸಿಲಿನಲ್ಲಿ ನಡೆಯುತ್ತ ಹೋಗುವಾಗ ಭೇಟಿಯಾದ ಐದು ಜನರನ್ನು ಜೊತೆಗೆ ಕರೆದುಕೊಂಡು ಬಂದ ಇವರ ದಾರಿಯನ್ನೇ ಕಾಯುತ್ತಿದ್ದ ಪ್ರಿನ್ಸಿಪಾಲರು ಅವರನ್ನು ಕಂಡು ಸಂತೋಷಪಟ್ಟರು. ಅವರಿಗೆ ಕಾಲಿಗೆ ನೀರು ಕೊಟ್ಟು ಮುಖ ತೊಳೆಯಲು ಹೇಳಿದರು. ಬಂದ ಐದು ಜನರ ಹೊಟ್ಟೆ ಬೆನ್ನಿಗೆ ಅಂಟಿಕೊಂಡಿತ್ತು. ಮೈಯಲ್ಲಿಯ ಎಲುವುಗಳು ಹೊರಬರಲು ಹಾತೊರೆಯುತ್ತಿದ್ದುವು. ಅವರು ಉಟ್ಟ ಧೋತರ, ತೊಟ್ಟ ಅಂಗಿಗಳು ನೀರಿನಲ್ಲಿ ಹಾಕಿದರೆ ಕರಗಿ ಹೋಗುವ ಭೀತಿಯಿತ್ತು.

ಬಂದ ಐದೂ ಜನರನ್ನು ತಂದೆಯ

ಫೋಟೋ ಪೂಜಿಸಿದ ಕೊಠಡಿಯಲ್ಲಿ ಚಾಪೆಯ ಮೇಲೆ ಕೂಡ್ರಿಸಿದರು. ಅವರಿಗೆ ತಾಟು, ನೀರು ಇಟ್ಟರು. ಅಂದು ಎಡೆಗೆ ತಯಾರಿಸಿದ ಪಕ್ವಾನ್ನಗಳನ್ನು ನೀಡಿದರು. ಐದೂ ಜನರು ಹೊಟ್ಟೆ ಬಿರಿಯುವಂತೆ ಉಂಡರು. ಊಟದನಂತರ ಅವರಿಗೆ ತಾಂಬೂಲ ಕೊಟ್ಟರು. ಪ್ರತಿ ಒಬ್ಬನಿಗೆ ಒಂದು ಜೋಡು ಧೋತರ ಒಂದು ಜೋಡು ಅಂಗಿಯ ಬಗೆಗೆ ಕೊಟ್ಟು, ಅಂಗಿ ಹೊಲಿಸಿ ಕೊಳ್ಳಲು ಹಣವನ್ನು ಕೊಟ್ಟು ಅವರೆಲ್ಲರಿಗೂ ನಮಸ್ಕರಿಸಿ ಕೇಳಿದರು. ''ಎನ್ರಪಾ ಊಟ ಸರಿಯಾಗಿ ನಡೆಯಿತೋ ?''

ಅವರು ''ಭಾಳ ಛಲೋ ಆತ್ರ ಸಾಹೇಬ್ರ''.

ಪ್ರಿನ್ಸಿಪಾಲರು-''ಹೊಟ್ಟೆ ತುಂಬಿತಲ್ಲಾ?''

ಅವರು ''ಸಾಹೇಬ್ರ ಭಾಳ ತೃಪ್ತಿ ಆಗೆದರಿ.

ಇಂಥ ಒಳ್ಳೆ ಊಟ ನಮಗೆ ಸಿಕ್ಕೆ ಇಲ್ಲ'', ಎಂದರು.

ಪ್ರಿನ್ಸಿಪಾಲರಿಗೂ ತೃಪ್ತಿಯಾಗಿತ್ತು. ಬಂದ ಐದೂ ಅತಿಥಿಗಳು ಪ್ರಿನ್ಸಿಪಾಲರನ್ನೂ ಅವರ ಮನೆಯವರನ್ನು ಹರಸುತ್ತ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ತಮ್ಮ ತಮ್ಮ ದಾರಿ ಹಿಡಿದರು.

ಪ್ರಿನ್ಸಿಪಾಲರು ಸಂತೋಷದಲ್ಲಿ ಮುಳುಗಿದ್ದರು. ಅತಿಥಿಗಳ ಹರಕೆ ತಮ್ಮ ತಂದೆಯವರ ಆಶೀರ್ವಾದವೆಂದು ಬಗೆದರು. ಮನೆ ಮಕ್ಕಳನ್ನು, ಆಳು ವೀರಣ್ಣನ್ನು ತಮ್ಮ ಶ್ರೀಮತಿಯವರನ್ನು ಕೂಡಿಕೊಂಡು ನಗುನಗುತ್ತ ಊಟ ಮಾಡಿದರು.

ಮನೆಯ ಆಳು ವೀರಣ್ಣನಿಗೆ ಇದೆಲ್ಲ ಒಂದು ಕನಸಿನಂತೆ ಕಂಡಿತು. ದೂರಿನಿಂದಲೇ ಪ್ರಿನ್ಸಿಪಾಲರು ಪಡುವ ಸಂತೋಷ ಕಂಡು ಅವನ ಕಣ್ಣುಗಳು ತುಂಬಿದುವು. ಅಂಥವರ ಸೇವೆ ಮಾಡುತ್ತಿರುವ ತಾನು ಒಬ್ಬ ಭಾಗ್ಯವಂತನೆಂದು ತಿಳಿದ.

ಉಂಡವರನ್ನೇ ಕರೆದು ಉಣಿಸಿದರೆ ಒಂದಲ್ಲೊಂದು ಹೆಸರಿಟ್ಟು ಹೋಗುವುದು ಸಾಮಾನ್ಯ. ನೀಡುವವರು ಸರಿ ಇದ್ದರೆ ಅಡುಗೆಗೆ ಹೆಸರಿಡುವುದು. ಅಡುಗೆ ಚೆನ್ನಾಗಿದ್ದರೆ ನೀಡುವವರನ್ನು ಬೈಯ್ಯುವುದು ನಡೆದಿರುತ್ತದೆ. ಹಸಿಯದೇ ಇದ್ದವರನ್ನು ಕರೆದರೆ ಬೈಸಿಕೊಳ್ಳಲು ಕರೆದಂತೆಯೇ. ಹಸಿದವರನ್ನು ಕರೆದು ಉಣಿಸಿದರೆ ನೀಡುವವರನ್ನೂ ಹರಸುತ್ತಾರೆ. ಅಡಿಗೆಯವರನ್ನೂ ಹೊಗಳುತ್ತಾರೆ. ಮೃತರ ಆತ್ಮಕ್ಕೆ ಶಾಂತಿ ಬಯಸುತ್ತಾರೆ. ಮನೆಯವರಿಗೆ -ಮನೆಯ ಯಜಮಾನನಿಗೆ ಒಳ್ಳೆಯದಾಗಲೆಂದು ಪ್ರಾರ್ಥಿಸುತ್ತಾರೆ. ಉಂಡು ಹೋಗುವವರಿಗೂ ತೃಪ್ತಿ. ಉಣಲು ವ್ಯವಸ್ಥೆ ಮಾಡಿದವರಿಗೂ ತೃಪ್ತಿ.

ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ.
ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

-ಸ್ವಾಮಿವಿವೇಕಾನಂದ

ಶ್ವಾನ-ಮಾನವ ಋಣಾನುಬಂಧ

ಸರೋಜ ಆರ್. ಆಚಾರ್ಯ
"ಭಾಗ್ಯಶ್ರೀ"
೧-೨-೫೦ ಬಿ, ಕುಂಜಿ ಬೆಟ್ಟು
ಉಡುಪಿ-೫೭೬ ೧೦೨

ಅವಳ ಹೆಸರು ಡೋನಾ ಜೇಕಬ್ಸ್. ರೇಖಾ ವಿನ್ಯಾಸದಲ್ಲಿ ನಕ್ಷೆಗಳನ್ನು ತಯಾರಿಸುವ ವೃತ್ತಿ. ೧೯೯೪ರ ಅದೊಂದು ದುರ್ದಿನದ ಇಳಿಹಗಲಿನಲ್ಲಿ ಅವಳ ಜೀವನವೇ ಬುಡಮೇಲಾಗಿ ಹೋಗಿತ್ತು. ಕಿರಾಣಿ ಸಾಮಾನುಗಳನ್ನು ಲಗುಬಗೆಯಿಂದ ಇಳಿಸಿಕೊಳ್ಳುತ್ತಿರುವಾಗ ಫಕ್ಕನೆ ಅವಳ ದೇಹದ ಎಡಬದಿ ಭಾಗಶಃ ಮರಕಟ್ಟಿದಂತಾಗಲು ನೆಲಕ್ಕೆ ಕುಸಿದು ಬಿದ್ದಿದ್ದಳು. ಅಂದು ಮೂರ್ಛೆ ರೋಗದ ಮೊದಲ ಪ್ರಹಾರಕ್ಕೆ ಅವಳು ತುತ್ತಾಗಿದ್ದಳು. ಆಗ ಅವಳಿಗೆ ಇನ್ನೂ ನಲವತ್ತೆಂಟು ವರ್ಷ ವಯಸ್ಸು!

ಮುಂದಿನ ತಿಂಗಳುಗಳಲ್ಲಿ ಡೋನಾ ಆಗಿಂದಾಗ ಈ ರೋಗದ ಆಕ್ರಮಣಕ್ಕೆ ಸಿಕ್ಕಿ ಒಂದೇ ದಿನದಲ್ಲಿ ಹಲವಾರು ಸಲ ಒದ್ದಾಡುತ್ತಿದ್ದಳು. ಆಗೆಲ್ಲ ಅವಳ ದೇಹ ಹತೋಟಿ ಮೀರಿ ಕಂಪಿಸುತ್ತಿತ್ತು, ಅಥವಾ ಅವಳು ಸ್ವಪ್ನದಲ್ಲಿರುವವಳಂತೆ ತೊದಲು ಶಬ್ದಗಳನ್ನು ಹೊರಡಿಸುತ್ತಿದ್ದಳು. ಕೆಲವೊಮ್ಮೆ ಸಂಪೂರ್ಣವಾಗಿ ಪ್ರಜ್ಞೆಯನ್ನೇ ಕಳೆದುಕೊಳ್ಳುತ್ತಿದ್ದಳು. ಜೀವನೋತ್ಸಾಹವೇ ಕುಗ್ಗಿ, ಖಿನ್ನತೆ ಆವರಿಸಲು ಡೋನಾ ಮನೆಯಿಂದ ಹೊರಗೆ ಬರುವುದನ್ನೇ ಕಡಿಮೆ ಮಾಡಿ ಬಿಟ್ಟಿದ್ದಳು.

ಅವಳನ್ನು ಈ ವ್ಯಾಕುಲತೆಯಿಂದ ಹೊರತರಲು ಅವಳ ಪತಿ ಒಂದು ಉಪಾಯ ಹೂಡಿದ. ರಾಟ್‌ವೆಯ್ಲರ್ ಎಂಬ ಜರ್ಮನ್ ಷೆಫರ್ಡ್ ಮಿಶ್ರತಳಿಯ ಒಂದು ನಾಯಿಮರಿಯನ್ನು ಅವಳಿಗೆ ತಂದು ಕೊಟ್ಟ. ಅತ್ಯಂತ ಚುರುಕಾದ ಆ ನಾಯಿಮರಿ ಪಾಟ್ರಾ (ನಾಯಿಮರಿಗಿಟ್ಟ ಹೆಸರು) ಮೆಲ್ಲಮೆಲ್ಲಗೆ ಡೋನಾಳನ್ನು ಪುಸಲಾಯಿಸಿ ಹಿಂದಿನ ಸ್ಥಿತಿಗೆ ಕರೆತರುವಲ್ಲಿ ಯಶಸ್ವಿಯಾಯಿತು.

ದಿನಗಳೆದಂತೆ ಕೆಲವು ವಿಚಿತ್ರ ಘಟನೆಗಳು ನಡೆಯತೊಡಗಿದುವು. ತೋಟದಲ್ಲೋ ಇನ್ನೆಲ್ಲೋ ಡೋನಾ ತನ್ನ ಕೆಲಸದಲ್ಲಿ ಮಗ್ನಳಾಗಿರುವಾಗ ಪಾಟ್ರಾ ತನ್ನ ತಲೆಯಿಂದ ಅವಳ ಮೊಣಕಾಲಿನ ಹಿಂಬದಿಯನ್ನು ಗುದ್ದಿ ಅವಳನ್ನು ಬೀಳಿಸಿ ಬಿಡುತ್ತಿತ್ತು. ಒಮ್ಮೊಮ್ಮೆ ಅನಿರೀಕ್ಷಿತವಾಗಿ ಅವಳ ಕೈಗಳನ್ನು ಎಳೆದಾದರೂ ಅವಳನ್ನು ನೆಲಕ್ಕೊರಗಿಸುತ್ತಿತ್ತು. "ನಾನು ಅದನ್ನು ನೋಡಿ ಕಿರುಚಿಕೊಂಡಷ್ಟು ಅದು ಮತ್ತೂ ಉತ್ತೇಜನಗೊಳ್ಳುತ್ತಿತ್ತು", ಎಂದು ನೆನಪಿಸಿಕೊಳ್ಳುತ್ತಾಳೆ ಡೋನಾ ಜೇಕಬ್ಸ್.

ನಾಯಿಗಳ ವರ್ತನೆಗಳ ತಜ್ಞರನ್ನು ಸಂಪರ್ಕಿಸಿ ಅವರ ಸಲಹೆಯಂತೆ ಪಾಟ್ರಾನ ನಡತೆಯ ಹಿಂದು ಮುಂದಿನ ಜಾಡನ್ನು ಪರಿಶೀಲಿಸಿದಾಗ ಆಶ್ಚರ್ಯದ ಸಂಗತಿ ಬೆಳಕಿಗೆ ಬಂತು. ಯಾವಾಗೆಲ್ಲಾ ಪಾಟ್ರಾ ಅವಳನ್ನು ಬೀಳಿಸಿದೆಯೋ ಆಗೆಲ್ಲ ಹತ್ತು ಹದಿನೈದು ನಿಮಿಷಗಳ ಒಳಗಾಗಿ ಅವಳು ಅಪಸ್ಮಾರದ ಆಘಾತಕ್ಕೊಳಗಾಗಿರುತ್ತಿದ್ದಳು! "ಅಂದರೆ? ಇದು ಸಾಧ್ಯವೇ? ಮುಂಬರಲಿರುವ ರೋಗಬಾಧೆಯ ಅರಿವು 'ಪಾಟ್ರಾ'ಗೆ ಮೊದಲೇ ಉಂಟಾಗುತ್ತಿತ್ತೇ? ಅವಳನ್ನು ರಕ್ಷಿಸಲೆಂದೇ ಅದು ಮುಂದಾಗಿ ಅವಳನ್ನು ಬೀಳಿಸುತ್ತಿತ್ತೇ?"

ಹೌದು! ಮೂರ್ಛೆರೋಗಿಗಳಿಗೆ ಬವಳಿ ಬರಲಿರುವುದನ್ನು ಮುಂದಾಗಿಯೇ ಸೂಚಿಸಬಲ್ಲ ಕೆಲವೇ ಕೆಲವು ನಾಯಿಗಳಲ್ಲಿ 'ಪಾಟ್ರಾ' ಕೂಡ ಒಂದು! ಕೆಲವು ನಾಯಿಗಳು ಮಾತ್ರ ಈ ಅಸಾಧಾರಣ ಸಾಮರ್ಥ್ಯವನ್ನು ಏಕೆ ಅಥವಾ

ನವೆಂಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಲೈನ್ ವಾಲ್ಡ್‌ಸ್ಮಿತ್‌ರ 'ವಾಟ್ ಎಕ್ಸ್‌ಪ್ಲೈನ್ಸ್ ದೇರ್ ಸಿಕ್ಸ್‌ಸೆನ್ಸ್'? ಎನ್ನುವ ಲೇಖನದ ಕನ್ನಡ ಭಾವಾನುವಾದ.

ಹೇಗೆ ಹೊಂದಿರುತ್ತವೆ ಎನ್ನುವುದು ನಿಗೂಢವೇ ಆಗಿದೆ. ಆದರೆ ತಮ್ಮ ಆರೋಗ್ಯ-ಕೆಲವೊಮ್ಮೆ ಜೀವವೇ- ತೂಗುಯ್ಯಾಲೆಯಲ್ಲಿ ಓಲಾಡುತ್ತಿರುವ ಮನುಷ್ಯರ ಪಾಲಿಗಂತೂ ನಾಯಿಗಳ ಈ 'ಆರನೆಯ ಅರಿವು ನಿಸರ್ಗದತ್ತವಾದ ಒಂದು ವರದಾನವಾಗಿಯೇ ಪರಿಣಮಿಸಿದೆ.

* * *

ಸಂಯುಕ್ತ ರಾಜ್ಯಗಳಲ್ಲಿ ಅಂಧರಿಗೆ ನೆರವಾಗಿ ಮಾರ್ಗ ತೋರಿಸಲು ನಾಯಿಗಳಿಗೆ ತರಬೇತು ನೀಡುವ ನೂರಕ್ಕೂ ಹೆಚ್ಚಿನ 'ಸೇವಾ ಶ್ವಾನ ಕೇಂದ್ರ'ಗಳಿದ್ದರೂ, ಸುಮಾರು ಇಪ್ಪತ್ತು ಕೇಂದ್ರಗಳು ಮಾತ್ರ ಅಪಸ್ಮಾರದ ರೋಗಿಗಳಿಗೆ ನೆರವಾಗಲು ನಾಯಿಗಳಿಗೆ ಕಲಿಸುತ್ತವೆ. ಮೊದಲು ಮೂಲಭೂತವಾದ ವಿಧೇಯತೆ ಮತ್ತು ಆಜ್ಞಾಪಾಲನೆಯಲ್ಲಿ ಪಳಗಿದ ಬಳಿಕ, ಈ ನಾಯಿಗಳು ಮೂರ್ಛಾ ರೋಗಿಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಕರೆದೊಯ್ಯುವುದು, ಅಷ್ಟೇ ಏಕೆ, ಫೋನಿನಲ್ಲಿ ತುರ್ತುಕರೆ ಕಳುಹಿಸುವವರೆಗಿನ ವಿಶೇಷ ಚತುರತೆಯನ್ನು ಕೂಡ ಪಡೆಯುತ್ತವೆ. ಹಾಗೆಂದು ಎಲ್ಲ ನಾಯಿಗಳಿಗೂ ಈ ತರಬೇತಿಯನ್ನು ನೀಡಲು ಸಾಧ್ಯವಿಲ್ಲ. ಸ್ವಾಭಾವಿಕವಾಗಿಯೇ ಮಾನವ ಪ್ರೇಮಿಯಾಗಿರುವ , ಚುರುಕಾದ ಮತ್ತು ಬುದ್ಧಿವಂತ ಶ್ವಾನಗಳು ಮಾತ್ರ ಈ ಶಿಕ್ಷಣವನ್ನು ಬೇಗನೆ ಗ್ರಹಿಸಿಕೊಳ್ಳುತ್ತವೆ.

ಹೀಗೆ ತರಬೇತಿಗಳಿಂದ ನಾಯಿಗಳನ್ನು ಎಷ್ಟೇ ತಯಾರು ಮಾಡಿದರೂ ಮುಂದೆ ಬರಲಿರುವ ಅಪಸ್ಮಾರದ ಕುರಿತು ಎಚ್ಚರಿಕೆ ನೀಡಬಲ್ಲ ಅದ್ಭುತ ಶಕ್ತಿ ಅವುಗಳಿಗೆ ನೈಸರ್ಗಿಕವಾಗಿ ಒದಗಿ ಬಂದಿರುವ ವರದಾನವೆಂದೇ ಹೇಳಬೇಕಾಗುತ್ತದೆ. ರೋಗದ ಹೊಡೆತಕ್ಕಿಂತ ಮುಂಚೆ ಅವು ಬೊಗಳಬಹುದು, ಊಳಿಡಬಹುದು, ವ್ಯಕ್ತಿಯ ಮಡಿಲಿಗೇ ಜಿಗಿದು ಹತ್ತಿಬಿಡಬಹುದು. ಅವನನ್ನು ದುರುಗುಟ್ಟಿಕೊಂಡು ನೋಡಬಹುದು ಅಥವಾ ತಲೆಯಿಂದ ತಿವಿಯಬಹುದು .ಮೇಲ್ನೋಟಕ್ಕೆ ಇವೆಲ್ಲ ನಾಯಿಯ ದುರ್ನಡತೆಯೆಂದೇ ಕಾಣಬಹುದು.

ಫ್ಲೋರಿಡಾ ಮಹಾವಿದ್ಯಾಲಯದ ಸಹ ಸಂಶೋಧಕರೂ, ಶ್ವಾನಗಳ ತರಬೇತುಗಾರರೂ ಆಗಿರುವ ಡೆಬೊರಾ ಡ್ಯಾಲ್ಜೀಲ್ ಎಂಬವರು ಹೇಳುತ್ತಾರೆ, "ಒಂದು ನಾಯಿ ಒಡೆಯನಿಗೆ ಮುನ್ನೆಚ್ಚರಿಕೆ ನೀಡುತ್ತಿದೆಯೇ ಅಥವಾ ದುಷ್ಟತನದಿಂದ ವರ್ತಿಸುತ್ತಿದೆಯೇ ಎನ್ನುವುದನ್ನು ಒಬ್ಬ ಸಾಮಾನ್ಯ ವ್ಯಕ್ತಿ ಅರಿಯಲಾರ!"

ಹೇಗಿದ್ದರೂ ಈ ರೀತಿಯ ಪೂರ್ವ ಸೂಚನೆಯಿಂದಾಗಿ ರೋಗಿಗೆ ಅತ್ಯಮೂಲ್ಯವಾದ ಕಾಲಾವಕಾಶ ಲಭಿಸುತ್ತದೆ. ಒಂದು ಸುರಕ್ಷಿತವಾದ ತಂಗುದಾಣವನ್ನು ಸೇರಿಕೊಳ್ಳಲು ಅಥವಾ ಕೆಲವೊಮ್ಮೆ ಮೂರ್ಛೆಯನ್ನು ತಡೆಯಬಲ್ಲ ಔಷಧಿಗಳನ್ನು ಸೇವಿಸಲು ಆ ಕೆಲವು ನಿಮಿಷಗಳು ನೆರವಾಗುತ್ತವೆ. ಸಾಕು ನಾಯಿ ಮತ್ತು ಒಡೆಯನ ಮಧ್ಯೆ ಸರಿಯಾದ ಹೊಂದಾಣಿಕೆಯಾಗಿ ಬಿಟ್ಟರೆ ನಿಜವಾಗಿಯೂ ಜೀವನ ಪಥವನ್ನೇ ಬದಲಿಸುವಂಥ ಉತ್ತಮ ಫಲಿತಾಂಶಗಳು ದೊರೆಯುತ್ತವೆ. ಜೆರ್ರಿ ಎಂಪೇ ಎಂಬುವಳ ಪುತ್ರ ಒಬ್ಬ ಅಪಸ್ಮಾರದ ರೋಗಿ. ಒಂದಿನಿತೂ ಮುನ್ಸೂಚನೆಯಿಲ್ಲದೆ ದಿನಕ್ಕೆ ಐದಾರು ಬಾರಿಯೂ ಬವಳಿ ಬಂದು ಬೀಳುತ್ತಿದ್ದ ಜೇಕಬ್, ಎರಡು ಸಲ ತೀವ್ರ ಸ್ವರೂಪದ ವಿಕಂಪನಗಳನ್ನು ಅನುಭವಿಸಿದ್ದ; ತನ್ಮೂಲಕ ಈಗಾಗಲೇ ಕೆಲವು ಹಲ್ಲುಗಳನ್ನೂ ಕಳೆದುಕೊಂಡಿದ್ದ.

ತನ್ನ ಕಂದನಿಗೆ ಹೇಗಾದರೂ ನೆರವಾಗಲು ಒದ್ದಾಡುತ್ತಿದ್ದ ತಾಯಿ ಜೆರ್ರಿ ಅವನಿಗೆ ಸುಧಾರಿತ ಲ್ಯಾಬ್ರಡಾರ್ ತಳಿಯ, ಮತ್ತು ವಿಶಿಷ್ಟ ತರಬೇತಿ ಪಡೆದ, ಹಂಟರ್ ಎಂಬ ನಾಯಿಯನ್ನು ಉಡುಗೊರೆಯಾಗಿ ನೀಡಿದಳು. ಸಾತ್ವಿಕ ಸ್ವಭಾವದ ಹಂಟರ್ ಮನೆಗೆ ಬಂದು ಕೇವಲ ಒಂದೇ

ತಿಂಗಳ ಒಳಗೆ ಕೆಲವು ವಿನೂತನವಾದ ಬದಲಾವಣೆಗಳು ಗೋಚರಿಸಿದುವು. ಇದ್ದಕ್ಕಿದ್ದಂತೆ ಜೇಕಬ್‌ನಿಂದ ದೂರ ಸರಿವ ನಾಯಿ, ನೇರವಾಗಿ ಜೆರ್ರಿ ಮತ್ತು ಅವಳ ಪತಿಯನ್ನು ಮೂಗಿನಿಂದ ತಿವಿದು ತಿವಿದು ಜೇಕಬ್ ಇದ್ದಲ್ಲಿಗೆ ಕರೆತರುತ್ತಿತ್ತು, ಮತ್ತು ಜೇಕಬ್‌ನನ್ನು ಒಮ್ಮೆ, ಜೆರ್ರಿಯನ್ನೊಮ್ಮೆ ಎಂದು ಸರದಿಯಂತೆ ನೆಟ್ಟ ನೋಟದಿಂದ ನೋಡುತ್ತಿತ್ತು. ಇದಾದ ಸುಮಾರು ೩೦ ನಿಮಿಷಗಳ ಒಳಗಾಗಿ ಜೇಕಬ್‌ಗೆ ಬವಳಿ ಬರುತ್ತಿತ್ತು.

ಹಂಟರ್‌ನ ಈ ಪ್ರಸಂಗಾವಧಾನತೆಯಿಂದ ಎಂಪೇ ಕುಟುಂಬದವರು ಎಷ್ಟೋ ದಿನಗಳ ತರುವಾಯ ನೆಮ್ಮದಿಯ ಉಸಿರು ಬಿಡುವಂತಾಯಿತು. ಬರಲಿರುವ ಮೂರ್ಛೆಗೆ ಜೇಕಬ್‌ನನ್ನು ಮುಂದಾಗಿ ಸಿದ್ಧಗೊಳಿಸಿ, ಅವನಿಗೆ ಯಾವುದೇ ಪೆಟ್ಟಾಗುವುದನ್ನು ತಡೆಯುವ ಈ ಹಂಟರ್ ನಾಯಿಯು ಜೇಕಬ್ ಮೂರ್ಛಿತನಾಗಿರುವಾಗಲೂ ಅವನ ಮುಖವನ್ನು ಮೃದುವಾಗಿ ನೆಕ್ಕುತ್ತ ಅವನ ಬಳಿಯೇ ಮಲಗಿರುತ್ತಿತ್ತು.

ಇದರಿಂದ ಗೆಲುವಾಗಿರುವ ಜೇಕಬ್, ಪದೇ ಪದೇ ಬವಳಿ ಬರುವುದನ್ನು ಕಡಿಮೆ ಮಾಡಲು ಅಥವಾ ತಡೆಹಿಡಿಯಲು 'ವೇಗಸ್' ನರವನ್ನು ಪ್ರಚೋದಿಸುವ ವಿದ್ಯುನ್ಮಾನದ ಒಂದು ಉಪಕರಣವನ್ನು ತನ್ನ ಎದೆಯೊಳಗೆ ಅಳವಡಿಸಿಕೊಂಡಿದ್ದಾನೆ. ''ಹಂಟರ್ ನನಗೆ ಸಿಗದಿರುತ್ತಿದ್ದರೆ ನಾನು ಏನಾಗುತ್ತಿದ್ದೆನೋ ಏನೋ!'' ಈಗ ೧೩ ವರ್ಷ ವಯಸ್ಸಿನವನಾಗಿರುವ ಜೇಕಬ್ ಈ ರೀತಿ ಹಂಟರ್‌ನ ಗುಣಗಾನ ಮಾಡುತ್ತಾನೆ.

* * *

ನಾಯಿಗಳ ಈ ನಿಗೂಢ ಸಾಮರ್ಥ್ಯದ ಮೂಲಾಧಾರ ಕುರಿತು ಮೂರು ಸಿದ್ಧಾಂತಗಳು ಪ್ರಚಲಿತವಾಗಿವೆ. ಪಿಟ್ಸ್‌ಬರ್ಗ್‌ನ ವೈದ್ಯಕೀಯ ಮಹಾವಿದ್ಯಾಲಯದ ನರವ್ಯೂಹ ಶಾಸ್ತ್ರದ ತಜ್ಞ ಡಾ. ಡೇವಿಡ್ ಅಡೆಲ್ಸನ್ ಅವರ ಪ್ರಕಾರ, ಅಪಸ್ಮಾರದ ದಾಳಿಗಿಂತ ಮುಂಚಿತವಾಗಿ, ಮಿದುಳಿನಲ್ಲಿ, ನರಗಳಿಗೆ ಸ್ಪಂದನವನ್ನು ರವಾನಿಸುವ 'ನ್ಯೂರಾನ್' ಕೋಶಗಳ ಚಟುವಟಿಕೆಗಳು ಒಮ್ಮೆಲೆ ವೃದ್ಧಿಯಾಗುತ್ತವೆ. ತತ್ಪರಿಣಾಮವಾಗಿ ಅಲ್ಲಿ ತೀವ್ರತರವಾದ ವಿದ್ಯುತ್ ಬಿಡುಗಡೆಯಾಗುತ್ತದೆ. ನಾಯಿಗಳು ಈ ವಿದ್ಯುತ್ ಬದಲಾವಣೆಗಳನ್ನು ಪತ್ತೆ ಹಚ್ಚುತ್ತವೆ.

ಪ್ರಾಯಪ್ರಬುದ್ಧರಾದ ಮೂರ್ಛೆರೋಗಿಗಳಲ್ಲಿ ಶೇಕಡಾ೨೫ ವ್ಯಕ್ತಿಗಳು, ಅಪಸ್ಮಾರದ ದಾಳಿಗಿಂತ ತುಸು ಮುಂಚೆ ಅತಿ ಸೂಕ್ಷ್ಮವಾದ, ಮತ್ತು ಮಾರ್ಮಿಕವಾದ, 'ಅವುರಾ' ಎಂದು ಕರೆಯಲ್ಪಡುವ, ಸಂವೇದನೆಯ ಅನುಭವವನ್ನು ಪಡೆಯುತ್ತಾರೆ. ಆಗ ಅವರ ಮುಖದಲ್ಲಿ ಉಂಟಾಗುವ ಸಣ್ಣ ತುಡಿತ, ರೆಪ್ಪೆಗಳ ವಿಲಕ್ಷಣ ಬಡಿತ ಮುಂತಾದ ಸೂಕ್ಷ್ಮ ವಿಚಾರಗಳನ್ನು ನಾಯಿಗಳು ಕಂಡುಕೊಳ್ಳುತ್ತವೆ ಎನ್ನುವುದು ಇನ್ನೊಂದು ಸಿದ್ಧಾಂತ.

ಈ 'ಅವುರಾ'ಗಳು ರೋಗದ ಕೆಲವೇ ಕೆಲವು ಕ್ಷಣಗಳ ಮುಂಚೆ ಗೋಚರಿಸುವುವು. ಆದರೆ ಜಾಗರೂಕ ನಾಯಿಗಳೋ ಹಲವು ನಿಮಿಷಗಳ ಅಥವಾ ಒಂದು ಗಂಟೆಯ ಮೊದಲೇ ರೋಗದ ಪ್ರಹಾರವನ್ನು ಮುಂಗಾಣುತ್ತವೆ. ಆದ ಕಾರಣ ಈ ಸಿದ್ಧಾಂತದಲ್ಲಿ ತಿರುಳಿಲ್ಲವೆನ್ನುತ್ತಾರೆ ಫ್ಲೋರಿಡಾದ ಪ್ರಾಣಿ ವೈದ್ಯಕೀಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ರೋಜರ್ ರೀಪ್.

ಇವುಗಳಲ್ಲಿ ಹೆಚ್ಚು ಸ್ವೀಕಾರಾರ್ಹ ಮತ್ತು ಪ್ರಬಲ ವಿಶ್ಲೇಷಣೆ ನಾಯಿಗಳ ಘ್ರಾಣ ಶಕ್ತಿಯ ಕುರಿತಾಗಿವೆ. ಈ ಶಕ್ತಿ ನಾಯಿಗಳಲ್ಲಿ ಮನುಷ್ಯರಿಗಿಂತ ೩೦೦ ಪಟ್ಟು ತೀವ್ರವಾಗಿರುತ್ತದೆ. ಅಮೆರಿಕಾದ ಅಪಸ್ಮಾರ ಸಂಸ್ಥೆಯ ಸಲಹಾ ಸಮಿತಿಯ ಅಧ್ಯಕ್ಷರೂ, ಹಾರ್ವರ್ಡ್

ವೈದ್ಯಕೀಯ ವಿದ್ಯಾಲಯದಲ್ಲಿ ನರವ್ಯೂಹ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕರೂ ಆಗಿರುವ ಡಾ.ಸ್ಟೀವನ್ ಸ್ಲ್ಯಾಟರ್ ಅವರ ಹೇಳಿಕೆ ಹೀಗಿದೆ-''ಮೂರ್ಛೆ ಸಂಭವಿಸುದಕ್ಕಿಂತ ಮೊದಲು ಮಿದುಳಿನಲ್ಲಿ ಆಗುವ ಕೆಲವು ಅಸಾಧಾರಣ ಚಟುವಟಿಕೆಗಳಿಂದ ಸ್ರವಿಸ ಬಹುದಾದ ಬೆವರು ಅಥವಾ ಬೇರಾವುದೇ ಸ್ರಾವದ ವಾಸನೆಯನ್ನು ನಾಯಿ ಕೂಡಲೆ ಮೂಸಿ ಪತ್ತೆ ಹಚ್ಚ ಬಲ್ಲದು!''

ಈ ನಿಟ್ಟಿನಲ್ಲಿ ಊಹಾಪೋಹಗಳೇ ಹೆಚ್ಚು ಪ್ರಚಲಿತವಾಗಿವೆಯೇ ಹೊರತು ಯಾವುದೇ ನಿಖರ ಸಂಶೋಧನೆ ನಡೆದಿಲ್ಲವೆನ್ನುವುದು ದುರದೃಷ್ಟಕರ. ''ಈ ಚಮತ್ಕಾರದ ಮರ್ಮವನ್ನು ಭೇದಿಸುವುದಂತಿರಲಿ, ನಾವಿನ್ನೂ ಇದರ ಮೇಲ್ಪದರವನ್ನು ಗೀರುವುದಲ್ಲಿದ್ದೇವೆ,'' ಎನ್ನುತ್ತಾರೆ ರೋಜರ್ ರೀಪ್. ಏಕೆಂದರೆ ಫ್ಲೋರಿಡಾ ವಿದ್ಯಾಲಯದ ಸಂಶೋಧಕರು ಮೂರ್ಛೆರೋಗಿಗಳ ಸಂದರ್ಶನ ನಡೆಸಿದಾಗ, ನಾಯಿಯನ್ನು ಹೊಂದಿದ್ದ ೬೩ ಜನರಲ್ಲಿ ೫% ಮಾತ್ರ ತಮ್ಮ ನಾಯಿಯು ತಮ್ಮನ್ನು ಎಚ್ಚರಿಸುವ ಶಕ್ತಿಯನ್ನು ಪಡೆದಿರುವುದಾಗಿ ಹೇಳಿದರು.

''ಕ್ಯಾನೈನ್ ಪಾರ್ಟ್ನರ್ಸ್ ಫಾರ್ ಲೈಫ್'' (ಆ ಜೀವಾಂತ ಶ್ವಾನ ಬಂಧುಗಳು) ಎಂಬ ಶುನಕ ಕೇಂದ್ರದ ನಿರ್ದೇಶಕರಾದ ಡಾರ್ಲೀನ ಸಲಿವನ್‌ರ ಅಭಿಪ್ರಾಯದಂತೆ, ವೈದ್ಯರಲ್ಲೇ ಹಲವರಿಗೆ ನಾಯಿಗಳ ಈ ಸಾಮರ್ಥ್ಯ ಮತ್ತು ಅದರಿಂದ ರೋಗಿಗೆ ಆಗುವ ಪ್ರಯೋಜನದ ಕುರಿತಾದ ಸರಿಯಾದ ತಿಳುವಳಿಕೆ ಇಲ್ಲ. ಇನ್ನೂ ಕೆಲವು ವೈದ್ಯರು, ಸಂಶೋಧನೆಗಳು ದೃಢೀಕರಿಸುವ ತನಕ ಈ ಚಮತ್ಕಾರವನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ.

''ಆರಂಭದಲ್ಲಿ ನಾನು ಈ ಬಗ್ಗೆ ಆಸಕ್ತಿ ತೋರಿಲ್ಲವಾದರೂ, ನನ್ನ ಮಿತ್ರ ವೈದ್ಯರ ಒಂದೆರಡು ರೋಗಿಗಳು ತೀಕ್ಷ್ಣಮತಿಯ ನಾಯಿಗಳಿಂದ ಎಚ್ಚರಿಸಲ್ಪಡುವ ಬಗ್ಗೆ ತಿಳಿದನಂತರ ಇದು ನಿರಾಧಾರವಲ್ಲ, ಈ ವಿಷಯದಲ್ಲಿ ಸತ್ಯಾಂಶವಿದೆ, ಎನಿಸಿದೆ'', ಎನ್ನುತ್ತಾರೆ, 'ಮಾಯೋ ಕ್ಲಿನಿಕ್'ನ ನರವ್ಯೂಹ ಮತ್ತು ಮಕ್ಕಳ ವಿಭಾಗದ ಹಿರಿಯ ಸಲಹಾಕಾರರಾದ ಡಾ.ಸುರೇಶ್ ಕೊಟಗಲ್.

ಹೆಚ್ಚಿನ ಸಂಶೋಧಕರ ಮತ್ತು ಶ್ವಾನ ತರಬೇತಿದಾರರ ಏಕಾಭಿಪ್ರಾಯವಿದು, ''ರೋಗದ ಆಕ್ರಮಣವನ್ನು ಮುಂಗಾಣುವ ಸಾಮರ್ಥ್ಯ ನಾಯಿಗೆ ಜನ್ಮದತ್ತವಾಗಿ ಬಂದಿರುತ್ತದೆಯೇ ಹೊರತು ಅದನ್ನು ಕಲಿಸುವುದಾಗಲಿ ಅಥವಾ ಆ ಬಗೆಯ ತಳಿಯನ್ನು ಉತ್ಪತ್ತಿ ಮಾಡುವುದಾಗಲಿ ಅಸಾಧ್ಯ!'' ''ಅಂಥ ಗುಣಗಳಿರುವ ನಾಯಿಯನ್ನು ಗುರುತು ಹಿಡಿಯಬಲ್ಲೆವು ; ನಮ್ಮಿಂದ ಅಷ್ಟು ಮಾತ್ರ ಸಾಧ್ಯ''! ಎನ್ನುತ್ತಾರೆ ಡಾ.ಸಲಿವನ್. ಹಾಗಾಗಿ ಅವರ ಸಂಸ್ಥೆಯ ತರಬೇತಿದಾರರು ಸದಾ, ಮಾನವನ ಮನಃಸ್ಥಿತಿಗನುಗುಣವಾಗಿ ಸ್ಪಂದಿಸಿ ಪ್ರತಿಕ್ರಿಯೆ ತೋರುವ ಬುದ್ಧಿ, ಉತ್ತಮವಾದ ಘ್ರಾಣ ಶಕ್ತಿ ಮತ್ತು ಶಬ್ದಗ್ರಾಹಿ ಶಕ್ತಿಗಳನ್ನು ಹೊಂದಿರುವ ಶ್ವಾನದ ಹುಡುಕಾಟದಲ್ಲಿರುತ್ತಾರೆ. ಹಾಗೆ ಇಷ್ಟೆಲ್ಲ ಗುಣಗಳು ಇರುವ ನಾಯಿ ಸಿಕ್ಕಿದರೂ ಅದು ಅಪಸ್ಮಾರ ರೋಗಿಗೆ ಮುನ್ನೆಚ್ಚರಿಕೆ ನೀಡಬಲ್ಲದೇ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿರುತ್ತದೆ.

★ ★ ★

ಹನ್ನೆರಡು ವರ್ಷ ಪ್ರಾಯದ ಎಮಿಲಿ ರಾಂಸೇ ಅದೃಷ್ಟವಂತ ಬಾಲಕಿ ಎಂದೇ ಹೇಳಬೇಕು. ಕ್ಯಾನೈನ್ ಪಾರ್ಟ್ನರ್ಸ್ ಫಾರ್ ಲೈಫ್'ನಲ್ಲಿ ಅವಳು 'ವಾಟ್ಸನ್' ಎಂಬ ಲಾಬ್ರಡಾರ್ ಮಿಶ್ರತಳಿಯ ಒಂದು ಶ್ವಾನವನ್ನು ಕಂಡಳು. ಕೂಡಲೆ ಅವರಿಬ್ಬರಲ್ಲಿ ಬಾಂಧವ್ಯ ಉಂಟಾಗಿ ಬಿಟ್ಟಿತು. ವಾಟ್ಸನ್‌ನಲ್ಲಿ ಎಚ್ಚರಿಕೆ ನೀಡುವ ವಿಶೇಷ ಲಕ್ಷಣಗಳೆಲ್ಲವೂ ಇದ್ದರೂ, ಪ್ರತ್ಯಕ್ಷವಾಗಿ ಅದು ಅನುಭವಕ್ಕೆ ಬರುವ ತನಕ

ತಾವೇನೂ ಹೇಳಲು ಸಿದ್ಧರಿಲ್ಲವೆಂದು ಅಲ್ಲಿಯ ಉದ್ಯೋಗಿಗಳು ಮುಂದಾಗಿಯೇ ತಿಳಿಸಿ ಬಿಟ್ಟಿದ್ದರು.

ಆದರೆ ವಾಟ್ಸನ್ ನಾಯಿಯು ಎಮಿಲಿಯನ್ನು ನಿರಾಶೆಗೊಳಿಸಲಿಲ್ಲ. ಅವಳ ಮನೆಗೆ ಬರುತ್ತಿದ್ದಂತೆಯೇ ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ತೊಡಗಿದ್ದ ವಾಟ್ಸನ್ ಈಗಲೂ ತನ್ನ ಸೇವೆಯನ್ನು ಹಾಗೆಯೇ ಮುಂದುವರಿಸುತ್ತಿದೆ.

ಎಮಿಲಿಗೆ ಸೆಳವು ಸಂಭವಿಸಲಿರುವುದನ್ನು ಗ್ರಹಿಸುತ್ತಲೇ ವಾಟ್ಸನ್ ಆಳವಾದ, ಅಳುದನಿಯಲ್ಲಿ ಕೂಗುತ್ತದೆ. ಇದರಿಂದ ಎಮಿಲಿಗೆ ಕೆಲವು ನಿಮಿಷಗಳ ಕಾಲಾವಕಾಶ ಸಿಗುತ್ತದೆ. ನಿದ್ರೆಯಲ್ಲಿರುವಾಗ ಅವಳಿಗೆ ಮೂರ್ಛೆಯ ಸೆಳೆತ ಬರುವಂತಿದ್ದರೆ ಅದು ಅಲ್ಲಿಂದ ಹೊರಗೆ ಓಡಿಹೋಗಿ ಅವಳ ತಾಯಿ ತಂದೆಯರನ್ನು ಅವಳ ಕೋಣೆಗೆ ಕರೆತರುತ್ತದೆ. ಎಷ್ಟೋ ಸಲ ಕೆಳಗೆ ಬೀಳಲಿದ್ದವಳನ್ನು ಕುರ್ಚಿಯ ಒಳಗೆ ತಳ್ಳಿದೆ. ಹಲವು ಸಲ ಸಮೀಪಿಸುತ್ತಿರುವ ವಾಹನಗಳಿಗೆ ಅಡ್ಡವಾಗಿ ತಾನೇ ನಿಂತುಕೊಂಡು, ಅಪಸ್ಮಾರಕ್ಕೆ ಒಳಪಟ್ಟಿರುವ ಒಡತಿಯನ್ನು ರಕ್ಷಿಸಿದೆ.

ವಾಟ್ಸನ್‌ನ ಆಗಮನಕ್ಕಿಂತ ಮುಂಚೆ, ಎಮಿಲಿಯನ್ನು ತಮ್ಮ ದೃಷ್ಟಿಯ ವಲಯದಿಂದ ದೂರ ಕಳಿಸಲು ಅವಳ ಹೆತ್ತವರು ಅಂಜುತ್ತಿದ್ದರು. ಈಗ ಅವಳು ವಾಟ್ಸನ್‌ನೊಂದಿಗೆ ಶಾಲೆಗೆ, ಅಂಗಡಿಗೆ, ಅಷ್ಟೇ ಏಕೆ ಬೈಕ್ ಸವಾರಿಗೂ ಹೋಗುತ್ತಾಳೆ.

''ನನಗೆ ನಂಬಲಿಕ್ಕೇ ಆಗುತ್ತಿಲ್ಲ ! ಈ ನಾಯಿ ನನ್ನ ಮಗಳಲ್ಲಿ ಅದೆಂಥ ಆತ್ಮ ವಿಶ್ವಾಸವನ್ನು ತುಂಬಿ ಬಿಟ್ಟಿದೆ !'' ಎಂದು ಸಂತಸದಿಂದ ಹೇಳುತ್ತಾಳೆ ಎಮಿಲಿಯ ತಾಯಿ ಮೇರಿ ರಾಂಸೇ.

ಅದೇ ರೀತಿ ಡೋನಾ ಜೇಕಬ್ಸ್ ಕೂಡ ತನ್ನ ಪ್ರೀತಿಯ ಪಾಟ್ರಾ ನಿಂದಾಗಿ ಆತ್ಮ ವಿಶ್ವಾಸ ಹೊಂದಿದ್ದಾಳೆ. ತನ್ನ ನಾಯಿಗೆ ತುಸು ಮೃದುವಾಗಿ ತಿವಿಯುವಂತೆ ಕಲಿಸಿ ಕೊಟ್ಟಿರುವ ಆಕೆ ಈಗೆಲ್ಲಾ ಬರಲಿರುವ ಸೆಳೆತ ರೋಗಕ್ಕಾಗಿ ಭಯಪಡುವುದಿಲ್ಲ. ೧೯೯೭ರಲ್ಲಿ ಒಂದು ಕಂಪ್ಯೂಟರ್ ಕಂಪೆನಿಯ ಮಾರ್ಕೆಟಿಂಗ್ ನಿರ್ದೇಶಕಿಯಾಗಿ ಕೆಲಸಕ್ಕೆ ಸೇರಿದ್ದಾಳೆ. ಅವಳ ಮೇಜಿನ ಕೆಳಗೆ ಪಾಟ್ರಾ ಕುಳಿತಿರುತ್ತದೆ. ಆಗ ಅವಳು ಮಾರಾಟ ಕುರಿತಾದ ಸಮಾಲೋಚನೆಗಳಲ್ಲಿ ಧೈರ್ಯವಾಗಿ ಭಾಗವಹಿಸುತ್ತಾಳೆ.

ಮಧ್ಯದಲ್ಲಿ ನಾಯಿ ಅವಳನ್ನು ಎಚ್ಚರಿಸುವ ಸಂದರ್ಭ ಬಂದಲ್ಲಿ, ಸಭೆಯಿಂದ ವಿನಾಯಿತಿ ಪಡೆದು ತನ್ನ ಆಫೀಸಿನ ಕೋಣೆಯೊಳಗೆ ಸೇರಿಕೊಳ್ಳುವ ಡೋನಾ ಜೇಕಬ್ಸ್, ಬಾಗಿಲಲ್ಲಿ 'ಶಾಂತಿ ಭಂಗ ಮಾಡದಿರಿ' ಎಂಬ ಫಲಕವನ್ನು ತೂಗಹಾಕಿ ಸುಮ್ಮನೆ ಮಲಗಿ ಬಿಡುತ್ತಾಳೆ.

ಕಳೆದ ವರ್ಷ ಸರಕಾರಿ ನಿಯೋಗಗಳಿಗೆ ಮತ್ತು ಸಮಾಜದ ಹಿತಾಸಕ್ತರಿಗೆ , ಈ ಬುದ್ಧಿವಂತ ನಾಯಿಗಳ ಉಪಯುಕ್ತತೆಯನ್ನು ಮನವರಿಕೆ ಮಾಡಿ ಕೊಡಲೆಂದೇ 'ಸರ್ವಿಸ್ ಡಾಗ್ಸ್ ಟು ಡೇ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿರುವ ಡೋನಾ ತುಂಬು ಹೃದಯ ದಿಂದ ಹೇಳುತ್ತಾಳೆ. ''ಪಾಟ್ರಾಗೆ ನನ್ನ ಅನಂತ ಕೃತಜ್ಞತೆಗಳು. ನಾನೀಗ ಜೀವನವನ್ನು ಬೇರೆಯೇ ಆದ ದೃಷ್ಟಿಕೋನದಿಂದ ನೋಡುತ್ತಿದ್ದೇನೆ. ಏಕೆಂದರೆ ಇದು ನನ್ನ ಪಾಲಿಗೆ ಪುನರ್ಜನ್ಮ !'' ಕನಕದಾಸರ ಕ್ಷಮೆಕೋರಿ ''ನಾನು ನೀನು ಎನ್ನಬೇಡ ಹೀನಮಾನವಾ ! ಶ್ವಾನವನ್ನು ನೋಡಿ ಕಲಿಯೋ ಸಕಲ ಸನ್ಮಾನವಾ !''

ಕ್ರಿಶ್ಚಿಯನ್ನರ ಮೇಲೆ ಪಾಕಿಸ್ತಾನದ ಸಮರ

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಹೆಣ್ಣುಗಳ ಮೇಲೆ ಅತ್ಯಾಚಾರವೆಸಗಲಾಗುತ್ತದೆ, ಅವರ ಮೇಲೆ ಸುಳ್ಳು ಆರೋಪ ಹೊರಿಸಲಾಗುತ್ತದೆ ಮತ್ತು ಅವರನ್ನು ಹೊಡೆದು ಕೊಲ್ಲಲಾಗುತ್ತದೆ, ಅವರ ಭೂಮಿಯನ್ನು ಕಸಿದುಕೊಳ್ಳಲಾಗುತ್ತದೆ. ಇದಕ್ಕೆ ಕಾರಣ: ಅವರ ಧರ್ಮದಲ್ಲಿನ ವಿಶ್ವಾಸ

ಈ ಕಥೆಯನ್ನು ಕೇಳಿದವಳು ಅವಳ ತಾಯಿ ಮಾತ್ರ. ಏಳು ವರ್ಷದ ಆ ಬಾಲಕಿ ತನ್ನ ಗೆಳತಿಯ ಮನೆಯಿಂದ ಮರಳುತ್ತಿದ್ದಂತೆ ಯಾರೋ ಒಬ್ಬ ಅವಳನ್ನು ಕೂಗಿ ಕರೆದ. ಅವಳು ತಿರುಗುತ್ತಿದ್ದಂತೆ ಆ ಹಳ್ಳಿಯ ನಾಲ್ಕು ಗಂಡಸರು ಅವಳೆಡೆಗೆ ಓಡಿ ಬಂದರು. ನಗೀನಾ ಹಾರುತ್ತಿದ್ದ ತನ್ನ ದುಪಟ್ಟಾದ ಜೊತೆಗೆ ಓಡಹತ್ತಿದಳು. ಆದರೆ ಆ ನಾಲ್ವರು ಗಂಡಸರು ಅವಳಿಗಿಂತ ಜೋರಾಗಿ ಓಡಿ ಅವಳನ್ನು ಸುತ್ತುವರೆದರಲ್ಲದೆ, ಅವಳನ್ನು ಹಿಡಿದುಕೊಂಡು ಒಂದು ಕತ್ತಲ ಕೋಣೆಗೆ ದಬ್ಬಿದರು. ಮುಂದೇನಾಯಿತೆಂಬುದನ್ನು ಅವಳು ವಿವರಿಸಲಾರಳು.

ಅವಳು ಅಳುತ್ತಿದ್ದುದನ್ನು ಕೇಳಿಸಿಕೊಂಡ ಗ್ರಾಮಸ್ಥರು ಒಂದು ದನದ ಕೊಟ್ಟಿಗೆ ಹೊರಗೆ ಬಂದು ನಿಂತರು. ಗಲಾಟೆಯನ್ನು ಕಂಡ ಗುಲಾಮು ಮಸಿಹ (ಪಾಕಿಸ್ತಾನದಲ್ಲಿ ಅನೇಕ ಕ್ರಿಶ್ಚಿಯನ್ನರ ಅಡ್ಡ ಹೆಸರು ಮಸಿಹ ಎಂದಿದೆ), ಅಲ್ಲಿಗೆ ಧಾವಿಸಿ ಬಾಗಿಲು ತೆರೆದ. ಒಳಗೆ ನೆರೆಯುವರ ಇಬ್ಬರು ಗಂಡು ಮಕ್ಕಳು ತನ್ನ ಮಗಳ ಮೇಲೆ ನಿಂತಿದ್ದರು, ಅವಳ ಕಾಲುಗಳು ರಕ್ತಸಿಕ್ತವಾಗಿದ್ದವು.

ಗುಲಾಮು ಮತ್ತು ಅವನ ಪತ್ನಿ ಶಹಾನಾರು ತಮ್ಮ ಮಗಳನ್ನು ಎತ್ತಿಕೊಂಡು ಪೊಲೀಸ್ ಠಾಣೆಗೆ ಹೋಗಿ, ಅಪರಾಧದ ದೂರು ನೊಂದಾಯಿಸಿ ಬಸ್ ಹಿಡಿದು ಆಸ್ಪತ್ರೆಗೆ ಹೋದರು. ''ಯೋನಿಯ ಪೊರೆ ಹರಿದಿದೆ, ಒಂದನೆಯ ದರ್ಜೆಯ ಹರಿತ. ಬಟ್ಟೆಯಿಂದ ವೀರ್ಯ ಮತ್ತು ರಕ್ತದ ಕಲೆಗಳನ್ನು ತೆಗೆದುಕೊಳ್ಳಲಾಗಿದೆ'' ಎಂದು ವೈದ್ಯಕೀಯ ವರದಿ ತಿಳಿಸಿತು. ಆಂತರಿಕ ಗಾಯಗಳು ಎಷ್ಟು ವಿಪರೀತವಾಗಿದ್ದವೆಂದರೆ, ಆ ಬಾಲಕಿಗೆ ಮುಂದೆ ಮಕ್ಕಳಾಗುವ ಸಾಧ್ಯತೆ ಇರಲಿಲ್ಲ.

ನಗೀನಾ ತನ್ನ ತಾಯಿಯ ಜೊತೆಗೆ ಮಾತಾಡುವ ಸ್ಥಿತಿಗೆ ಬರಲು ೬ ವಾರಗಳು ಬೇಕಾದವು. ಅವಳಾಡಿದ್ದು : ನನ್ನ ಮೇಲೆ ಅತ್ಯಾಚಾರ ಮಾಡಿದ ಆ ನಾಲ್ಕು ಜನರು ಗ್ರಾಮಕ್ಕೆ ಹಿಂದಿರುಗಿದ್ದೇಕೆ? ತನಗೆ ಯಾವುದೇ ಸಾಕ್ಷ್ಯಾಧಾರ ದೊರಕಿಲ್ಲವೆಂದು ಪೊಲೀಸ್ ಇನ್‌ಸ್ಪೆಕ್ಟರ್ ಮಶ್ತಾಕ್ ಅಹ್ಮದ್ ಹೇಳಿದನಲ್ಲದೆ ಈ ಸಂಗತಿಯನ್ನು ಮರೆತು ಬಿಡುವಂತೆ ನಗೀನಾಳ ಕುಟುಂಬದವರಿಗೆ ಸೂಚಿಸಿದನು. ಆದರೆ ಗುಲಾಮ ಮಾತ್ರ ನ್ಯಾಯ ಯಾಚಿಸುವುದನ್ನು ಮುಂದುವರೆಸಿದನಲ್ಲದೆ, ತನ್ನ ಮಗಳ ಮೇಲೆ ಅತ್ಯಾಚಾರ ಮಾಡಿದವರು ಬಂದು ನೀಡಿದ ಕಾಣಿಕೆಗಳನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ.

೧೯ ತಿಂಗಳ ನಂತರ, ೧೯೯೮ರ ಅಕ್ಟೋಬರ್ ೨೦ರಂದು ಗುಲಾಮಮಸಿಹ ಮತ್ತೆ ಪೊಲೀಸ್ ಠಾಣೆಯಲ್ಲಿ ಕಂಡ. ಆದರೆ ಈ ಸಲ ಅವನು ಬಂದಿಯಾಗಿದ್ದ. ಅರೆ ಬತ್ತಲೆಯಾಗಿದ್ದ ಅವನ ಮುಖದ ಮೇಲೆ ಕೊಳೆ ಇತ್ತು, ಅವನ

ಮೇ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಕ್ಯಾಥಿಸ್ಕಾಟ್ ಮತ್ತು ಆಂಡ್ರಿಯಸ್ ಲಿಪಿ ಅವರ 'ಪಾಕಿಸ್ತಾನ್ ವಾರ್ ಆನ್ ಕ್ರಿಶ್ಚಿಯನ್ಸ್' ಎಂಬ ಲೇಖನದ ಕನ್ನಡಾನುವಾದ

ಮಣಿಕಟ್ಟು ಮತ್ತು ಕಾಲಿನ ಹರಡುಗಳಲ್ಲಿ ಕಬ್ಬಿಣದ ಸರಪಳಿಗಳಿದ್ದವು. ಪೋಲೀಸ್ ಇನ್‌ಸ್ಪೆಕ್ಟರ್ ಮುಶ್ತಾಕ್ ಅಗಲವಾದ ತೊಗಲಿನ ಪಟ್ಟಿಯನ್ನು ಬಳಸುವಂತೆ ತನ್ನ ಪೇದೆಗೆ ಆದೇಶ ನೀಡಿದನು. ಗುಲಾಮನ ಬೆನ್ನಮೇಲೆ ಪಟ್ಟಿಯ ಬಾರು ಮೂಡುತ್ತಿದ್ದಂತೆ, ಲಾಹೋರ್ ನ್ಯಾಯಾಲಯದ ದಂಡಾಧಿಕಾರಿಯೊಬ್ಬ ಬಂದು ಇನ್‌ಸ್ಪೆಕ್ಟರನ ಕೈಗಳಲ್ಲಿ ಒಂದು ತೀರ್ಪನ್ನಿತ್ತನು. ಗುಲಾಮನನ್ನು ೧೪ ದಿನಗಳವರೆಗೆ ಅನ್ಯಾಯವಾಗಿ ಬಂಧಿಸಿಟ್ಟಿದ್ದನು, ಅವನನ್ನು ಪದೆ ಪದೆ ಹೊಡೆದದ್ದನ್ನು ಮತ್ತು ಅವನು ಮಾಡಿರಲಾರದ ಒಂದು ಕೊಲೆಯ ಪ್ರಕರಣದಲ್ಲಿ ಅವನನ್ನು ಸಿಕ್ಕಿಸಿದ್ದು ಕಾನೂನು ಬಾಹಿರವೆಂದು ಆ ತೀರ್ಪಿನಲ್ಲಿ ಹೇಳಲಾಗಿತ್ತು. ಒಬ್ಬ ವೃದ್ಧ ಮಹಿಳೆಯನ್ನು ಇವನೇ ಕೊಂದಿರಬೇಕೆಂಬುದಕ್ಕೆ ಸಾಕ್ಷಿ ನೀಡಿದವರೆಂದರೆ, ಅವನ ಮಗಳ ಮೇಲೆ ಅತ್ಯಾಚಾರವೆಸಗಿದವರು.

ಒಬ್ಬ ಬಾಲಕಿಯ ಮೇಲೆ ಅತ್ಯಾಚಾರವೆಸಗಿದ ನಾಲ್ವರು ಆರೋಪಿಗಳ ಮಾತನ್ನು ಕೇಳಿದ ಪೊಲೀಸರು ತನಿಖೆ ನಡೆಸದೆ ಈ ರೀತಿ ಕಾರ್ಯಪ್ರವೃತ್ತರಾದುದೇಕೆ? ಆ ಬಂದಿಯೊಬ್ಬ ಕ್ರಿಶ್ಚಿಯನ್ ತನ್ನ ಮಗಳ ಮೇಲೆ ಅತ್ಯಾಚಾರವೆಸಗಿದ್ದಾರೆಂದು ಗುಲಾಮನು ಆರೋಪಿಸಿದ ವ್ಯಕ್ತಿಗಳು ಒಳ್ಳೆಯ ಮುಸಲ್ಮಾನರೆಂದು ಪೊಲೀಸ್ ಇನ್‌ಸ್ಪೆಕ್ಟರ್ ಮುಶ್ತಾಕ್ ಹೇಳಿದ. ನಮ್ಮ ಕಡೆ ಬೆನ್ನು ಮಾಡಿ ಗುಲಾಮನನ್ನು ಸೆರೆಮನೆಗೆ ಕರೆದೊಯ್ಯುತ್ತಿದ್ದಂತೆ ''ನನ್ನ ಮೊದಲ ಕರ್ತವ್ಯ ಇಸ್ಲಾಮಿಗೆ ನ್ಯಾಯಾಲಯಗಳು ಕೂಡಾ ಇಂಥದೇ ಅಭಿಪ್ರಾಯ ಹೊಂದುತ್ತವೆ ಮತ್ತು ಗುಲಾಮ ಮಸಿಹನನ್ನು ಗಲ್ಲಿಗೇರಿಸುವುದನ್ನು ನೀವು ನೋಡುವಿರಿ'' ಎಂದನು.

ಪಾಕಿಸ್ತಾನದ ತೀಕ್ಷ್ಣ ಸಂವೇದಿ ಸಮಾಜದಲ್ಲಿ ನೆಲೆಸಿರುವ ಮೂರುಮಿಲಿಯ ಕ್ರಿಶ್ಚಿಯನ್ನರ ಸೂಕ್ಷ್ಮಸ್ಥಿತಿಯ ಪ್ರತೀಕವಾಗಿದೆ ಗುಲಾಮನ ಈ ಕಥೆ. ನಗೀನಾ ಕ್ರಿಶ್ಚಿಯನ್ ಕನ್ಯೆಯಾದ್ದರಿಂದ ಅವಳ ಮೇಲೆ ಅತ್ಯಾಚಾರವೆಸಗಲಾಯಿತು. ಅವಳ ಮೇಲೆ ದಾಳಿ ಮಾಡಿದವರು, ಅವಳ ಧರ್ಮವೇ ಅವಳನ್ನು ಅಯೋಗ್ಯಳನ್ನಾಗಿ ಮಾಡಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಒಬ್ಬ ಕ್ರಿಶ್ಚಿಯನ್ನನ ಮಾತಿಗಿಂತಲೂ ಒಬ್ಬ ಮುಸಲ್ಮಾನನ ಮಾತಿಗೆ ಹೆಚ್ಚು ಬೆಲೆ ಕೊಡುವ ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುವ ಧೈರ್ಯ ಮಾಡಿದ ಅವಳ ತಂದೆ ಮೃತ್ಯುದಂಡನೆ ಎದುರಿಸುತ್ತಿದ್ದಾನೆ.

ಕ್ರಿಶ್ಚಿಯನ್ನರ ಬಹುಮತವಿರುವ ಪಾಕಿಸ್ತಾನದ ಪಂಜಾಬಿನಲ್ಲಿ, ಸುಳ್ಳು ಆಪಾದನೆಗಳ ಮೇಲೆ ಎಷ್ಟೋ ಕ್ರಿಶ್ಚಿಯನ್ನರು ಸೆರೆಮನೆಗಳಲ್ಲಿ ಅಥವಾ ಪೊಲೀಸರ ವಶದಲ್ಲಿದ್ದಾರೆ. ಲಾಹೋರಿನಲ್ಲಿನ ನ್ಯಾಯಾಧೀಶರು ಕ್ರಿಶ್ಚಿಯನ್ನರ ವಿರುದ್ಧದ ಪ್ರಕರಣಗಳನ್ನು ವಿವೇಚಿಸದೆ ಸ್ವೀಕರಿಸುತ್ತಾರೆ. ಇಲ್ಲದಿದ್ದರೆ ಅವರು ಊರೊಳಗಿನ ಮುಸಲ್ಮಾರ ಕೋಪಕ್ಕೆ ಗುರಿಯಾಗ ಬೇಕಾಗುತ್ತದೆ. ಆರಿಫ್‌ವಾಲಾದಲ್ಲಿ ಯಾರೋ ಹೇಳಿದ ಮಾತ್ರಕ್ಕೆ ಒಬ್ಬ ಕ್ರಿಶ್ಚಿಯನ್ನನಿಗೆ ಮರಣದಂಡನೆ ನೀಡಲಾಯಿತು. ಕ್ರಿಶ್ಚಿಯನ್ನರೇ ನೆಲೆಸಿರುವ ದಕ್ಷಿಣ ಭಾಗದಲ್ಲಿನ ಶಾಂತಿನಗರದಲ್ಲಿ, ಪಾಷಂಡವಾದದ ಸುಳಿವು ತಲುಪುತ್ತಿದ್ದಂತೆ, ಜನರ ಗುಂಪು ಆ ಗ್ರಾಮವನ್ನು ಧ್ವಂಸ ಮಾಡಿತು.

ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯದ ಬಾರ್ ಅಸೋಸಿಯೇಶನ್ನಿನ ಅಧ್ಯಕ್ಷ ಆಬಿದ್ ಹಸನ್ ಮಿಂಟೊ ''ಛಲವಾದಿಗಳು ಅಧಿಕಾರ ವಹಿಸಲಿದ್ದಾರೆ. ನ್ಯಾಯಾಂಗ ಮತ್ತು ಅಪರಾಧ ನ್ಯಾಯ ವ್ಯವಸ್ಥೆ ಅವರನ್ನು ತಡೆಯುವಷ್ಟು ಪ್ರಬಲವಾಗಿರಲು ಸಾಧ್ಯವಿಲ್ಲ'' ಎಂದು ಎಚ್ಚರಿಸಿದ್ದಾನೆ.

ಸೆರೆಮನೆಯಲ್ಲಿ ಗುಲಾಮ ಮಸಿಹನನ್ನು ನಾವು ಭೇಟಿಯಾದ ಮರುದಿನ ಅವನು ಲಾಹೋರ್ ನ್ಯಾಯಾಲಯದ ಮುಂದೆ ಹಾಜರಾದನು. ಅವನಿಗಾದ ಹಿಂಸೆ, ನ್ಯಾಯ ಬಾಹಿರ ಬಂಧನ ಅಥವಾ ಸ್ಪಷ್ಟದ್ವೇಷದ ಕಾರಣ ಅವನನ್ನು ಬಂಧಿಸಿದ ಬಗೆಗಿನ ಸಾಕ್ಷ್ಯಾಧಾರವನ್ನು ನ್ಯಾಯಾಧೀಶ ತಳ್ಳಿಹಾಕಿದನು. ಗುಲಾಮನನ್ನು ಪ್ರಯೋಗ ಪರೀಕ್ಷೆಗೆ ಕಳಿಸಲಾಯಿತು. ಅವನು ತಪ್ಪಿತಸ್ಥನೆಂದು ಕಂಡುಬಂದರೆ ಅವನನ್ನು ಗಲ್ಲಿಗೇರಿಸಲಾಗುವುದು.

೧೯೮೬ರಲ್ಲಿ ಲಾಹೋರಿನ ಒಂದು ಸಭಾಭವನದಲ್ಲಿ ಅಸ್ಮಾ ಜೆಹಾಂಗೀರಳೆಂಬ ಒಬ್ಬ ನ್ಯಾಯವಾದಿ ಮತ್ತು ಸಮಾಜ ಸುಧಾರಣೆಯ ಚಳವಳಿಗಾರ್ತಿ ಇಸ್ಲಾಮನ್ನು ಪ್ರತಿಮೆಗಳಿಲ್ಲದಂಥ ಒಂದು ಧರ್ಮವೆಂದು ವಿವರಿಸಿದಂದಿನಿಂದ ಈ ಧರ್ಮಸಂಕಟ ಪ್ರಾರಂಭವಾಗಿದೆ. ಪ್ರವಾದಿ ಮಹ್ಮದನಂತೆ ಯಾವ ಶಿಕ್ಷಣದ ಹಿನ್ನೆಲೆ ಇಲ್ಲದವನು ಕೂಡಾ ಒಂದು ಧರ್ಮ ಸ್ಥಾಪಿಸಬಹುದೆಂದು ಅವಳು ಹೇಳಿದ್ದಳು.

ಅವಳು ಖುರಾನಿನ ಸಾಲುಗಳನ್ನೇ ಉದ್ಧರಿಸಿದ್ದಳಾದರೂ ಅವಳು ಪ್ರವಾದಿ ಅನಕ್ಷರಸ್ಥನೆಂದು ಅಭಿಪ್ರಾಯಪಟ್ಟದ್ದನ್ನು ದೇವ ದೂಷಣೆಯೆಂದು ಸಂಪ್ರದಾಯಸ್ಥ ಮುಲ್ಲಾಗಳು ಸಿಟ್ಟಿಗೆದ್ದರು. ಅವಳು ತನ್ನ ರಕ್ಷಣೆಗೆಂದು ಸಶಸ್ತ್ರ ಕಾವಲುಗಾರರನ್ನು ನೇಮಿಸಿಕೊಳ್ಳುತ್ತಿದ್ದಂತೆ, ಶ್ರೇಷ್ಠ ನ್ಯಾಯಾಲಯದ ಸಹನ್ಯಾಯವಾದಿ ಇಸ್ಮಾಯಿ ಖುರೇಮೊ, ದೂಷಣೆಯ ಹೊಸ ಕಾನೂನಿನ ಒಂದು ಕರಡು ಪ್ರತಿಯನ್ನು ಸಿದ್ಧಪಡಿಸಿದನು. ೧೯೯೨ರಲ್ಲಿ ಸೆನೇಟಿನ ಮನ್ನಣೆ ಪಡೆದು ಜಾರಿಗೆ ಬಂದ ಈ ಕಾನೂನು ''ಪೂಜ್ಯಪ್ರವಾದಿ ಮಹ್ಮದನ ಪವಿತ್ರ ಹೆಸರನ್ನು ಯಾರಾದರೂ, ಆರೋಪ, ವ್ಯಂಗ್ಯೋಕ್ತಿ ಅಥವಾ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಅಪವಿತ್ರಗೊಳಿಸಿದರೆ ಅಂಥವರಿಗೆ ಮರಣ ದಂಡನೆ ವಿಧಿಸಲಾಗುತ್ತದೆ'' ಎಂದು ಹೇಳಿತು.

ಬಂಧಿಸಲಾದ ಎಷ್ಟೋ ಜನರಲ್ಲಿ ಬಹುತೇಕರು ಕ್ರಿಶ್ಚಿಯನ್ನರಿದ್ದರು. ಯಾರನ್ನಾದರು ಆರೋಪಿಸಿ ಶಿಕ್ಷಿಸಲು, 'ವ್ಯಂಗ್ಯೋಕ್ತಿಯ' ಒಂದೇ ನೆಪ ಸಾಕಾಗಿದ್ದರಿಂದ, ಈ ಕಾನೂನು ಜಾರಿಗೆ ಬಂದ ನಾಲ್ಕು ತಿಂಗಳಲ್ಲಿ ಕ್ರಿಶ್ಚಿಯನ್ನರನ್ನು ಕೊಲ್ಲಲು ಪ್ರಾರಂಭಿಸಲಾಯಿತು. ಈ ತಿದ್ದುಪಡಿ ಪಾಕಿಸ್ತಾನದ ವಿವಿಧ ಭಾಗಗಳಲ್ಲಿನ ಹಿಂದುಳಿದ ವರ್ಗದವರು, ಕ್ರಿಶ್ಚಿಯನ್ ಮತ್ತು ಇತರ ಅಲ್ಪಸಂಖ್ಯಾತ ವರ್ಗದವರ ಪಾಲಿಗೆ ಪಿಶಾಚಿ ಕಾಟವಾಗಿದೆ. ೧೯೯೬ರ ಅಕ್ಟೋಬರ್ ೧೪ ರಂದು ಕರಾಚಿಯಲ್ಲಿ ಅಭ್ಯಾಸ ಮಾಡಿದ್ದ ಹಾಗೂ ಶಿಲ್ಪಶಾಸ್ತ್ರದಲ್ಲಿ ತರಬೇತು ಪಡೆಯುತ್ತಿದ್ದ ಅಯುಬ ಮಸಿಹ ಎಂಬ ಕೆಥೊಲಿಕ್, ಆರಿಫವಾಲಾದ ತನ್ನ ಮನೆಗೆ ಬರುತ್ತಿದ್ದಂತೆ ಆ ಗ್ರಾಮದಲ್ಲಿ ಒಂದು ವಿವಾದ ನಡೆದಿತ್ತು. ಅವನ ಪಾಲಕರ ಭೂಮಿಯನ್ನು ಒಂದು ಮುಸಲ್ಮಾನ ಕುಟುಂಬ ಕಸಿದುಕೊಳ್ಳಲೆತ್ನಿಸಿತ್ತು. ಅವರು ಕರೆದ ಸಭೆಗೆ ಹೋದ ಅಯೂಬನನ್ನು ಗ್ರಾಮಸ್ಥರು ಹೊಡೆದರಲ್ಲದೆ, ಪೊಲೀಸ್ ಠಾಣೆಗೆ ಎಳೆದುಕೊಂಡು ಹೋದರು. ಖುರೇಶಿಯ ನ್ಯಾಯದನ್ವಯ ಆಪಾದಿಸಿ ಅವನನ್ನು ಜೈಲಿಗೆ ಹಾಕಲಾಯಿತು.

ಈ ಘಟನೆಯಲ್ಲಿ ಸಾಕ್ಷಯಾಗಿದ್ದ ಮಹ್ಮದ ಅಕ್ರಮ ತನ್ನ ಪೊಲೀಸ್ ವರದಿಯಲ್ಲಿ ''ಪೂಜ್ಯ ಪ್ರವಾದಿಯ ಬಗ್ಗೆ ಅವಮಾನಕರವಾಗಿ ಬರೆದಿರುವ ಸಲ್ಮಾನ ರಶ್ದಿಯ ದಿ ಸೆಟ್ಯಾನಿಕ್ ವರ್ಸಸ್‌ನ್ನು ನಾನು ಓದುವಂತೆ ಸೂಚಿಸಿದನು'' ಎಂದು ಬರೆದನು. ಅಯೂಬನ ಮೇಲೆ ವಿಚಾರಣೆ ನಡೆಸಲು ಈ ವರದಿಯೇ ಸಾಕಾಯ್ತು.

೧೯೯೭ರ ಸೆಪ್ಟೆಂಬರ್ ೬ರಂದು ನ್ಯಾಯಾಲಯದಲ್ಲಿ ಹಾಜರಾಗಲು ತನ್ನ

ಸರದಿಗಾಗಿ ಕಾಯುತ್ತಿದ್ದಾಗ, ಹತ್ತಾರು ಪೋಲಿಸ್ ಅಧಿಕಾರಿಗಳು ಎದುರಿನಲ್ಲಿಯೇ ಅಕ್ರಮ ಅವನ ಮೇಲೆ ಗುಂಡು ಹಾರಿಸಿದನು. ಅಯೂಬನ ತೋಳಿಗೆ ತೆರೆಗಾಯ ವಾಯಿತು; ಆದರೆ ಅಕ್ರಮನ ವಿರುದ್ಧಯಾರೂ ಆರೋಪಿಸಲಿಲ್ಲ.

ಇದಕ್ಕೆ ಬದಲಾಗಿ ಅಯೂಬನ ನ್ಯಾಯಾಂಗ ವಿಚಾರಣೆಗಳನ್ನು ಅವನನ್ನು ಏಕಾಂತ ಬಂಧನದಲ್ಲಿರಿಸಲಾಗಿದ್ದ ಸೆರೆಮನೆಗೆ ವರ್ಗಾಯಿಸಲಾಯಿತು. ಅಯೂಬನ ಹಳ್ಳಿಯಲ್ಲಿನ ಆ ವಿವಾದಿತ ಭೂಮಿಯ ಒಡೆಯ ಈಗ ಅಕ್ರಮನಾಗಿದ್ದಾನೆ; ಸುಮಾರು ೩೦ರಷ್ಟು ಸಂಖ್ಯೆಯ ಕೆಥೊಲಿಕರು ಮರಣ ದಂಡನೆಯನ್ನು ಪ್ರಶ್ನಿಸಿ ಮನವಿ ಸಲ್ಲಿಸಿದ್ದಾರೆ.

ದೇವದೂಷಣೆಯ ಆರೋಪಕ್ಕಾಗಿ ಒಬ್ಬ ಕ್ರಿಶ್ಚಿಯನ್ನನನ್ನೂ ಮರಣದಂಡನೆಯಿಂದ ಇನ್ನೂ ಶಿಕ್ಷಿಸಿಲ್ಲವಾದರೂ, ಅವರು ಪೊಲೀಸ್‌ರ ವಶದಲ್ಲಿ ಇದ್ದಾಗಲೇ ಸಾಯುತ್ತಿದ್ದಾರೆ. (ಲಾಕಪ್‌ಸಾವು) ದೇವ ದೂಷಣೆಯ ಆರೋಪದ ಮೇಲೆ ಮುಖ್ತಾರ ಮಸಿಹನನ್ನು ಬಂಧಿಸಲಾಯಿತು. ವಿಚಾರಣೆಗೆಂದು ಕರೆತಂದ ಅವನನ್ನು ಪೊಲೀಸ್ ಠಾಣೆಯ ಅಂಗಳದಲ್ಲಿ ಥಳಿಸುತ್ತಿದ್ದುದನ್ನು ಅನೇಕರು ನೋಡಿದರು.

ಕೆಲವು ಗಂಟೆಗಳ ಅನಂತರ ಅವನ ದೇಹವನ್ನು ಆಸ್ಪತ್ರೆಗೆ ಒಯ್ಯುವಾಗ ಅವನೂ ತಾನಾಗಿಯೇ ಉಪವಾಸ ಮಾಡಿದ್ದರಿಂದ ಸತ್ತನೆಂದು ಪೊಲೀಸರು ಹೇಳಿಕೆಯನ್ನಿತ್ತರು.

ಸಿಂಧ್-ಹೈದ್ರಾಬಾದಿನ ಒಬ್ಬ ಕ್ರಿಶ್ಚಿಯನ್ನನಾಗಿದ್ದ ಜಾವೇದ ಮಸಿಹ, ಜೈಲಿನ ತನ್ನ ಕೋಣೆಯಲ್ಲಿ ಆತ್ಮಹತ್ಯೆ ಮಾಡಿಕೊಂಡನೆಂದು ಪೋಲಿಸರು ಹೇಳಿದರು. ಆದರೆ ಅವನನ್ನು ವಿದ್ಯುತ್ ಶಾಕ್‌ಗಳಿಂದ ಹಿಂಸಿಸಲಾಗಿತ್ತಲ್ಲದೆ, ಅವನ ಗುದದ್ವಾರದಲ್ಲಿ ಚಿಮಣಿ ಎಣ್ಣೆ ಮತ್ತು ಕೆಂಪು ಮೆಣಸಿನ ಕಾಯಿಗಳನ್ನು ತುರುಕಲಾಗಿತ್ತೆಂದು ಮರಣೋತ್ತರ ಪರೀಕ್ಷೆಯ ವರದಿಯಿಂದ ತಿಳಿದು ಬಂತು. ಬಹಳಷ್ಟು ಗಾಯಗಳಿಂದ ಅವನ ದೇಹ ಬಾತು ಹೋಗಿತ್ತಲ್ಲದೆ, ಅವನ ಕುತ್ತಿಗೆಯನ್ನು ಪಟ್ಟಿಯಿಂದ ಬಿಗಿದಿದ್ದರ ಕಲೆ ಕೂಡಾ ಕಾಣಿಸುತ್ತಿತ್ತು.

ಕೆಲವು ಸುದೈವೀ ಕ್ರಿಶ್ಚಿಯನ್ನರ ಮನವಿಯನ್ನು ಸ್ವೀಕರಿಸಿ ಅವರನ್ನು ಬಂಧನ ಮುಕ್ತರನ್ನಾಗಿ ಮಾಡಿದ್ದುಂಟು. ಆದರೆ ಇಂಥವರು ಜನಜಂಗುಳಿಯ ಮೃತ್ಯು ದಂಡನೆಯ ಮರುಹೇರಿಕೆಗಳನ್ನೆದುರಿಸಲಾರದೆ ದೇಶಬಿಟ್ಟು ಪಲಾಯನ ಮಾಡಬೇಕಾಯಿತು. ಸಲಾಮತ ಮಸಿಹ ಕೇವಲ ೧೩ವರ್ಷದ ಹುಡುಗನಾಗಿದ್ದಾಗ, ಅವನ ಚಿಕ್ಕಪ್ಪ ರೆಹಮತ ಮಸಿಹ ಮತ್ತು ಅವನ ಗೆಳೆಯ ಮಂಜೂರ ಮಸಿಹರನ್ನು ಮಸೀದಿಯ ಗೋಡೆಗಳ ಮೇಲೆ ಧ್ಯೇಯ ಮಂತ್ರಗಳನ್ನು ಬರೆದಿದ್ದಾರೆಂಬ ಆರೋಪದ ಮೇಲೆ ದಂಡಿಸಲಾಯಿತು. ಈ ಮೂವರು ಅನಕ್ಷರಸ್ಥರೆಂದು ನ್ಯಾಯಾಲಯಕ್ಕೆ ಖಚಿತವಾದಾಗ, ಅವರು ಮನವಿ ಸಲ್ಲಿಸಲು ಅಪ್ಪಣೆ ನೀಡಲಾಯಿತು.

೧೯೯೪ರ ಏಪ್ರಿಲ್‌ನಲ್ಲಿ ಅವರು ಲಾಹೋರ್ ನ್ಯಾಯಾಲಯಕ್ಕ ಹೊರಟಾಗ ಮೂವರು ಮೋಟಾರು ಸೈಕಲ್ ಸವಾರರು ಅರೆ ಸ್ವಯಂಚಾಲಿತ ಆಯುಧಗಳಿಂದ ಅವರ ಮೇಲೆ ಗುಂಡು ಹಾರಿಸಿದರು. ಕೆಲವೇ ಕ್ಷಣಗಳಲ್ಲಿ ಮಂಜೂರ ಮರಣ ಹೊಂದಿದ; ಸಲಾಮತನ ಕೈ ಎಕೆ-೪೭ ಬಂದೂಕಿನ ಗುಂಡಿನಿಂದ ಜಜ್ಜಿ ಹೋಯಿತು ಮತ್ತು ರೆಹಮತ್ ಗಂಭೀರವಾಗಿ ಗಾಯಗೊಂಡನು.

೧೯೯೫ರಲ್ಲಿ ನ್ಯಾಯ ಮೂರ್ತಿ ಆರಿಫ್ ಭಟ್ಟಿಯು ಬದುಕಿ ಉಳಿದಿದ್ದ ಇವರಿಬ್ಬರ ಮೇಲೆ ವಿಧಿಸಲಾಗಿದ್ದ ಮರಣ ದಂಡನೆಯನ್ನು ಬುಡಮೇಲು ಮಾಡಿದನು. ಆದರೆ ಉಗ್ರಗಾಮಿಗಳು

ಸಲಾಮತ ಮತ್ತು ರೆಹಮತ್ತರನ್ನು ಜನರೆದುರಿನಲ್ಲಿ ತಾವೇ ಗಲ್ಲಿಗೇರಿಸುವ ನಿರ್ಣಯ ಹೊತ್ತ ಭಿತ್ತಿಪತ್ರಗಳನ್ನು ಪ್ರಕಟಿಸಿದರು. ಆದ್ದರಿಂದ ಅವರಿಬ್ಬರನ್ನು ಗುಟ್ಟಾಗಿ ದೇಶದಿಂದ ಹೊರಗೆ ಸಾಗಿಸಲಾಯಿತು.

೧೯೯೭ರ ಅಕ್ಟೋಬರ್ ೧೧ರಂದು ನ್ಯಾಯಮೂರ್ತಿ ಭಿಟ್ಟಿಯವರನ್ನು ಲಾಹೋರಿನ ಕಾನೂನು ಕಾರ್ಯಾಲಯದಲ್ಲಿ, ಒಬ್ಬ ಬಂದೂಕುಧಾರಿ ಗುಂಡಿಟ್ಟುಕೊಂದನು.

ಕೆಥೋಲಿಕ್ ಚರ್ಚಿನ ರಕ್ಷಣೆಯಲ್ಲಿ ವಾಸಿಸುತ್ತಿರುವ ಮಂಜೂರನ ವಿಧವೆ ರಷೀದಾ ''ಇಂದು ಪಾಕಿಸ್ತಾನದಲ್ಲಿ ಕ್ರಿಶ್ಚಿಯನ್ನರಾಗಿ ಉಳಿಯಲು ಸಾಧ್ಯವೆ?'' ಎಂದು ಕೇಳುತ್ತಾಳೆ. ''ಮಂಜೂರರ ಸತ್ತ ಮೇಲೆ ನನ್ನನ್ನು ಮನೆಬಿಟ್ಟು ಹೊರಹಾಕಲಾಯಿತಲ್ಲದೆ ನನ್ನ ಸ್ನೇಹಿತರೆಲ್ಲ ನನ್ನ ವೈರಿಗಳಾದರು. ಆದರೆ ನಾನು ಮಾತ್ರ ನನ್ನ ಧರ್ಮವನ್ನು ಬಿಟ್ಟುಕೊಡುವುದಿಲ್ಲ-ಈಗ ಉಳಿದಿರುವುದು ಅದೊಂದು ಮಾತ್ರ'' ಎಂದೆನ್ನುತ್ತಾಳೆ.

''ಪ್ರವಾದಿಯ ಹೆಸರನ್ನು ರಕ್ಷಿಸಲು ನಿಯಮಗಳನ್ನು ಮಾಡುವುದರಿಂದ ಇದೆಲ್ಲ ಪ್ರಾರಂಭವಾಯಿತು. ಈಗ ಇದು ಒಂದು ಪಂಗಡದವರನ್ನು ಕೊಲೆ ಮಾಡುವ ಕಡೆಗೆ ತಿರುಗಿದೆ'' ಎಂದು ಲೇಖಕಿ ಹಾಗೂ ಉರ್ದು ಅನುವಾದಕಿ ಷಾಜಿಯಾ ಆಲಮ್ ಹೇಳಿದ್ದಾಳೆ. ''ಕ್ರಿಶ್ಚಿಯನ್ನರನ್ನು ಸಾಕಷ್ಟು ತಳ್ಳಿದರೆ, ನಾವು ಗಂಟುಮೂಟೆ ಕಟ್ಟಿಕೊಂಡುಹೋಗಿಬಿಡುತ್ತೇವೆಂಬ ನಂಬಿಕೆ ಬೆಳೆಯುತ್ತಲಿದೆ'' ಎಂದೆನ್ನುತ್ತಾಳೆ.

೧೯೯೮ರ ಜನವರಿಯಲ್ಲಿ ಮೂವರು ಅಪರಿಚಿತರು ಅವಳ ಮನೆಯೊಳಗೆ ನುಗ್ಗಿ ಕ್ರಿಶ್ಚಿಯನ್ ಧರ್ಮಾಧಿಕಾರಿಯಾದ ಅವಳ ತಂದೆಯನ್ನು ಕೊಂದಾಗ ಒಂದು ಅಲ್ಮಾರಿಯಲ್ಲಿ ಅಡಗಿಕೊಂಡಿದ್ದು ಅವಳಿಗೆ ನೆನಪಿದೆ. ಅವಳ ತಾಯಿ ಸಕೀನಾ ತನ್ನ ೫೮ ವರ್ಷದ ಗಂಡ ನೂರನನ್ನು ಜನರು ಹೊಡೆಯುತ್ತಿದ್ದುದನ್ನು ನೋಡಲೇಬೇಕಾಯಿತು. ಮೊದಲು ಅವನನ್ನು ದೊಣ್ಣೆಯಿಂದ, ನಂತರ ಕತ್ತಿಯಿಂದ ತಿವಿದು ಕೊನೆಗೆ ತಲೆಯಲ್ಲಿ ಗುಂಡಿಟ್ಟು ಕೊಲ್ಲಲಾಯಿತು.

ಒಬ್ಬ ಮುಸಲ್ಮಾನನಿಂದ ಕೊಂಡುಕೊಂಡ ಸ್ಥಳದಲ್ಲಿ ನೂರ್ ಆಲಮ್ ಒಂದು ಚರ್ಚನ್ನು ಕಟ್ಟಲು ಪ್ರಯತ್ನಿಸುತ್ತಿದ್ದರಿಂದ ಅವನನ್ನು ಕೊಲ್ಲಲಾಯಿತು. ಚರ್ಚನ್ನು ಪ್ರಾರಂಭಿಸಲು ಕಲವೇ ದಿನಗಳಿರುವಾಗ, ಜನರ ಗುಂಪೊಂದು ಒಂದು ಮಧ್ಯರಾತ್ರಿ ಆ ಕಟ್ಟಡಕ್ಕೆ ಬೆಂಕಿ ಹಚ್ಚಿತು. ಧರ್ಮಾಧಿಕಾರಿ ಪೊಲೀಸರಿಗೆ ಒಂದು ದೂರು ಸಲ್ಲಿಸಿದನಲ್ಲದೆ, ತಾನು ಆರಾಧನಾ ಮಂದಿರವನ್ನು ಮತ್ತೆ ಕಟ್ಟಿಸುವುದಾಗಿ ನಿವಾಸಿಗಳಿಗೆ ವಚನವಿತ್ತನು. ಆಗಲೇ ಜೀವದ ಬೆದರಿಕೆಗಳು ಬರಹತ್ತಿದವು.''ಅವನಿಗೆ ದೂರವಾಣಿ ಕರೆಗಳು ಬರಹತ್ತಿದವು. ಆದರೆ ಅವನು ನನಗೆ ಅದರ ಬಗ್ಗೆ ಹೇಳುತ್ತಿರಲಿಲ್ಲ..ಅವನು ತನ್ನ ಸಮುದಾಯದವರಿಗೆ ಸಹಾಯ ಮಾಡುತ್ತಲಿದ್ದ'' ಎಂದು ಸರೀನಾ ಹೇಳುತ್ತಾಳೆ.

ಧರ್ಮಾಧಿಕಾರಿ ನೂರ ಆಲಮ್ಮನ ಚರ್ಚಿನಲ್ಲಿ ಉಳಿದಿರುವುದೆಂದರೆ ಮಣ್ಣು, ಇಟ್ಟಿಗೆಗಳ ದಿಣ್ಣೆ ಮತ್ತು ಕರಿಕಾದ ತೊಲೆಗಳು. ಹಾಳುಬಿದ್ದ ಈ ಸ್ಥಳ ಪೊಲೀಸರ ಕಾವಲಿನಲ್ಲಿದೆ. ಹತ್ತಿರದಲ್ಲಿ ವಾಸಿಸುವ ಗ್ರಾಮಸ್ಥರಿಗೆ ಈ ಹೆಂಟೆ, ಇಟ್ಟಿಗೆ, ಗುಂಡು ಕಲ್ಲುಗಳ ರಾಶಿ ಕಂಡರಾಗುವುದಿಲ್ಲ. ಪ್ರತಿದಿನ ಕೆಲವು ಇಟ್ಟಿಗೆಗಳನ್ನು ಕಳವು ಮಾಡಲಾಗುತ್ತದೆ. ಶೀಘ್ರದಲ್ಲಿಯೇ ಆ ಪ್ರಾರ್ಥನಾ ಮಂದಿರದ ಯಾವ ವಸ್ತುವೂ ಅಲ್ಲಿರಲಾರದು.

ಕಟ್ಟಡಗಳು ಹೋದನಂತರ ಕೇವಲ ಶ್ರದ್ಧೆ ಮಾತ್ರ ಉಳಿದಿರುತ್ತದೆ, ಅದನ್ನು ಕೂಡಾ ಒತ್ತಾಯದಿಂದ ಕಸಿದುಕೊಳ್ಳಬಹುದು.

೧೯೯೮ರ ಜನವರಿಯಲ್ಲಿ ಸೀಮಾ ಮತ್ತು

ಖುಶಿ ಮಸಿಹರ ಮನೆಗೆ ಧಾವಿಸಿದ ಪೊಲೀಸರು ಅವರ ಮೂವರು ಹೆಣ್ಣು (ಕ್ರಮವಾಗಿ೧೫, ೧೩ಮತ್ತು೧೧ ವಯಸಿನ) ಮಕ್ಕಳಾದ ನಾಡಿಯಾ, ನಯಿಮಾ ಮತ್ತು ನಬಿಲಾರನ್ನು ತಮಗೆ ಒಪ್ಪಿಸುವಂತೆ ಒತ್ತಾಯಿಸಿದರು. ಆ ಹುಡುಗಿಯರು ಇಸ್ಲಾಮ್‌ಗೆ ಮತಾಂತರ ಹೊಂದಿದ್ದರಿಂದ, ಅವರು ತಮ್ಮ ಕ್ರಿಶ್ಚಿಯನ್ ತಂದೆ-ತಾಯಿಗಳ ಜೊತೆಗಿರುವುದು ಮುಂದುವರೆಸಿದರೆ ಮುಸಲ್ಮಾನ ಪಂಗಡದ ಸಂವೇದನೆಗೆ ಘಾಸಿಯಾಗುವದೆಂದು ಪೊಲೀಸರು ಹೇಳಿದರು. ಅದಕ್ಕೆ ಬದಲಾಗಿ, ತಮ್ಮ ರಾವಲಪಿಂಡಿಯ ಮನೆಯ ಮೇಲಂತಸ್ತಿನಲ್ಲಿರುವ ಮನೆಯ ಒಡೆಯನಿಗೆ ಮಕ್ಕಳನ್ನು ಒಪ್ಪಿಸು ವಂತೆ ಆ ದಂಪತಿಗಳಿಗೆ ಸೂಚನೆ ನೀಡಲಾ ಯಿತು.

''ನಾವು ಕೆಲಸಕ್ಕೆ ಹೋದಾಗ, ಮೇಲಂತಸ್ತಿನಲ್ಲಿರುವ ಶ್ರೀಮಂತ ಕುಟುಂಬದವರು ನಮ್ಮ ಹುಡುಗಿಯರಿಗೆ ಕಾಣಿಕೆಗಳನ್ನು ಕೊಟ್ಟಿದ್ದರಲ್ಲದೆ, ಅವರು ಮತಾಂತರ ಹೊಂದಿದರೆ ಇನ್ನಷ್ಟು ಕಾಣಿಕೆಗಳನ್ನು ಕೊಡುವುದಾಗಿ ಹೇಳಿದ್ದುಂಟು. ಪೊಲೀಸರು ನಮ್ಮ ಮನೆಗೆ ಬರುವವರೆಗೆ ನಮಗೆ ಈ ವಿಷಯದ ಬಗ್ಗೆ ಏನೂ ತಿಳಿದಿರಲಿಲ್ಲ'' ಎಂದು ಸೀಮಾ ಹೇಳಿದಳು.

ಸೀಮಾ ಮತ್ತು ಖುಷಿ ನ್ಯಾಯಾಲಯದ ಬಾಗಿಲು ಬಡಿದರು. ಆದರೆ ಹುಡುಗಿಯರು ತಮ್ಮ ರಕ್ಷಣೆಯಲ್ಲಿರಲೆಂದು ವಿನಂತಿಸಿಕೊಂಡಾಗ , ದಂಡಾಧಿಕಾರಿ ಆ ಹುಡುಗಿಯರನ್ನು ನ್ಯಾಯಾಂಗದ ರಕ್ಷಣೆಯಲ್ಲಿರಿಸುವಂತೆ ಆದೇಶವಿತ್ತನು. ಮಾರ್ಚ್ ೧೯೯೮ರಲ್ಲಿ ಆ ಮೂವರು ಹುಡುಗಿಯರು ನ್ಯಾಯಾಲಯಕ್ಕೊಂದು ಅರ್ಜಿ ಬರೆದು, ತಮ್ಮನ್ನು ಮನೆಗೆ ಕಳಿಸಿಕೊಡುವಂತೆ ವಿನಂತಿಸಿಕೊಂಡರು. ಆದರೆ ಮುಸಲ್ಮಾನರ ಗುಂಪುಗಳು ನ್ಯಾಯಾಲಯಕ್ಕೆ ತೆರಳಿ ಆ ಹುಡುಗಿಯರನ್ನು ಹೆದರಿಸಿದರಲ್ಲದೆ ಆ ಊರಿನ ಮಸೀದಿ ಈ ಹುಡುಗಿಯರ ವಿರುದ್ಧ ಫತ್ವಾ ಘೋಷಿಸಿ, ಅವರೇನಾದರೂ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದರೆ ಅವರನ್ನು ''ಕತ್ತರಿಸಿ ಚೂರು ಚೂರು ಮಾಡಲಾಗುವುದು'' ಎಂದು ಎಚ್ಚರಿಕೆಯನ್ನಿತ್ತವು.

ತಂದೆ ತಾಯಿಗಳು ಮಾಡಿದ ತಕರಾರುಗಳನ್ನು ಪರಿಶೀಲಿಸಿ ೧೯೯೯ರ ಮಾರ್ಚಿನಲ್ಲಿ, ನ್ಯಾಯಾಲಯ ಒಂದು ತೀರ್ಪನ್ನಿತ್ತಿತು. ಅದರ ಪ್ರಕಾರ, ತನ್ನ ಮುಸಲ್ಮಾನ ಪತಿಯ ಜೊತೆ ವಾಸಿಸುತ್ತಿರುವ ಹಿರಿಯಕ್ಕನ ರಕ್ಷಣೆಯಲ್ಲಿ ಕಿರಿಯ ಇಬ್ಬರು ಸೋದರಿಯರಿರುವಂತಾಯಿತು. ಹುಡುಗಿಯರ ಕುಟುಂಬ ರಾವಲಪಿಂಡಿಯ ಮನೆಬಿಟ್ಟು ತಲೆಮರೆಸಿಕೊಂಡಿದೆ.

ಪಾಕಿಸ್ತಾನದಲ್ಲಿನ ಕ್ರಿಶ್ಚಿಯನ್ನರ ನಗರ-ಪಟ್ಟಣಗಳಲ್ಲಿನ ಶಾಲೆಗಳಲ್ಲಿ ಪಾಠ ಹೇಳಿಕೊಡುವ ಅಥವಾ ನ್ಯಾಯಾಲಯಗಳಲ್ಲಿ ಅಧಿಕಾರ ನಡೆಸುವ ಕೆಲಸ ಮಾಡುತ್ತಿಲ್ಲ. ಅವರು ಓಣಿಗಳಲ್ಲಿ ಕಸ ಬಳಿಯುವ ಅಥವಾ ಕಕ್ಕಸಗಳನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿರುತ್ತಾರೆ. ಅವರ ಬಡತನ ಮತ್ತು ಧರ್ಮದಿಂದಾಗಿ, ಅವರನ್ನು ಸಾಮಾಜಿಕವಾಗಿ ಕೀಳುದರ್ಜೆಯವರನ್ನಾಗಿ ಪರಿಗಣಿಸಲಾಗುತ್ತದೆ.

೧೯ನೇ ಶತಮಾನದಲ್ಲಿ ಪಂಜಾಬಿಗೆ ಬಂದ ಧರ್ಮ ಪ್ರಚಾರಕರು, ಅಲ್ಲಿನ ಉಚ್ಚ ಜಾತಿಯ ಹಿಂದುಗಳು, ಸುಶಿಕ್ಷಿತ ಸಿಖ್ಖರು ಮತ್ತು ಮುಸಲ್ಮಾನರನ್ನು ಮತಾಂತರಿಸುವಲ್ಲಿ ಹೆಚ್ಚು ಯಶಸ್ವಿಯಾಗಲಿಲ್ಲ. ಅದಕ್ಕೆ ಬದಲಾಗಿ ಅವರು ಕೆಳಜಾತಿಯ ಹಾಗೂ ಕೆಳವರ್ಗದವರನ್ನು ಮತಾಂತರಿಸಿ ಅವರನ್ನು ತಮ್ಮ ಧರ್ಮ ಸಂಸ್ಥೆಗಳಿಗೆ ಕರೆದೊಯ್ದು ನೆಲೆಸುವಂತೆ ಮಾಡಿದರು. ೧೯೮೫ರಲ್ಲಿ ಮಿಲಿಟರಿ ಸರ್ವಾಧಿಕಾರಿ ಜಿಯಾ-ಉಲ್-ಹಕ್, ಒಂದು ಪ್ರತ್ಯೇಕ

ಚುನಾವಣಾ ಪದ್ಧತಿಯನ್ನು ಜಾರಿಗೊಳಿಸಿ ಈ ಬಹಿಷ್ಕಾರವನ್ನು ಪೂರ್ಣಗೊಳಿಸಿದನು.

ಇಂದು ಕ್ರಿಶ್ಚಿಯನ್ನರು, ಯಾವುದೇ ಭದ್ರ ಸ್ಥಾನಿಕ ನೆಲೆ ಅಥವಾ ಪ್ರಭಾವವಿರದ ನಾಲ್ವರು ಅಸ್ಥಾಯಿಯಾದ ರಾಜಕಾರಣಿಗಳನ್ನು ಆಯ್ಕೆ ಮಾಡಬಹುದಾಗಿದೆ.

ಚರ್ಚ್ ಒಂದೇ ಅವರ ಸ್ಥಾನಿಕ ಪ್ರತಿನಿಧಿ. ಆದರೆ ಅಲ್ಲಿ ಯುರೋಪಿನ ಧರ್ಮಾಧಿಕಾರಿಗಳ ಪರಂಪರೆ ಮತ್ತು ಬದಲಾವಣೆಗೆ ಸಿದ್ಧವಿರದಿರುವುದೇ ಒಂದು ಹೊರೆಯಾಗಿದೆ. ''ಈಗಲೂ ನಾವೊಂದು ವಸಾಹತು ಸಂಸ್ಥೆಯಾಗಿದ್ದು, ಗ್ರಾಮಗಳಲ್ಲಿ ಮತಾಂತರಿಸಿ ಅನಂತರ ಆ ಕ್ರಿಶ್ಚಿಯನ್ನರನ್ನು ತಮಗೆ ಬೇಕೆನಿಸಿದಂತಿರಲು ಬಿಡುತ್ತಿದ್ದೇವೆ'' ಎಂದು ಪಾಕಿಸ್ತಾನದ ಚರ್ಚಿನ ಅಧ್ಯಕ್ಷ ಬಿಷಪ್ ಆರ್ಝುರ್ವೆ ಹೇಳಿದ್ದಾನೆ, ''ನಾವು ಕಾರ್ಯ ಪ್ರವೃತ್ತರಾಗದಿದ್ದರೆ, ಕ್ರಿಶ್ಚಿಯನ್ನರನ್ನು ಈ ದೇಶದಿಂದ ಹೊರ ಹಾಕಲಾಗುತ್ತದೆಂದು ನನಗೆನಿಸುತ್ತದೆ''.

ಇದೇ ಕಾಲಕ್ಕೆ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿ ಇಸ್ಮಾಯಿಲ್ ಖುರೇಷಿ ಇಸ್ಲಾಮಿ ಶೇರಿಯಾ ಕಾನೂನನ್ನು ಜಾರಿಗೊಳಿಸುವಲ್ಲಿ ನಾಯಕತ್ವ ವಹಿಸಿರುವನು. ಅವನು ಯಶಸ್ವಿಯಾದರೆ, ಪ್ರವಾದಿಯ ಬೋಧನೆಗಳು, ಸಂಪ್ರದಾಯಸ್ಥ ಮುಸಲ್ಮಾನ ಮೌಲವಿಗಳು ಮತ್ತು ನ್ಯಾಯವಾದಿಗಳು ಅರ್ಥೈಸಿದ್ದೇ ಅಧಿಕೃತವಾಗಿ ದೇಶದ ಸಂವಿಧಾನ ಮತ್ತು ದಂಡನೆಯ ಕಾನೂನಿಗಿಂತ ಮಿಗಿಲಾಗಿ ಬಿಡುತ್ತದೆ.

ಶೇರಿಯಾ ಇನ್ನೂ ದೇಶದ ಕಾನೂನು ಆಗಿಲ್ಲವಾದರೂ ಕ್ರಿಶ್ಚಿಯನ್ನರ ವಿಚಾರಣೆ ಮಾತ್ರ ಇದರ ತತ್ವಗಳಡಿಯಲ್ಲಿ ನಡೆಸಲಾಗುತ್ತದೆ. ಅಸಿಮಾ ಪರವೀನಳ ಮೇಲೆ ಲೈಂಗಿಕ ಅತ್ಯಾಚಾರ ನಡೆದಾಗ ಅವಳು ೧೩ ವರ್ಷದವಳಾಗಿದ್ದಳು. ೧೯೯೬ರ ಅಕ್ಟೋಬರ್ ೨೧ರಂದು ಹೊಲಕ್ಕೆ ಹೋಗುತ್ತಿದ್ದಾಗ ಜಾವೇದ ಇಕ್ಬಾಲ್ ಅವಳ ಹಿಂದೆ ಹೋದದ್ದನ್ನು ೧೨ ಸಾಕ್ಷಿಗಳು ನೋಡಿದ್ದರು. ಈ ವರ್ಷ ಅವನ ಮೇಲಿನ ಆರೋಪವನು ರದ್ದುಗೊಳಿಸಲಾಯಿತು. ಅವನ ಕುಟುಂಬದವರು ೩೦,೦೦೦ ಡಾಲರಿನ ಮಾನಹಾನಿ ದಾವೆ ಹೂಡಿದರಲ್ಲದೆ ಇಸ್ಲಾಮಿ ಹದೂದ(ವ್ಯಭಿಚಾರ) ಕಾನೂನನ್ನು ಬಳಸಬೇಕೆಂಬ ಒತ್ತಡದಿಂದಾಗಿ ನ್ಯಾಯಾಧೀಶ, ವಿವಾಹಿತಳಾದ ಅಸಿಮಾ ಅನೈತಿಕ ಸಂಬಂಧ ಹೊಂದಿದ್ದಳೆಂದು ತೀರ್ಪನ್ನಿತ್ತನು.

ಸಂಕಟಕ್ಕೀಡಾದ ಈ ಕುಟುಂಬ ಕಬ್ಬಿನಗದ್ದೆಯಲ್ಲೊಂದು ಮಣ್ಣಿನ ಮನೆಯಲ್ಲಿ ತಲೆ ಮರೆಸಿಕೊಂಡಿದ್ದಾರೆ. ''ನಾನೇ ಬಲಿಯಾದ ಅಪರಾಧಕ್ಕೆ ನನಗೇಕೆ ಶಿಕ್ಷಿಸಲಾಗುತ್ತಿದೆ ? ನನ್ನದಂತೂ ಸರ್ವನಾಶವಾಗಿದೆ. ನಾನು ಮತ್ತೆ ಹಳ್ಳಿಗೆ ಹೋಗಲಾರೆ ಅಥವಾ ಮದುವೆಯಾಗಲಾರೆ'' ಎಂದೆನ್ನುತ್ತಾಳೆ ಈ ತರುಣಿ. ತನ್ನ ಅಪಮಾನಿತಮುಖ ಯಾರೂ ನೋಡದಿರಲೆಂದು ಮುಖದ ಮೇಲೆ ಪರದೆ ಎಳೆದುಕೊಂಡಳು. ಅವಳು ತಪ್ಪಿತಸ್ಥಳೆಂದು ಸಿದ್ಧವಾದರೆ, , ಅಸಿಮಾಳನ್ನು ಬೆತ್ತದಿಂದ ೮೦ ಸಲ ಥಳಿಸಲಾಗುತ್ತದೆ.

ಅಜ್ಜಿ ಎಂಬ ಅಚ್ಚರಿ

ದಣಿವೇ ಅರಿಯದ ನನ್ನ ಬಾಬುಜಿ

ಟಿ.ಎಸ್.ಸಂಜೀವರಾವ್
ಇ.ಡಬ್ಲ್ಯೂ.ಎಸ್. ೪೩೪, ಕೆ.ಎಚ್.ಬಿ.
ಕಾಲೋನಿ, ೨ನೇ ಹಂತ, ೪ನೇ
ಮುಖ್ಯ ರಸ್ತೆ, ಬಸವೇಶ್ವರ ನಗರ
ಬೆಂಗಳೂರು-೫೬೦ ೦೭೯

೧೯೨೪ರಲ್ಲಿ, ಅಂದರೆ ಮದುವೆಯಾದ ಒಂದುವರ್ಷದ ಅನಂತರ, ಒಂದು ಶುಭದಿನ ನೋಡಿ, ಅಜ್ಜಿಯನ್ನು ಅವಳ ತಂದೆ ತಾಯಿಯರು ಪುಟ್ಟಮಂಗಳಂ ಎಂಬ ಹಳ್ಳಿಯಲ್ಲಿದ್ದ ಅವರ ಬೀಗರ ಮನೆಗೆ ಕರೆದುಕೊಂಡು ಬಂದು ಬಿಟ್ಟರು. ಆಗ ಅಜ್ಜಿಗೆ ಕೇವಲ ಹದಿನಾಲ್ಕು ವರ್ಷ. ಅಜ್ಜಿಯ ಯಜಮಾನರು, ಅಂದರೆ ನನ್ನ ತಾತ-ಅವರ ಹೆಸರು ಆರ್. ಕೃಷ್ಣಮೂರ್ತಿ-ಎಷ್ಟೋ ವರ್ಷಗಳ ಮೇಲೆ ''ಕಲ್ಕಿ'' ಎಂಬ ಗೂಢನಾಮದಿಂದ ತಮಿಳಿನಲ್ಲಿ ಲೇಖಕ, ಸಂಪಾದಕ ಎಂದು ಸುಪ್ರಸಿದ್ಧರಾದರು.

ಮನೆ ತುಂಬಿಸುವ ಶುಭಸಮಯಕ್ಕೆಂದು ಅಜ್ಜಿಯ ತಂದೆ ಆಕೆಗೆ ಒಂದು ಚಿನ್ನದ ಸರವನ್ನು ಬಳುವಳಿಯಾಗಿ ಕೊಟ್ಟಿದ್ದರು. ಆದರೆ ಪುಟ್ಟಮಂಗಳಂಗೆ ಬಂದು ನೋಡಿಕೊಂಡಾಗ ಅದು ಕಾಣಿಸಲೇ ಇಲ್ಲ. ಕಳುವಾಗಿರಬಹುದೇನೋ ಎಂಬ ಅನುಮಾನವಿತ್ತು.

ಅಜ್ಜಿಯ ಅತ್ತೆಮಾವನವರಿಗೆ ಇದನ್ನು ತಿಳಿಸಿದಾಗ ದೊಡ್ಡ ರಾದ್ಧಾಂತವೇ ಆಯಿತು. ನನ್ನ ಅಜ್ಜಿಯ ಮನೆಯವರು ಮೋಸ ಮಾಡಿದ್ದಾರೆಂದು ಬೀಗರು ಆಪಾದಿಸಿದರು. ಸರವನ್ನು ಅವರು ಮಾಡಿಸಿಯೇ ಇಲ್ಲ, ಕಳುವಾಗಿದೆ ಎಂಬುದು ಕಟ್ಟುಕಥೆ ಎಂದೆಲ್ಲ ರೇಗಾಡಿದರು.

ನನ್ನ ತಾತ ಕೃಷ್ಣಮೂರ್ತಿ ಆಗ ನಡೆದುಕೊಂಡದ್ದನ್ನು ನೆನಸಿಕೊಂಡರೆ ಅದೊಂದು ಅದ್ಭುತ ಎನಿಸುತ್ತೆ. ಊರಿನವರೆಲ್ಲ ಆಶ್ಚರ್ಯದಿಂದ ನೋಡುತ್ತಿದ್ದ ಹಾಗೆಯೇ ಅವರು ಹೆಂಡತಿಯನ್ನು ಹೆಸರಿಡಿದು ಕೂಗಿ ಕರೆದು, ಮನೆಯ ಒಂದು ಕೊಠಡಿಗೆ ಕರೆದುಕೊಂಡು ಹೋಗಿ, ''ಸರ ನಿಜವಾಗಿಯೂ ಕಳೆದು ಹೋಗಿದೆಯೆ? '' ಎಂದು ಕೇಳಿದರು. ನಡು ನಡುಗುತ್ತಾ ಅಜ್ಜಿ ''ಹೌದು'' ಎಂದು ಮೆಲ್ಲಗೆ ಉಸುರಿದಳು.

ಸೇರಿದ್ದ ಎಲ್ಲರನ್ನೂ ಚುಪ್‌ಚಾಪ್ ಮಾಡಿ, ನನ್ನ ತಾತ ಅಜ್ಜಿಯನ್ನು ಚೆನ್ನೈನ ತನ್ನ ಮನೆಗೆಕರೆದುಕೊಂಡು ಹೋಗುವುದಕ್ಕೆ ಎಲ್ಲಾ ಏರ್ಪಾಡುಗಳನ್ನೂ ಮಾಡಿದರು. ''ನೋಡು, ನಿನ್ನ ತಾತ ದೇವರ ಸಮಾನ. ನನ್ನ ಒಂದೇ ಮಾತಿಗೆ ಬೆಲೆಕೊಟ್ಟು ಲವಲೇಶವೂ ಅನುಮಾನ ಪಡದೆ ತಮ್ಮ ಮನೆಗೆ ಕರೆದುಕೊಂಡು ಹೋಗಿ ನಮ್ಮ ಮಾನ ಉಳಿಸಿದರು. ಸರವೇನೋ ಆಮೇಲೆ ಸಿಕ್ಕಿತು,'' ಎಂದು ಅಜ್ಜಿ ಈಗಲೂ ಅದನ್ನು ಹೇಳುವಾಗ ಅವರ ಕಣ್ಣಲ್ಲಿ ನೀರು ತುಂಬಿ ಕೊಳ್ಳುತ್ತೆ.

ಆ ಕ್ಷಣದಿಂದ ಅಜ್ಜಿ ನನ್ನ ತಾತನಲ್ಲಿ ಅತ್ಯಂತ ಗಾಢವಾದ, ನಿಚ್ಚಳವಾದ ಪ್ರೇಮದಿಂದ ವರ್ತಿಸಿದರು. ಈ ಪ್ರೇಮ ಮೂವತ್ತು ವರ್ಷಗಳೂ-ಅಂದರೆ ನನ್ನ ತಾತ ತೀರಿಹೋಗುವವರೆಗೆ-ನಿರಂತರವಾಗಿ ಸಾಗಿತ್ತು. ಅಷ್ಟು ವರ್ಷಗಳೂ ಅವರಿಬ್ಬರೂ ಪರಮಾನಂದ

ಆಗಸ್ಟ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಗೌರಿ ರಾಮನಾರಾಯಣ್‌ರ ಲೇಖನದ ಅನುವಾದ.

ದಿಂದ ಸಂಸಾರ ಸಾಗಿಸಿದರು. ಆಶ್ಚರ್ಯ ಎಂದರೆ ಅವರಿಬ್ಬರ ವ್ಯಕ್ತಿತ್ವದಲ್ಲಿ ಬಹಳ ಅಂತರವಿತ್ತು. ತಾತನದು ಉದಾತ್ತ ಧ್ಯೇಯಗಳು ; ಸಾಮಾಜಿಕ ಕಾರ್ಯಗಳಲ್ಲಿ ಉತ್ಸಾಹದಿಂದ ಮೈಮನ ಸವೆಸುತ್ತಿದ್ದರು. ಅವರು ನಿಷ್ಠಾವಂತ ದೇಶ ಪ್ರೇಮಿ, ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಮಹಾತ್ಮಗಾಂಧಿಯವರ ಕರೆಗೆ ಓಗೊಟ್ಟು ಶಾಲೆಯನ್ನು ತ್ಯಜಿಸಿದ್ದರು. ಸಾಮಾಜಿಕ ಕುಂದುಕೊರತೆಗಳನ್ನು ಸುಧಾರಿಸಲು ಅವರು ಮಾಡಿದ ಪ್ರಯತ್ನಗಳಿಗೆ ಸಂಪ್ರದಾಯಸ್ಥರು ಛೀಮಾರಿ ಹಾಕಿದ್ದರು. ಹೆಣ್ಣು ಮಕ್ಕಳು ಸಹ ವಿದ್ಯಾವಂತರಾಗಬೇಕು, ವಿಧವೆಯರಿಗೆ ಪುನರ್ವಿವಾಹವಾಗುವ ಹಕ್ಕು ಇರಬೇಕು, ಜಾತಿ ಪದ್ಧತಿ ತೊಲಗಬೇಕು, ಅಸ್ಪೃಶ್ಯತೆ ನಿವಾರಣೆಯಾಗಬೇಕು ಎಂದೆಲ್ಲ ಅವರು ವಾದಿಸುತ್ತಿದ್ದರು. ಅವರಿಗೆ ಹೆಸರಿಗೇನೋ ಒಂದು ಕೆಲಸವಿತ್ತು. ತಮಿಳು ಪತ್ರಕರ್ತನಾಗಿ. ಭದ್ರವಿಲ್ಲದ ನೌಕರಿ. ಸತ್ಯಾಗ್ರಹಿಯಾಗಿ ಸೆರೆಮನೆ ವಾಸವೂ ಆಗಿತ್ತು. ಈ ಕಾರಣದಿಂದಲೇ ಅವರ ಮೊದಲನೆ ಮದುವೆಯ ಪ್ರಸ್ತಾಪ ಮುರಿದು ಬಿದ್ದಿತ್ತು.

ನಮ್ಮಜ್ಜಿಯನ್ನು ನಾವೆಲ್ಲ ಬಾಬುಜಿ ಎಂದೇ ಕರೆಯುತ್ತಿದ್ದೆವು. ಅವರು ಹುಟ್ಟಿದ್ದು ತಂಜಾವೂರು ಜಿಲ್ಲೆಯ ತಲೈಯೂರ್ ಎಂಬ ಹಳ್ಳಿಯಲ್ಲಿ. ಅವರಿಗೆ ತಿಳಿದ ಹಾಗೆ ೧೯೧೦ ರಲ್ಲಿ. ತಂದೆ ರಾಮಸ್ವಾಮಿ, ತಾಯಿ ಕುಂಜಮ್ಮಾಳ್. ನಮ್ಮಜ್ಜಿಯೇ ಹಿರಿಮಗಳು. ರಾಮಸ್ವಾಮಿಯವರು ಒಬ್ಬ ಸಣ್ಣ ರೈತ. ಹೊಟ್ಟೆ ಬಟ್ಟೆಗೆ ಸಾಕಾಗುವಷ್ಟು ಮಾತ್ರ ದುಡಿಮೆ. ಹಿರಿಮಗಳು ಭಾಗ್ಯ ತಂದಾಳೆಂದು ಅವಳಿಗೆ ಮುತ್ತು ಲಕ್ಷ್ಮಿ ಎಂದು ಶುಭನಾಮಕರಣ ಮಾಡಿದ್ದರು.

ಆದದ್ದೇ ಬೇರೆ. ಸಾಲಾಗಿ ಮತ್ತೆ ಮೂವರು ಮಕ್ಕಳು. ಸ್ಥಿತಿ ಉತ್ತಮವಾಗಲೇ ಇಲ್ಲ. ಮುತ್ತು ಲಕ್ಷ್ಮಿ ತಾಯಿಗೆ ಮನೆಗೆಲಸದಲ್ಲೆಲ್ಲ ನೆರವಾಗಿ, ತನ್ನ ಕಿರಿಯರನ್ನೂ ನೋಡಿಕೊಳ್ಳಬೇಕಾಯಿತು. ಆಕೆ ಶಾಲೆಗೆ ಹೋಗಲು ಆಗಲೇ ಇಲ್ಲ. ಆದರೆ ಹುಟ್ಟು ಬುದ್ಧಿವಂತಳಾದ್ದರಿಂದ ಅವಳು ಮಾಡುತ್ತಿದ್ದ ಕೆಲಸಗಳೆಲ್ಲ ಚಾತುರ್ಯದಿಂದ ಕಳಕಳಿಸುತ್ತಿದ್ದುವು. ತರಕಾರಿಗಳನ್ನು ಹೆಚ್ಚುವುದೇ, ನೆಲ ಸಗಣಿಯಿಂದ ಸಾರಿಸುವುದೇ-ಎಲ್ಲವನ್ನೂ ಚೊಕ್ಕವಾಗಿ ಮಾಡುತ್ತಿದ್ದಳು. ಹೆಣುಮಕ್ಕಳಿಗೇ ಮೀಸಲಾದ ರಂಗೋಲಿ ಇಡುವುದೆಂದರೆ ಅವಳಿಗೆ ಇನ್ನಿಲ್ಲದಷ್ಟು ಆನಂದ. ಅಕ್ಕಿ ಹಿಟ್ಟಿನಿಂದ ಅಂಗಳದಲ್ಲಿ, ಮನೆಯಲ್ಲಿ ದೇವರ ಮುಂದೆ, ವಿಧವಿಧವಾದ ಚಿತ್ರವಿನ್ಯಾಸಗಳನ್ನು ಎಳೆಯುವುದರಲ್ಲಿ ತಲ್ಲೀನಳಾಗಿರುತ್ತಿದ್ದಳು. ಈ ಜಟಿಲವಾದ ಕಲೆಯಲ್ಲಿ ಅವಳು ಬೇಗನೆ ಪರಿಣತಿ ಪಡೆದು, ಕೆಲವೇ ವರ್ಷಗಳಲ್ಲಿ ನವನವೀನ ವಿನ್ಯಾಸಗಳಲ್ಲಿ ರಂಗೋಲಿ ಇಡುವುದನ್ನು ಅಭ್ಯಾಸ ಮಾಡಿಕೊಂಡಳು.

ಹದಿಮೂರು ವರ್ಷಗಳಾಗಿದ್ದರೂ ಆಕೆಗೆ ಮದುವೆಯಾಗಿರಲಿಲ್ಲ. ಹಳ್ಳಿಯ ಜನ ಮುತ್ತು ಲಕ್ಷ್ಮಿಯ ವಿಷಯ ಗುಜುಗುಜು ಮಾತನಾಡಿಕೊಳ್ಳ ಹತ್ತಿದರು. ಆಗಿನ ಕಾಲದಲ್ಲಿ ನಾಲ್ಕು ದಿನ ಸತತವಾಗಿ ನಡೆಯಬೇಕಾಗಿದ್ದ ಮದುವೆ ಸಮಾರಂಭದ ಖರ್ಚು ನೀಗಿಸಲು ಈ ಸಂಸಾರಕ್ಕೆ ಹೇಗಾದರೂ ಸಾಧ್ಯವಿರಲಿಲ್ಲ. ಇದೇ ಕಾರಣದಿಂದ ಮದುವೆಯ ವಿಚಾರ ಮುಂದೆ ಮುಂದೆ ಹೋಗುತ್ತಿತ್ತು. ಮುತ್ತು ಲಕ್ಷ್ಮಿಯ ತಾಯಿ ದೇವರಲ್ಲಿ ನಿಷ್ಠೆಯಿಂದ ಪ್ರಾರ್ಥಿಸಿ, ಮಗಳಿಗೆ ವಿಧುರನಾದರೂ ಪರವಾಗಿಲ್ಲ ಒಬ್ಬ ಗಂಡು ಸಿಕ್ಕರೆ ಸಾಕೆಂದು ಎಣಿಸುತ್ತಿದ್ದರು. ಏಕೆಂದರೆ, ವಿಧುರನಾದರೆ ಅತಿ ಖರ್ಚಿಲ್ಲದ ಮದುವೆಗೆ ವರನಕಡೆಯವರು ಒಪ್ಪಬಹುದಲ್ಲ, ಎಂದು.

ಅದೃಷ್ಟವಶಾತ್ ಅಂಥಾ ಪ್ರಮೇಯ ಬೀಳಲಿಲ್ಲ. ಬಾಬುಜಿಯ ತಂದೆ ರಾಮಸ್ವಾಮಿ ಕೃಷ್ಣಮೂರ್ತಿಯವರ ಸೋದರಮಾವ ಅಂದರೆ ತಾಯಿಯ ಸಹೋದರ. ಆಕೆ ಅಂದರೆ ಬಾಬುಜಿಯ ಸೋದರತ್ತೆ ತಲೈಯೂರಿನಲ್ಲಿದ್ದ ತನ್ನ ಸೋದರ ರಾಮಸ್ವಾಮಿಯ ಮನೆಗೆ ಬಂದಿದ್ದರು. ಮುತ್ತುಲಕ್ಷ್ಮಿಯನ್ನು ನೋಡಿ ಅವಳೇ ತನ್ನ ಮಗ ಕೃಷ್ಣಮೂರ್ತಿಗೆ ತಕ್ಕ ವಧು ಎಂಬ ನಿರ್ಧಾರಕ್ಕೆ ಬಂದು ಸಹೋದರ ರಾಮಸ್ವಾಮಿಯ ಹತ್ತಿರ ಈ ಪ್ರಸ್ತಾಪ ಎತ್ತಿದರು. ಆಗ ಹತ್ತಿರದ ದೇವಸ್ಥಾನದಿಂದ ಪಟಾಕಿ ಹೊಡೆದ ಛಟ ಛಟ ಸದ್ದು ಕೇಳಿಸಿತಂತೆ. ದೇವರು ಸಹ ಈ ಪ್ರಸ್ತಾಪಕ್ಕೆ ಒಪ್ಪಿದ್ದಾನೆ ಎಂಬ ಶುಭ ಸೂಚನೆ ಆಯಿತು ಎಂದು ಎಲ್ಲರೂ ಭಾವಿಸಿದರು. ದೇವರೇ ಒಪ್ಪಿಗೆ ಕೊಟ್ಟಮೇಲೆ ಜಾತಕ ನೋಡುವ ಆವಶ್ಯಕತೆಯೇ ಏಳಲಿಲ್ಲ. ಮುತ್ತು ಲಕ್ಷ್ಮಿಯದು ಒಳ್ಳೆಮನೆತನ ; ಅವಳು ಮನೆಗೆಲಸದಲ್ಲಿ ಪ್ರವೀಣೆ ; ಬಿಸಿರಕ್ತದ ಕೃಷ್ಣಮೂರ್ತಿಯನ್ನು ಆಕೆ ಹತೋಟಿಗೆ ತಂದುಕೊಂಡು ಆತ ಮತ್ತೆ ಸೆರೆಮನೆಗೆ ಹೋಗುವುದನ್ನು ತಪ್ಪಿಸಿಯಾಳು ಎಂಬ ಆಸೆಯೂ ಪ್ರಸ್ತಾಪಕ್ಕೆ ಒತ್ತಾಸೆ ಕೊಟ್ಟಿತು.

ಮದುವೆಯಾದ ಮೇಲೆ ಅಜ್ಜಿಗೆ ಪದ್ಧತಿಯಂತೆ ಹೊಸ ಹೆಸರು ಕೊಟ್ಟರು-ರುಕ್ಮಿಣಿ ಎಂದು. ಅವಳಿಗೆ ಗಂಡನನ್ನು ಕಂಡು ಏನನ್ನಿಸಿರಬಹುದು? ಕೃಷ್ಣಮೂರ್ತಿ ಅವಳಿಗಿಂತ ಹತ್ತು ವರ್ಷ ಹಿರಿಯ. ಸ್ವಲ್ಪ ಕುಳ್ಳು ಬೇರೆ. ಬಣ್ಣ ಕಪ್ಪು. ನೋಡಲು ಅಷ್ಟೇನು ಲಕ್ಷಣವಂತನಲ್ಲ. ಆದರೆ, ಅಜ್ಜಿಗೆ ಮಾತ್ರ ತನ್ನ ಗಂಡ ಎಂದರೆ ರಾಮಾಯಣ ಮಹಾಭಾರತಗಳ ದೇವಾಂಶ ಸಂಭೂತ ವೀರರೂ ಸಮ ನಲ್ಲ. ಕೃಷ್ಣಮೂರ್ತಿಗೆ ಮೊದಲು ಬಂದಿದ್ದ ಮದುವೆ ಪ್ರಸ್ತಾಪ ಮುರಿದು ಬಿದ್ದು, ಆತ ತನ್ನ ಕೈಹಿಡಿದಿದ್ದು ದೈವ ಸಂಕಲ್ಪದಿಂದಲೇ ಎಂದು ಅಜ್ಜಿ ತಿಳಿದಿದ್ದಳು.

ಗಂಡನ ನೌಕರಿ ವಿಷಯ ಅವಳು ಯೋಚನೆ ಮಾಡಿರಬಹುದು. ಆದರೆ ಆಕೆಗೆ ಸಂಸಾರದ ಹೊರಗಿನ ವಿಷಯಗಳು ಹೆಚ್ಚಾಗಿ ತಿಳಿದಿರಲಿಲ್ಲ. ಆತ ಪತ್ರಿಕೋದ್ಯಮಿ ಎಂದರೆ ಒಂದು ಅಚ್ಚುಕೂಟದಲ್ಲಿ ಲಗ್ನಪತ್ರಿಕೆಗಳನ್ನು ಅಚ್ಚು ಮಾಡುತ್ತಾರಲ್ಲ, ಆ ಕೆಲಸ ಮಾಡುತ್ತಿದ್ದಾನೆ ಎಂದೇ ತಿಳಿದುಕೊಂಡಿದ್ದಳು ! ಹೌದೇ ಎಂದು ಗಂಡನನ್ನು ಕೇಳಿಯೇ ಬಿಟ್ಟಳು! ತಮಿಳಿನಲ್ಲಿ ಪತ್ರಿಕೆ ಎಂದರೆ ಲಗ್ನಪತ್ರಿಕೆಯೂ ಆಗುತ್ತೆ, ಕಥೆ, ಲೇಖನಗಳನ್ನೊಳಗೊಂಡ ನಿಯತ ಕಾಲದ ಪತ್ರಿಕೆಯೂ ಆಗುತ್ತೆ !

ಮದುವೆಯಾದ ಹೊಸದರಲ್ಲಿ ಕೃಷ್ಣಮೂರ್ತಿ ತನ್ನ ಹೆಂಡತಿಗೆ ಓದುವುದು ಬರೆಯುವುದನ್ನು ಕಲಿಸಿದರು. ಸುಬ್ರಹ್ಮಣ್ಯ ಭಾರತಿಯವರ ದೇಶಭಕ್ತಿ ಗೀತೆಗಳನ್ನು ಹಾಡುವುದನ್ನೂ ಕಲಿಸಿದರು. ''ರಾತ್ರಿ ನಾನು ಅಂಗಳದಲ್ಲಿ ಪಾತ್ರೆಗಳನ್ನು ಗಲಬರಿಸುತ್ತಿದ್ದಾಗ, ನಿನ್ನ ತಾತ ಬಟ್ಟೆ ಒಗೆಯುವ ಕಲ್ಲು ಚಪ್ಪಡಿಯಮೇಲೆ ಕುಳಿತು ನನ್ನ ಜೊತೆ ಮಾತುಕತೆ ಆಡುತ್ತಿದ್ದರು. ದೇಶದ ಅನೇಕ ಸಮಸ್ಯೆಗಳ ವಿಷಯ ವಿವರಿಸಿ ತಿಳಿಸುತ್ತಿದ್ದರು. ಗಾಂಧೀಜಿ, ಕಸ್ತೂರ್‌ಬಾ ಅವರ ಕಾರ್ಯಕಲಾಪಗಳ ಬಗ್ಗೆ ಹೇಳುತ್ತಿದ್ದರು. ಒಮ್ಮೊಮ್ಮೆ ತಲೆ ಎತ್ತಿ ನಕ್ಷತ್ರಗಳ ಕಡೆ ದೃಷ್ಟಿಹರಿಸಿ ಹಾಡುತ್ತಾ ತಲ್ಲೀನರಾಗುತ್ತಿದ್ದರು,'' ಎಂದು ಬಾಬುಜಿ ನೆನಪು ಮಾಡಿಕೊಂಡು ಹೇಳುತ್ತಿದ್ದರು.

ತನ್ನ ಪತಿ ದೇವರ ಕಾರ್ಯಕಲಾಪಗಳು ಮತ್ತು ಅವರು ಸಮರ್ಥಿಸುತ್ತಿದ್ದ ಧ್ಯೇಯಗಳ ಬಗ್ಗೆ ಬಾಬುಜಿಗೆ ತನ್ನ ಸ್ವಂತ ಭಾವನೆಗಳಿದ್ದುವು. ಒಂದು ಸಾರಿ ಅವರು, ''ನಿನ್ನ ತಾತ

ಒಮ್ಮೆ ಒಂದು ಸ್ವದೇಶಿ ಲಾಂದ್ರ ಕೊಂಡು ತಂದರು. ಅದರ ಬೆಲೆ ವಿದೇಶಿ ಲಾಂದ್ರದ ನಾಲ್ಕು ಪಟ್ಟು! ಹತ್ತಿಸಿದರೆ ಹೋಗೆ ಬಂತೇ ವಿನಾ ಬೆಳಕು ಬರಲಿಲ್ಲ!'' ಎಂದು ನಗು ನಗುತ್ತಾ ತಮಾಷೆ ಮಾಡಿದರು.

ಸ್ವಲ್ಪಕಾಲದನಂತರ ಅಜ್ಜ ತಾತ ತಿರುಚೆಂಗೋಡುವಿನಲ್ಲಿದ್ದ ಗಾಂಧಿ ಆಶ್ರಮಕ್ಕೆ ಮನೆ ಬದಲಾಯಿಸಿದರು. ಸುಪ್ರಸಿದ್ಧ ಕಾಂಗ್ರೆಸ್ ನಾಯಕರಾಗಿದ್ದ ಚಕ್ರವರ್ತಿ ರಾಜಗೋಪಾಲ ಚಾರಿಯವರ ಮನೆ ಹತ್ತಿರವೇ ಇತ್ತು. ಆ ಹಿರಿಯ ನಾಯಕರಿಗೆ ಅಜ್ಜ ತಾತ ಇಬ್ಬರೂ ಅತ್ಯಂತ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಅಲ್ಲಿಯ ಜೀವನವನ್ನು ನೆನಸಿಕೊಂಡು ಅಜ್ಜ ಹೇಳುತ್ತಿದ್ದರು, ''ಅದೊಂದು ಮರೆಯಲಾರದ ಕಾಲ. ಆಗಲೇ ನನಗೆ ನನ್ನ ಪರಮ ಸ್ನೇಹಿತೆಯರು ಸಿಕ್ಕಿದ್ದು. ಅವರು ಇನ್ಯಾರೂ ಅಲ್ಲ; ರಾಜಾಜಿಯವರ ಮಕ್ಕಳು ನಾಮಗಿರಿ ಮತ್ತು ಲಕ್ಷ್ಮಿ''.

ತಮ್ಮ ತುಂಬು ಜೀವನದಲ್ಲಿ ಬಾಬುಜಿ ಬೆಳೆಸಿಕೊಂಡ ಅನೇಕ ಸ್ನೇಹಗಳಲ್ಲಿ ಇವೇ ಮೊದಲು. ಮನೆ ಯಾವಾಗಲೂ ನೆಂಟರಿಷ್ಟರಿಂದ ತುಂಬಿತುಳುಕುತ್ತಿತ್ತು. ಮೊದಲೇ ಸಂಪ್ರದಾಯಸ್ಥ ಕುಟುಂಬ; ಅದರ ಕಾರ್ಯಕಲಾಪಗಳನ್ನು ನೋಡಿಕೊಳ್ಳುವುದರಲ್ಲೇ ವೇಳೆ ಹೋಗುತ್ತಿತ್ತು. ಮನೆಗೆಲಸಗಳನ್ನೂ ತೂಗಿಸಿಕೊಂಡು ತನ್ನ ನೆಂಟರಿಷ್ಟರನ್ನೂ ಸತ್ಕರಿಸುತ್ತಾ, ಬಂದು ಹೋಗುತ್ತಿದ್ದ ಅನೇಕಾನೇಕ ಸ್ನೇಹಿತರನ್ನೂ ಸತ್ಕರಿಸಲು ಅಜ್ಜಿಗೆ ಸಮಯ ಹೇಗೆ ಸಿಗುತ್ತಿತ್ತೋ ನಾ ಕಾಣೆ. ಹಾಗೂ ಸಹ ಅವರು ಬಂದವರನ್ನೆಲ್ಲಾ ಲವಲವಿಕೆಯಿಂದ, ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದರು. ಈ ಸ್ವಭಾವವನ್ನು ತನ್ನ ಮಕ್ಕಳು ಮೊಮ್ಮಕ್ಕಳು ಬೆಳಸಿಕೊಳ್ಳಲಿ ಎಂದು ಅವರು ನಮ್ಮನ್ನು ಹುರಿದುಂಬಿಸುತ್ತಾ, ''ಸಂತೋಷವನ್ನು ಹಂಚಿಕೊಂಡರೇನೇ ಅದು ಪೂರ್ಣವಾಗುವುದು. ಗೆಳೆಯರು ನಿಮ್ಮ ದುಃಖಗಳನ್ನು ಕಡಿಮೆ ಮಾಡಬಲ್ಲರು. ಅವರು ನಿಮ್ಮ ಸಮಸ್ಯೆಗಳನ್ನು ಪರಿಹರಿಸಲು ಸಹಾಯವನ್ನೂ ಮಾಡಬಲ್ಲರು,'' ಎಂದು ಕಳಕಳಿಯಿಂದ ಹೇಳುತ್ತಿದ್ದರು.

ನನ್ನ ತಾತ ಬಿಸಿ ರಕ್ತದ ರಾಷ್ಟ್ರಾಭಿಮಾನಿಯಾಗಿದ್ದವರು. ಹಾಗೂ ಅವರು ಕಾದಂಬರಿಕಾರರೂ ಸಂಪಾದಕರೂ ಎಂದು ಸುಪ್ರಸಿದ್ಧರಾದರು. ಅವರು ''ಕಲ್ಕಿ''ಎಂಬಅಡ್ಡ ಹೆಸರಿನಿಂದ ಬರೆಯುತ್ತಿದ್ದರಷ್ಟೆ. ಅದೇ ಹೆಸರಿನಿಂದ ಪ್ರಾರಂಭಮಾಡಿದ ವಾರಪತ್ರಿಕೆ ತಮಿಳುನಾಡಿನಲ್ಲೆಲ್ಲಾ ಹೆಸರು ಗಳಿಸಿತು. ರಾಜಕೀಯ ಪುಢಾರಿಗಳು, ಕಲೋಪಾಸಕರು, ವಿದ್ವಾಂಸರು, ಸಾಹಿತಿಗಳು ಬಾಬುಜಿಯವರ ಮನೆಯಲ್ಲಿ ತುಂಬಿರುತ್ತಿದ್ದರು. ತಾತನ ಜೊತೆ ಇವರಾಡುತ್ತಿದ್ದ ಮಾತುಕತೆಗಳಲ್ಲಿ ಬಾಬುಜಿಯೇನೂ ತಲೆ ಹಾಕುತ್ತಿರಲಿಲ್ಲ. ಆದರೂ ಆಕೆಯ ವ್ಯಕ್ತಿತ್ವ ಅವರೆದುರು ಸುಳಿದಾಡುತ್ತಲೇ ಇರುತ್ತಿತ್ತು. ರಸಕವಳ ನೀಡುವುದರಲ್ಲಿ ಆಕೆಯ ಕೌಶಲ್ಯ ಅವರೆಲ್ಲರಿಗೂ ಪರಿಚಯವಾಗಿತ್ತು. ಒಂದು ಉದಾಹರಣೆ ಕೊಡಬಹುದು. ನೆಹ್ರುವಿನ ಸಮಾಜವಾದ, ಅದರಿಂದ ಹುಟ್ಟುವ ತೊಡಕುಗಳು, ಶಿಕ್ಷಣ ಕ್ರಮದ ವಿವಿಧ ಪದ್ಧತಿಗಳು, ಭಗವದ್ಗೀತೆಯ ಅಂತರಾರ್ಥ ಇವುಗಳನ್ನೆಲ್ಲಾ ಅವರು ಚರ್ಚಿಸಿ ಮುಗಿದ ಮೇಲೆ, ರಾಜಾಜಿಯವರು ಅಜ್ಜಿಮಾಡಿದ್ದ ಅವ್ವೇಲ್ ಅಥವಾ ಚಟ್ನಿಯನ್ನು ಹೊಗಳಿಕೊಂಡಾಡಿ, ಅದನ್ನು ನೀವು ಹೇಗೆ ಮಾಡುತ್ತೀರಿ, ಏನೇನು ಸಾಂಬಾರಗಳನ್ನು ಹಾಕುತ್ತೀರಿ ಎಂದೆಲ್ಲ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ರಾಜಾಜಿ ಸೆರೆಮನೆಯಲ್ಲಿದ್ದಾಗಲೂ ಆಕೆಗೆ ಕಾಗದ

ಬರೆದು ಇಂಥಾ ಕಷ್ಟದ ಸಮಯದಲ್ಲಿ ನೀವು ಎದೆಗೆಡಬಾರದು ಎಂದು ಧೈರ್ಯಕೊಡುತ್ತಿದ್ದರು. ಒಮ್ಮೊಮ್ಮೆ ಸಾಹಿತ್ಯ ಪ್ರೇಮಿ ಚಿದಂಬರನಾಥ ಮುದಲಿಯಾರ್(TKC) ಅವರು ಯಾವುದೋ ಒಂದು ಹಳೇ ತಮಿಳು ಪದ್ಯದಿಂದ ಕೆಲವು ಸಾಲುಗಳನ್ನುದ್ಧರಿಸಿ ಬಾಬುಜಿಯವರ ಪಾಕವಿದ್ಯೆಯ ನೈಪುಣ್ಯವನ್ನು ಹೊಗಳುತ್ತಿದ್ದರು. ಅವರು ತಮಾಷೆ ಮಾಡುತ್ತಾ ಹೀಗೆ ಹೇಳುತ್ತಿದ್ದರು; ''ಏನಂತೀರಿ! ಭಗವಾನ್ ವಿಷ್ಣುವೇನಾದರೂ ನೀವು ತಯಾರಿಸುವ ಮಜ್ಜಿಗೆಯ ರುಚಿ ಕಂಡಿದ್ದಾದರೆ, ತಾನಿರುವ ಹಾಲಿನ ಕಡಲನ್ನು ತ್ಯಜಿಸಿ, ಮಜ್ಜಿಗೆಯ ಕಡಲಿಗೆ ಬಂದು ಮಲಗಿಬಿಡುತ್ತಿದ್ದ!''

ನೀವೇನಾದರೂ ಬಾಬುಜಿ ಮಜ್ಜಿಗೆ ತಯಾರಿಸುತ್ತಿದ್ದುದನ್ನು ನೋಡಿದ್ದಿದ್ದರೆ TKC ಹೇಳಿದ್ದು ಏನೂ ಉತ್ಪ್ರೇಕ್ಷೆಯಲ್ಲ ಎನ್ನುತ್ತಿದ್ದಿರಿ. ಅಜ್ಜಿ ಮೊಸರನ್ನು ಚೆನ್ನಾಗಿ ಕಡೆದು, ಅದಕ್ಕೆ ಸರಿಯಾದಷ್ಟು ನೀರು, ಉಪ್ಪು, ಸಕ್ಕರೆಗಳನ್ನು ಬೆರೆಸಿ, ಆಗ ತಾನೆ ಜಜ್ಜಿದ ಹಸಿ ಶುಂಠಿಯನ್ನು ಅದರೊಳಗೆ ಹಾಕಿ, ತಮ್ಮ ಮನೆಯಂಗಳದಲ್ಲೇ ಬೆಳೆದಿದ್ದ ಕರಿಬೇವಿನ ಕೆಲವೆಲೆಗಳನ್ನು ಮುಳುಗಿಸಿ , ಒಂದಿಷ್ಟು ಆಗತಾನೆ ಕಿತ್ತ ಕೊತ್ತಂಬರಿ ಸೊಪ್ಪಿನ ಒಂದು ತುಂಡನ್ನು ಹಾಕಿ, ಒಂದೇ ಒಂದು ತೊಟ್ಟು ನಿಂಬೆರಸ ಇಳಿಬಿಟ್ಟು, ನಿಂಬೆ ಹಣ್ಣಿನ ಸಿಪ್ಪೆಯ ಒಂದು ತೆಳುವಾದ ಸೀಳನ್ನೂ, ಅದರ ಗಿಡದಿಂದ ಆಗತಾನೆ ಕಿತ್ತು ತಂದ ಒಂದು ಎಳೇ ಎಲೆಯನ್ನೂ ಮಜ್ಜಿಗೆಯಲ್ಲಿ ಮುಳುಗಿಸಿ, ಒಂದಷ್ಟು ಇಂಗಿನ ನೀರನ್ನು ಸಿಂಪಡಿಸಿದರೆ ಆಯಿತು ಮಜ್ಜಿಗೆಯ ಕಾರ್ಯಕಲಾಪ. ಇಷ್ಟೆಲ್ಲವನ್ನೂ ಯಾವ ಆತುರವೂ ಇಲ್ಲದೆ ಮಾಡಬೇಕು. ನೊರೆ ತೇಲುತ್ತಿರುವ ಈ ದ್ರವ ನಾಲಿಗೆಗೆ ತಾಕಿದರೆ ಸಾಕು, ಅಮೃತವನ್ನು ಸೇವಿಸಿದಂತೆಯೇ.

ತಾತ ಕೃಷ್ಣಮೂರ್ತಿ ತಮ್ಮ ೫೫ ನೇ ವಯಸ್ಸಿನಲ್ಲೇ ತೀರಿಹೋದರು . ಬಾಬುಜಿಗೆ ಇದೊಂದು ದೊಡ್ಡ ಆಘಾತ. ಆದರೆ ಇದರಿಂದ ಬೇಗಲೇ ಚೇತರಿಸಿಕೊಂಡು ಮತ್ತು ಅವರ ವ್ಯಕ್ತಿತ್ವ ಇನ್ನಷ್ಟು ಗಟ್ಟಿಯಾಯಿತು. ದೇಶದ ಸುವರ್ಣಯುಗ ಮುಗಿದು ಹೋಗಿದೆ, ಈಗ ದೇಶ ಕಟುವಾದ ವಾಸ್ತವವನ್ನು ಎದುರಿಸಬೇಕಾಗಿದೆ ; ಕೊರತೆಗಳನ್ನು ಸರಿಪಡಿಸಲು ಸುಲಭಸೂತ್ರಗಳಿಲ್ಲ ಎಂಬ ಅರಿವು ಈಗ ಅವರಲ್ಲಿ ಎದ್ದು ಕಾಣುತ್ತಿದೆ. ''ಆದರೆ ನೀನು ಏನೇ ಮಾಡು, ಅದನ್ನು ಶ್ರದ್ಧೆಯಿಂದ ಚೆನ್ನಾಗಿ ಮಾಡು,'' ಎಂದು ತಮ್ಮ ಮೊಮ್ಮಕ್ಕಳಿಗೆ ಹೇಳುತ್ತಿರುತ್ತಾರೆ. ಹಾಗೇ ಮಾಡಿದರೆ ಎಲ್ಲ ಸರಿಹೋಗುತ್ತದೆ ಎಂದು ಅವರು ತಿಳಿದುಕೊಂಡಿದ್ದಾರೆ. ಹೆಣ್ಣುಮಕ್ಕಳಿಗೆ, ''ನಿಮಗೆ ಬೇಗ ಮದುವೆಯಾಗುವ ಸೌಭಾಗ್ಯ ಬರಲಿ'' ಎಂದು ಎಲ್ಲರಂತೆ ಅವರು ಹರಸುವುದಿಲ್ಲ. ''ನೀವು ಚೆನ್ನಾಗಿ ಓದಿರಿ; ನಿಮ್ಮ ಮನಸ್ಸಿಗೆ ಹಿತವಾದ ನೌಕರಿ ಹಿಡಿಯಿರಿ; ನಿಮ್ಮ ಕೆಲಸದಲ್ಲಿ ನಿಮಗೆ ತೃಪ್ತಿ ಸಿಗಲಿ'', ಎಂದೇ ಅವರು ನಮಗೆಲ್ಲ ಹೇಳುವುದು. ಅವರ ಒಬ್ಬ ಮೊಮ್ಮಗಳು ಮದುವೆಯೇ ಬೇಡ ಎಂದು ಒಂದು ಶಾಲೆ ತೆಗೆದು ಕೆಲಸ ಮಾಡುತ್ತೇನೆ ಎಂದು ನಿರ್ಧರಿಸಿದಾಗ, ಬಾಬುಜಿ ಅವಳನ್ನು ಸಂತೋಷದಿಂದ ಹರಸಿ, ''ಇಂಥಾ ಒಳ್ಳೆ ಕೆಲಸಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟುಕೊಳ್ಳುವ ಹೆಂಗಸರು ಇಲ್ಲವೇ ಇಲ್ಲ ಎಂದು ಹೇಳಬಹುದು. ಒಳ್ಳೇ ಶಾಲೆಯನ್ನು ನಡೆಸುವುದು ದೊಡ್ಡ ದೇಶಸೇವೆಯೇ ಸರಿ,'' ಎಂದು ಹೇಳಿದರು.

ಬಾಬುಜಿ ಇನ್ನೂ ಕೆಲವು ವಿಷಯಗಳಲ್ಲಿ

ತೀವ್ರಗಾಮಿಗಳೇ. ಸಂಗೀತ ಮತ್ತು ನೃತ್ಯ ಬ್ರಾಹ್ಮಣರಿಗೆ ಬಾಹಿರವಾಗಿದ್ದ ಆ ಕಾಲದಲ್ಲಿ, ಅವರು ಕರ್ನಾಟಕ ಸಂಗೀತದಲ್ಲಿ ಅಭಿರುಚಿ ತೋರಿಸಿದರು. ತಮ್ಮ ಒಬ್ಬ ಮಗಳು ಭರತ ನಾಟ್ಯ ಕಲಿಯಲು ಮತ್ತು ಸಭೆ ಮುಂದೆ ನರ್ತಿಸಲು ಒತ್ತಾಸೆ ನೀಡಿದರು. ಆಗ ಅವರು ತಮ್ಮ ಕುಲದವರ ಅಸಮ್ಮತಿಯನ್ನು ಧೈರ್ಯ ದಿಂದ ಎದುರಿಸಬೇಕಾಯಿತು.

ದೇಹ ಜರ್ಝರಿತವಾದರೂ, ಬಾಬು ಜಿಯ ಹೃದಯ ಇನ್ನೂ ತನ್ನ ಯೌವನವನ್ನು ಕಾಪಾಡಿಕೊಂಡು ಬಂದಿದೆ. ತಮ್ಮ ಕಾರ್ಯ ಕಲಾಪಗಳಿಂದ ಅವರು ಈಗಲೂ ತಮ್ಮ ಬಳಗದವರನ್ನು ಅಚ್ಚರಿಗೊಳಿಸುತ್ತಿರುತ್ತಾರೆ. ಅವರಿಂದ ನಾವು ಕಲಿಯುವುದು ಎಷ್ಟೋ ಇದೆ ಎಂದು ನಮಗನಿಸುತ್ತದೆ. ಮುಖ್ಯವಾಗಿ ನಾವು ಜೀವನದ ಕಟ್ಟುಕಟ್ಟಳೆಗಳಿಂದ ಬಂಧಿತ ರಾದಾಗ್ಯೂ, ಅವೇ ನಮ್ಮ ಸುತ್ತ ಬೇಲಿ ಯಾಗಲು ಬಿಡಬಾರದು. ಸಹಜ ಪ್ರವೃತ್ತಿಗೆ, ಸೃಜನಕಾರ್ಯಗಳಿಗೆ, ಹೃದಯವನ್ನರಳಿಸುವ ಉಲ್ಲಾಸಕ್ಕೆ ಈ ಜಗತ್ತಿನಲ್ಲಿ ಸ್ಥಳ, ಕಾಲ, ಅವಕಾಶ ಇದ್ದೇ ಇವೆ, ಧೈರ್ಯ, ಸಾಹಸ ಪ್ರವೃತ್ತಿ ಇದ್ದರೆ ಮಾತ್ರ.

೧೯೯೮ರಲ್ಲೇ ಬಾಬುಜಿಗೆ ಕನಕಾಭಿಷೇಕ ಆಚರಿಸಬೇಕಾಗಿತ್ತು. ಆಗತಾನೆ ಅವರಿಗೆ ಒಬ್ಬ ಮರಿಮಗ ಹುಟ್ಟಿದ್ದ. ಆದರೆ ಈ ಪರಂಪರೆಯ ಆಚಾರ ಬೇಡವೆಂದು ನಾವೆಲ್ಲ ತೀರ್ಮಾನಿಸಿ, ಅದರ ಬದಲು ಆ ಸಮಯಕ್ಕೆ ಸರಿಯಾಗಿ ಬಾಬುಜಿ ಚಿತ್ರಿಸಿದ ರಂಗೋಲಿ ವಿನ್ಯಾಸಗಳ ನ್ನೊಳಗೊಂಡ ಸುಂದರ ಪುಸ್ತಕವೊಂದನ್ನು ಪ್ರಕಟಿಸಿದೆವು. ಬಾಬುಜಿಗೆ ಇದೇ ತುಂಬ ಸಂತೋಷವನ್ನು ತಂದ ಬಳುವಳಿಯಾಯಿತು.

ತ್ಯಾಗದದಿಂ ಸಾರುವುದು ಸಂಸಾರ ಸುಖರಸವು
ತ್ಯಾಗವಾಧಾರ ಸಮತೆ ಸಮಾಜ ಭದ್ರತೆಗೆ
ತ್ಯಾಗದಿಂ ಸಮಸಿನಿಸುಗು ರಾಷ್ಟ್ರಮೇಣಾತ್ಮ ಬಲ
ತ್ಯಾಗವೇ ಸರ್ವಕ್ಕೆ ಮೊದಲು ಮಗಳೆ



ಅಜ್ಞಾನ, ಅಶಿಸ್ತು, ಮನುಷ್ಯನ ತೊಂದರೆಗಳಿಗೆ ಮುಖ್ಯ ಕಾರಣ.
-ಕೌಟಿಲ್ಯ

ಸಂಶೋಧನೆಯ ಮೇರು ಪ್ರೊ. ಎಲ್. ಬಸವರಾಜು

ಡಾ. ಪದ್ಮಾಶೇಖರ್
ಪ್ರೀತಿ, ೫೨೨, ೩ನೇ ತಿರುವು, ೨೧೯
ಮುಖ್ಯರಸ್ತೆ, ವಿಜಯನಗರ ೨ನೇ ಹಂತ,
ಹಿನಕಲ್ ಅಂಚೆ, ಮೈಸೂರು

ಬಿಳಿಯ ನಿಡಿದಾದ ಜುಬ್ಬ, ಅದೇ ಬಣ್ಣದ ಕಚ್ಚೆ ಪಂಚೆ. ಎಡಗೈಯಲ್ಲಿ ಪ್ರೀತಿ ಯಿಂದ ತಬ್ಬಿ ಹಿಡಿದ ಗ್ರಂಥಗಳು. ಬಲಗೈಯಲ್ಲಿ ಕೊಡೆ. ಅತಿ ಎತ್ತರವೂ ಅಲ್ಲದ, ಗಿಡ್ಡವೂ ಅಲ್ಲದ ಮಟ್ಟಸದ ದೇಹಾಕೃತಿ. ಬಣ್ಣ ಅಚ್ಚದ್ರಾವಿಡ. ಮುಖದಲ್ಲಿ ಎದ್ದು ಕಾಣುವ ಭರವಸೆಯ ನಗೆ. ನಗೆಯ ಸುತ್ತ ಬಿಚ್ಚಿಕೊಳ್ಳುವ ದಂತಪಂಕ್ತಿ. ಒಂದೇ ಸಲಕ್ಕೆ ಅಂತರ್ಯವನ್ನು ಅಳೆಯು ವಂಥ ಚೂಪು ಕಣ್ಣೋಟ. ಗಾಂಭೀರ್ಯದ ನಡೆ, ವಿದ್ವತ್ತಿನ ತೂಕ ಮಾತುಗಳಲ್ಲಿ ಕತ್ತಿಯ ಹರಿತ. ಆದರೂ ಏನೋ ಹಿತ-ಇದು ೧೯೭೩ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಗೆ ಎಂ.ಎ. ಓದಲು ಬಂದ ನನಗೆ ಇಡುಗಂಟಾಗಿ ಸಿಕ್ಕ ಪ್ರೊ. ಎಲ್. ಬಸವರಾಜು ಅವರ ಚಿತ್ರ. ಇಂದಿಗೂ ಆ ಚಿತ್ರದಲ್ಲಿ ಬಹುತೇಕ ಬದಲಾವಣೆಯಾಗಿಲ್ಲ. ಆದರೆ ಅದರ ಭಾವಕೋಶಗಳು ಮಾತ್ರ ಹಲವು ನಿಟ್ಟಿನಲ್ಲಿ ವಿಶಾಲವಾದ ರೆಂಬೆಕೊಂಬೆಗಳನ್ನು ಹಾಸಿವೆ.

ಪ್ರೊ. ಬಸವರಾಜು ಅವರ ವಿದ್ವತ್ತನ್ನು ಒಂದು ಕಡೆ ಇಟ್ಟು ಮತ್ತೊಂದು ಕಡೆ ಅವರ ವ್ಯಕ್ತಿತ್ವವನ್ನು ಇಟ್ಟು ತೂಗು ಹಾಕಿದರೆ ಯಾವ ಏರುಪೇರು ಇಲ್ಲದ ಸಮತೂಕ. ಇದು ನಾನು ವಿದ್ಯಾರ್ಥಿಯಾದಾಗಿನಿಂದಲೂ ಕಂಡು ಕೊಂಡ ಸತ್ಯ. ವಿದ್ಯಾರ್ಥಿಗಳಿಗೆಲ್ಲ ಅವರು ಅಚ್ಚುಮೆಚ್ಚು ಅಪಾರ ಗೌರವ. ಪ್ರೀತಿಯಿಂದ ನಾವು ಕರೆಯುತ್ತಿದ್ದದ್ದು ಎಲ್‌ಬಿ ಎಂದೇ. ನಾನು ಕಂಡಂತೆ ಅವತ್ತಿನ ಗಂಗೋತ್ರಿ ವಾತಾವರಣವೇ ವಿದ್ವತ್ತಿನ ಪರಿಸರದ್ದು. ಅಧ್ಯಯನ ಸಂಸ್ಥೆಯ ವಿದ್ವಾಂಸರಲ್ಲಂತೂ ಅತ್ಯಂತ ಬಿಗು ನಡವಳಿಕೆ. ವಿದ್ಯಾರ್ಥಿಗಳನ್ನು ಸಾಕಷ್ಟು ಗಾವುದ ದೂರ ಇಡಲು ಯತ್ನಿಸುತ್ತಿದ್ದವರೇ ಹೆಚ್ಚು. ಹಳ್ಳಿಯಿಂದ ಬಂದಂಥ ನನ್ನಂಥವರಿಗೆ ಅವರೆಲ್ಲ ಆಕಾಶದಲ್ಲಿ ನಡೆದಾಡುವ ಮಂದಿ ಎಂಬ ಭಾವನೆ. ಭಯ ಮಿಶ್ರಿತ ಗೌರವ. ಅಂಥವರ ನಡುವೆ ನಮ್ಮ ಅನುಮಾನಗಳನ್ನು ಹುಸಿ ಮಾಡಿ, ಹತ್ತಿರ ಕರೆದು, ಪ್ರೀತಿಯಿಂದ ಮಾತಾಡಿ ಓದು, ಬದುಕಿನಲ್ಲಿ ಭರವಸೆ ತುಂಬಿದವರು ಎಲ್‌ಬಿ. ಅವರ ಪಾಲಿಗೆ ವಿದ್ಯಾರ್ಥಿಗಳು ಅಧ್ಯಯನ ಅಧ್ಯಾಪನದ ಒಂದು ಅಂಗ. ವಿದ್ಯಾರ್ಥಿಗಳ ಎಳಸು ವಿಚಾರವನ್ನೇ ಹೊಸವಿಚಾರವೆಂಬಂತೆ ಸ್ವೀಕರಿಸಿ ಹಾಸ್ಯೋಕ್ತಿಗಳಿಂದ, ಹಾರ್ದಿಕ ನಗುವಿನೊಂದಿಗೆ ಪಾಠ ಮಾಡುತ್ತಿದ್ದ ಕ್ರಮ ಅದ್ಭುತ. ಅಡಿಗಡಿಗೆ ನೀಡುತ್ತಿದ್ದ ಉದಾಹರಣೆಗಳು ಟೀಕೆ ಟಿಪ್ಪಣಿ ವ್ಯಾಖ್ಯಾನಗಳು, ವಿಮರ್ಶನಾ ಪ್ರಜ್ಞೆ ಅವರ ವಿದ್ವತ್ತಿನ ಹರಹನ್ನು ನಮಗೆ ಪರಿಚಯಿಸುತ್ತಿದ್ದವು. ವರ್ಗವಲಯಾತೀತವಾಗಿ ವಿದ್ಯಾರ್ಥಿಗಳನ್ನು ನಡೆಸಿಕೊಳ್ಳುತ್ತಿದ್ದ ಅವರ ವ್ಯಕ್ತಿತ್ವವೇ ಸಹಜವಾಗಿ ಅಭಿಮಾನಪಡುವಂಥದ್ದಾಗಿತ್ತು.

ಎಲ್.ಬಿಯವರು ನಾನು ಗುರುತಿಸಿದಂತೆ ಸ್ವಾಭಿಮಾನಿ ; ಮೌಲ್ಯಗಳನ್ನು ನಂಬಿ ನಡೆವ ಛಲವಾದಿ. ಮೂಲತಃ ಕೋಲಾರದವರು. ಹುಟ್ಟಿದ್ದು ೧೯೧೯ರಲ್ಲಿ, ವಿದ್ಯಾಭ್ಯಾಸ ಆರಂಭಿಸಿದ್ದು ತುಮಕೂರಿನಲ್ಲಿ. ರೆಡ್ಡಿ ಒಕ್ಕಲಿಗ ಹಾವ ಜನಾಂಗದವರೇ ತುಂಬಿದ್ದ, ತೆಲುಗು ಭಾಷಾ ಪರಿಸರದಿಂದ ಬಂದ ಇವರು ಸಾಮರಸ್ಯದ ಬದುಕಿನ ಸತ್ತ್ವವನ್ನು ಅನುಭವಿಸಿದ್ದರು. ಕಂಡವರಾಗಿದ್ದರು; ಹಲವು ಸಂಸ್ಕೃತಿಯ ತಿಳಿವಳಿಕೆ ಪಡೆದವರಾಗಿದ್ದರು. ಸಿದ್ಧಗಂಗೆ ಮಠದಲ್ಲಿದ್ದುಕೊಂಡು ಕ್ಯಾತಸಂದ್ರದ ಮಾಧ್ಯಮಿಕ ಶಾಲೆಯಲ್ಲಿ ಓದು, ೧೯೩೭ರಲ್ಲಿ

ಎಸ್ ಎಸ್ ಎಲ್ ಸಿ ಮುಗಿಸಿದರು. ಮಠದಲ್ಲಿದ್ದಾಗಲೇ ವೇದಪಾಠಗಳ ಕಲಿಕೆ. ವಿದ್ವತ್ತಿಗೆ ಸೂಕ್ತ ವೇದಿಕೆಯ ನಿರ್ಮಿತಿ. ಮೊತ್ತ ಮೊದಲಿಗೆ ಎಲ್ ಬಿ ಅವರ ಮೇಲೆ ಪ್ರಭಾವ ಬೀರಿದ ಕೃತಿ ಎಂದರೆ ಕುವೆಂಪು ರಚಿತ ವಿವೇಕಾನಂದ ಜೀವನ ಚರಿತ್ರೆ. ಎಲ್ ಬಿ ಓದಿ ರೋಮಾಂಚಿತರಾದುದನ್ನು ನೆನಪಿಸಿಕೊಳ್ಳುತ್ತಾರೆ. ಆದರೆ ಕನ್ನಡಪರ ದೀಕ್ಷೆ ತಳೆಯಲು ಕಾರಣರಾದವರು ಮಾತ್ರ ಬಿ.ಎಂ.ಶ್ರೀ. ತರುವಾಯ ಜಿ.ಪಿ.ರಾಜರತ್ನಂ ಮತ್ತು ಅನಕೃ. ೧೯೩೭ ರಿಂದ ೩೯ ರವರೆಗೆ ಬೆಂಗಳೂರಿನಲ್ಲಿ ಇಂಟರ್ ಮಿಡಿಯಟ್ ಓದುತ್ತಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿಎಂಶ್ರೀ ಉಪನ್ಯಾಸಗಳಿಂದ ಕನ್ನಡ ಪ್ರೀತಿ ಯನ್ನು ತುಂಬಿಕೊಂಡ ಇವರು ಇಂದಿಗೂ ಆ ಕಾಳಜಿಯನ್ನು ಜೀವಂತವಾಗಿರಿಸಿಕೊಂಡಿದ್ದಾರೆ. ಆ ಕನ್ನಡಪ್ರೀತಿ ಅವರನ್ನು ಮೈಸೂರಿಗೆ ಕರೆತಂದು ಬಿ.ಎ. ಆನರ್ಸ್‌ಗೆ ಸೇರುವಂತೆ ಪ್ರೇರೇಪಿಸಿತು. ಆಗ ನೆರವಿಗೆ ಬಂದವರು ಬಂಧು ನಿಟ್ರೆ ಬಸಪ್ಪನವರು. ಸ್ವಾತಂತ್ರ್ಯ ಚಳುವಳಿಯ ಸಮಯ.'ಬ್ರಿಟಿಷರೆ ಭಾರತದಿಂದ ತೊಲಗಿ' ಚಲುವಳಿ ಪಬಲವಾಗಿದ್ದ ಕಾಲ. ಇವರಿಗೆ ಚಳುವಳಿಕಾರರಾಗಿದ್ದ ಡಿ.ಎ. ಸಿದ್ಧಯ್ಯ ಮರುಳುಸಿದ್ಧಯ್ಯನಂಥವರ ಒಡನಾಟದ ಲಭ್ಯ. ಜೈಲುವಾಸ ಅನುಭವಿಸದಿದ್ದರೂ, ಸ್ವತಃ ಚಳುವಳಿಯಲ್ಲಿ ಭಾಗವಹಿಸಿದರು. ಮುಂದೆ ಉದ್ಯೋಗ ಅರಸುವಿಕೆ. ೧೯೪೩ರಲ್ಲಿ ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿ ಗುಮಾಸ್ತ ಹುದ್ದೆ. ಹೇಳಿಕೇಳಿ ಲೆಕ್ಕಪತ್ರ ತಪಾಸಣೆಯ ವಿಭಾಗ. ಓದಿಗೂ ವೃತ್ತಿಗೂ ಸಂಬಂಧವಿಲ್ಲದ್ದು. ಅಲ್ಲಿ ಅಡಿಗರೂ ಸಹೋದ್ಯೋಗಿ! ಬದುಕೇ ಹೊಂದಾಣಿಕೆ ಯದ್ದಲ್ಲವೆ? ಕೊನೆಗೂ ಅವರು ಬಯಸಿದ ಉದ್ಯೋಗ ದಕ್ಕಿದ್ದು ೧೯೪೬ರಲ್ಲಿ ಉಪನ್ಯಾಸಕರಾಗಿ, ದಾವಣಗೆರೆಯ ಸರ್ಕಾರಿ ಕಾಲೇಜಿನಲ್ಲಿ. ಆ ಕಾಲಕ್ಕೆ ಧರ್ಮರತ್ನಾಕರ ಮುದ್ದೂರಾಯಪ್ಪನವರು ಎರಡೂವರೆ ಲಕ್ಷ ಕೊಡುಗೆಯಿತ್ತು ಸ್ಥಾಪಿಸಿದ ಕಾಲೇಜದು. ಇದೇ ಕಾಲೇಜಿನಲ್ಲಿ ತೀನಂಶ್ರೀ, ನಾಕಸ್ತೂರಿಯಂಥ ವಿದ್ವಾಂಸರು ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದನ್ನಿಲ್ಲಿ ಸ್ಮರಿಸಬೇಕು. ಮುಂದೆ ಕೆಲಕಾಲ ಮಂಡ್ಯದಲ್ಲಿ ಉಪನ್ಯಾಸಕರಾಗಿದ್ದು. ಎಂ.ಎ. ಓದಲೆಂದು ಮೈಸೂರು ತಲುಪಿದರು.

ಎಂ.ಎ. ವಿದ್ಯಾಭ್ಯಾಸ ಎಲ್ ಬಿ ಅವರ ಜೀವನದ ಬಹು ದೊಡ್ಡ ತಿರುವು. ಅವರ ಓದಿನ ಸಂಕಲ್ಪಕ್ಕೆ ವೇದಿಕೆಯನ್ನು ಸಜ್ಜುಗೊಳಿಸಿದ ಪರ್ವಕಾಲ. ಕುವೆಂಪು, ತೀನಂಶ್ರೀ, ಡಿಎಲ್ಎನ್, ಎಆರ್‌ಕೃರಂಥ ಆಚಾರ್ಯರ ಗರಡಿಯಲ್ಲಿ ಪಳಗಿದರು. ವ್ಯಾಕರಣ ಛಂದಸ್ಸು ಸಂಶೋಧನಾ ಕ್ಷೇತ್ರದ ಬಗೆಗೆ ಅಪಾರ ತಿಳಿವಳಿಕೆ ಪಡೆದರು. ಜೊತೆಗೆ ಕುವೆಂಪು ಅವರ ಬೆಂಬಲ ಪ್ರೇರಣೆ. ಪರಿಣಾಮ ಕನ್ನಡನಾಡಿಗೆ ದಕ್ಕಿದ್ದು ಅಪರೂಪದ ವಿದ್ವಾಂಸ, ಶ್ರೇಷ್ಠ ಸಂಶೋಧಕ, ಮಾದರಿ ಗ್ರಂಥ ಸಂಪಾದನಕಾರ, ಉತ್ತಮ ಅನುವಾದಕ, ಸೃಜನಶೀಲ ಕವಿ, ಕಾದಂಬರಿಕಾರ ಎಲ್. ಬಸವರಾಜು ಅವರು.

ಎಲ್ ಬಿ ಅವರು ವೀರಶೈವ ಜನಾಂಗದವರು. ಸಹಜವಾಗಿ ಆ ಧರ್ಮದ ಸಾಂಸ್ಕೃತಿಕ ಸಂಪತ್ತಿನ ಬಗ್ಗೆ ಅಪಾರ ಪ್ರೀತಿ ; ಹೆಮ್ಮೆ . ವಚನಸಾಹಿತ್ಯ ಮತ್ತದರ ಬದುಕ ಆಶಯಗಳ ಬಗ್ಗೆ ಆದರ; ಅಭಿಮಾನ. ಅದರ ಬಗೆಗೇ ಕೆಲಸ ಮಾಡಲೇಬೇಕೆಂಬ ಉತ್ಕಟ ಇಚ್ಛೆಯಿದ್ದರೂ, ಕಾಲಘಟ್ಟದಲ್ಲಿ ಹಾದುಹೋದ ಎಲ್ಲ ಸಂಸ್ಕೃತ ಸಾಹಿತ್ಯವನ್ನು ಅವಲೋಕಿಸುವ ಹಂಬಲದ ತೀವ್ರತೆ. ಹೀಗಾಗಿ ಅವರನ್ನು ಮೊದಲು ಆಕರ್ಷಿಸಿದ್ದು ಭಾಸನ ನಾಟಕಗಳು. ಬಾಲ್ಯದಿಂದ ಸಂಸ್ಕೃತ ಭಾಷೆಯಲ್ಲಿ ಅವರು ಸಾಧಿಸಿದ್ದ ಹಿಡಿತ ಭಾಸನ ನಾಟಕಗಳನ್ನು ಕನ್ನಡೀಕರಿಸಲು

ಅನುವುಮಾಡಿಕೊಟ್ಟಿತು. 'ಭಾರತರೂಪಕ', 'ರಾಮಾಯಣ ನಾಟಕ ತ್ರಿವೇಣಿ' ಭಾಸನ ನಾಟಕಗಳ ಭಾಷಾಂತರ ಕೃತಿಗಳಾದರೆ, ಸಂಸ್ಕೃತ ನಾಟಕಗಳ ಆಯ್ದ ಅಂಕಗಳ ಅನುವಾದಗಳನ್ನೊಳಗೊಂಡದ್ದು 'ನಾಟಕಾಮೃತ ಬಿಂದು' . ಆ ಕಾಲಕ್ಕೆ ಭಾಷಾಂತರ ಪ್ರಕಾರ ಅಪರೂಪವಾಗಿತ್ತು. ಭಾಷಾಂತರ ಕಲೆ ಸಹಜವಾಗಿ ಸಿದ್ಧಿಸುವಂಥದಲ್ಲ ಭಾಷಾ ಪಾಂಡಿತ್ಯಕ್ಕೇ ಸವಾಲೊಡ್ಡುವಂಥದು. ಇದರಲ್ಲಿ ಯಶಸ್ಸು ಕಂಡವರು ಪ್ರೊ.ಎಲ್. ಬಸವರಾಜು ಅವರು.

ಗ್ರಂಥ ಸಂಪಾದನೆ ಎಲ್‌ಬಿ ಅವರ ಪ್ರಿಯವಾದ ಕ್ಷೇತ್ರ. ''ಗ್ರಂಥಸಂಪಾದನೆ ಎಂದರೆ ಮೂಲಕೃತಿಯ ಪುನಾಸೃಷ್ಟಿಯಷ್ಟೇ ಅಲ್ಲ; ಮೂಲಪಾಠದಲ್ಲಾಗಿರುವ ಬದಲಾವಣೆಗಳನ್ನು ನಮ್ಮ ಜನ ಆ ಕೃತಿಯನ್ನು ಓದಿಕೊಂಡ ಕ್ರಮದ ಸುಳಿವುಗಳೆಂದು ನೋಡಬೇಕು '' ಎನ್ನುವ ಪ್ರೊಫೆಸರ್ ಆ ಕ್ಷೇತ್ರದಲ್ಲಿ ದಾಖಲೆಗಳನ್ನೇ ಸೃಷ್ಟಿಸಿದರು. ಸಂಖ್ಯೆಯ ದೃಷ್ಟಿಯಿಂದಲ್ಲ; ಸಂಪಾದನೆಯ ಗುಣಮಟ್ಟದಿಂದ. ಅವರು ವಿದ್ಯಾರ್ಥಿಯಾಗಿದ್ದಾಗಲೇ 'ತೊರವೆ ರಾಮಾಯಣ ಸಂಗ್ರಹ'ವನ್ನು ಪ್ರಕಟಿಸಿದರು. ಗುರು ಕುವೆಂಪು ಅವರು ಅದನ್ನು ಮೆಚ್ಚಿ ಮುನ್ನುಡಿ ಬರೆದದು ಮಾತ್ರವಲ್ಲ, ವಿದ್ಯಾರ್ಥಿಗಳೆಲ್ಲ ಇದನ್ನು ಓದುವಂತಾಗಬೇಕೆಂದು ಹಾರೈಸಿ, ತಾವೇ ಆಸಕ್ತಿವಹಿಸಿ ಪಠ್ಯಪುಸ್ತಕವಾಗಿಸಿದರಂತೆ. ಇದನ್ನು ಅತ್ಯಂತ ಪ್ರೀತಿಯಿಂದ ನೆನೆಯುವ ಎಲ್‌ಬಿ ಅವರು ಅಂದಿನ ಗುರು-ಶಿಷ್ಯ ಸಂಬಂಧದ ಗಾಢತೆಯನ್ನು ಸ್ಮರಿಸಿ ಕೊಂಡು ಗದ್ಗದಿತರಾಗುತ್ತಾರೆ. ಅವರ ಸಂಪಾದಿತ ಕೃತಿಗಳಲ್ಲಿ ಹೆಸರಿಸಲೇ ಬೇಕಾದುದು 'ಪಂಪನ ಆದಿಪುರಾಣ'. ಹಲವಾರು ಹಸ್ತಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ಅವುಗಳನ್ನು ಅಚ್ಚುಕಟ್ಟಾಗಿ ಪರಿಷ್ಕರಿಸಿ, ಜಿನಸೇನಾಚಾರ್ಯರ 'ಮಹಾಪುರಾಣ'ದೊಡನೆ ತೌಲನೀಕರಿಸಿ ಅಧ್ಯಯನ ಮಾಡಿರುವ ರೀತಿಯಂತೂ ಅದ್ಭುತ. ಇದುತನಕ ಇಂಥ ವಂಕ್ಚುಯೇಟ್ ಪಠ್ಯವನ್ನು ಯಾರೂ ಮಾಡಿಲ್ಲ ಎಂಬುದೇ ಈ ಕೃತಿಯ ಹೆಗ್ಗಳಿಕೆ. ಈ ಸಾಲಿಗೆ ಹೊಸಸೇರ್ಪಡೆ 'ಪಂಪಭಾರತ'.

ಕಾವ್ಯಕೃತಿಗಳ ಸಂಪಾದನೆಯಲ್ಲಿ ರಸಾನುಭವವಾದರೂ ಸಿಗುತ್ತದೆ. ಆದರೆ ಶಾಸ್ತ್ರೀಯ ಕೃತಿಗಳಲ್ಲಿ! ಇದಂಥು ಬಹುಕಠಿಣ. ಅಪಾರ ವಿದ್ವತ್ತು, ಹಲವು ಭಾಷಾ ಪ್ರೌಢಿಮೆ, ಬುದ್ಧಿ ಕೌಶಲ ಕಠಿಣಶ್ರಮ, ನಿರಂತರ ತಾಳ್ಮೆಯನ್ನು ನಿರೀಕ್ಷಿಸುವಂಥದು. ಇದರಲ್ಲೂ ಎಲ್‌ಬಿ ಸಿದ್ಧಹಸ್ತರು. ತೀನಂಶ್ರೀ ಅವರು ಒಮ್ಮೆ ಉಪನ್ಯಾಸ ಮಾಡುತ್ತ ''ನಾಗವರ್ಮನ ಛಂದೋಂಬುಧಿ'ಯನ್ನು ಯಾರು ಸರಿಯಾಗಿ ಎಡಿಟ್ ಮಾಡುತ್ತಾರೋ ಅವರು ಮಾತ್ರ ಶಾಸ್ತ್ರೀಯ ಸಾಹಿತ್ಯ ಒಡ್ಡುವ ಸವಾಲುಗಳನ್ನು ಎದುರಿಸಬಲ್ಲ ಶಕ್ತರು''ಎಂದರಂತೆ. ಈ ಮಾತನ್ನು ಗಂಭೀರವಾಗಿ ಪರಿಗಣಿಸಿ ಎಲ್‌ಬಿ ಅವರು ಶಾಸ್ತ್ರಗ್ರಂಥಗಳ ಸಂಪಾದನೆಗೆ ದೀಕ್ಷೆತೊಟ್ಟರು. ಪರಿಣಾಮ ಕೇಶಿರಾಜನ 'ಶಬ್ದಮಣಿದರ್ಪಣ' ಪೂರ್ಣಪ್ರಮಾಣದಲ್ಲಿ ವಿದ್ವಾಂಸರಿಗೆ ಒದಗಿತು. ಅಲ್ಲೀವರೆಗೆ ಕರ್ನಾಟಕದಲ್ಲಿ ಪ್ರಕಟಗೊಂಡು ಪ್ರಚಲಿತ ವಿದ್ದ 'ಶಬ್ದಮಣಿದರ್ಪಣ'ದ ಆವೃತ್ತಿಗಳು ಆಯಾಯಕಾಲದ ವಿದ್ಯಾರ್ಥಿಗಳ ಉಪಯೋಗವನ್ನಷ್ಟೇ ಗಮನದಲ್ಲಿಟ್ಟು ಕೊಂಡು ಹೊರಬಂದಿದ್ದವು. ಮೊತ್ತಮೊದಲಿಗೆ ಎಲ್‌ಬಿ ಅವರು ಮೂಲ, ವಿಸ್ತೃತ, ಅಧಿಕೃತವಾದ 'ಶಬ್ದಮಣಿದರ್ಪಣ'ದ ಪಾಠನಿಷ್ಕರ್ಷೆ ಮಾಡಿ ವ್ಯಾಖ್ಯಾನ ಸಮೇತ ಪ್ರಕಟಿಸಿದರು. 'ಛಂದೋಂಬುಧಿ'ಯನ್ನು ಹಾಗೇ ಸಂಪಾದಿಸಿದರು. ಹಳೆಯ ಛಂದೋಗ್ರಂಥಗಳನ್ನು ಕ್ರೂಢೀಕರಿಸಿ ವ್ಯಾಖ್ಯಾನವನ್ನು

ಒಳಗೊಂಡಂತೆ ಹಲವಾರು ಉಪಯುಕ್ತ ಅನುಬಂಧಗಳು ಇದರಲ್ಲಿವೆ, ವೃತ್ತಗಳ ಛಂದಸ್ಸನ್ನು ಗುರುತಿಸುವ ಸುಲಭ ಮಾಧ್ಯಮ ಕ್ರಮವನ್ನೂ ಇಲ್ಲಿ ನಿಯೋಜಿಸಲಾಗಿದೆ.

ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರೊ.ಎಲ್‌ಬಿ ಅವರ ಕೊಡುಗೆ ಗಣನೀಯವಾದದು; ಮಹತ್ವಪೂರ್ಣವಾದುದು; ಅನೇಕ ಪ್ರಥಮಗಳನ್ನೊಳಗೊಂಡದ್ದು. 'ಅಲ್ಲಮನ ವಚನಚಂದ್ರಿಕೆ' 'ಶಿವದಾಸ ಗೀತಾಂಜಲಿ' 'ದೇವರದಾಸಿಮಯ್ಯನ ವಚನಗಳು', ಶಿವಗಣಪ್ರಾಸದಿ ಮಹದೇವಯ್ಯ ರಚಿತ ಪ್ರಭುದೇವರ ಶೂನ್ಯ ಸಂಪಾದನೆ,, 'ಬಸವಣ್ಣನವರ ಷಟ್ಥಲದ ವಚನಗಳು'. 'ನಿಜಗುಣ ಶಿವಯೋಗಿಯ ತತ್ವದರ್ಶನ'- ಇವೆಲ್ಲ ಅತ್ಯಂತ ಪ್ರಮುಖವಾದವು. ಇವುಗಳಲ್ಲಿ'ಅಲ್ಲಮ ವಚನ ಚಂದ್ರಿಕೆ' ಎಲ್‌ಬಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಡಿಲಿಟ್ ಪದವಿಯನ್ನು ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಗಳಿಸಿಕೊಟ್ಟ ಕೃತಿ. ಪ್ರಕಟಿತ ಕೃತಿಯೊಂದಕ್ಕೆ ಡಿಲಿಟ್ ಪದವಿ ಮೊದಲಿಗೆ ದೊರಕಿದ್ದು ಈ 'ಅಲ್ಲಮನ ವಚನ ಚಂದ್ರಕೆ'ಗೆ. ಈ ಕೃತಿಯನ್ನು ನೋಡಿ ಬೇಂದ್ರೆ, ತೀನಂಶ್ರೀ ಕುವೆಂಪು ಅವರು ಹೆಮ್ಮೆಯಿಂದ ''ನಮ್ಮ ಬಸವರಾಜು ವಿಕ್ರಮವನ್ನೇ ಸ್ಥಾಪಿಸಿದ್ದಾನೆ'' ಎಂದು ಪ್ರಶಂಸಿಸಿದ್ದರಂತೆ.

'ಶಿವದಾಸ ಗೀತಾಂಜಲಿ' ಒಂದರ್ಥದಲ್ಲಿ ಐತಿಹಾಸಿಕ ಮಹತ್ತ್ವವುಳ್ಳದ್ದು. ವಚನ ಚಂದ್ರಕೆ ಬಂದ ಒಂದೇ ವರ್ಷದಲ್ಲಿ ಬೆಳಕು ಕಂಡ ಕೃತಿಯಿದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಹರಿದಾಸರಿಗಿಂತ ನಾಲ್ಕು ಶತಮಾನ ಮೊದಲೇ ವಚನಕಾರರು ಸ್ವರ ವಚನಗಳನ್ನು ರಚಿಸಿದ್ದರು ಎಂಬುದು; ಇಂಥ ಸ್ವರವಚನ ರಚನೆಗಳು ಹಿಂದೆ ೭-೮ನೇ ಶತಮಾನದಲ್ಲಿದ್ದ ತಮಿಳುನಾಡಿನಲ್ಲಿದ್ದ ನಾಯನಾರ್ ಪಂಥದವರು ಬರೆದ ಹಾಡಿನ ಪರಂಪರೆಯ ಪ್ರಭಾವವನ್ನು ಎಲ್‌ಬಿ ಅವರು ಸಂಶೋಧಿಸಿದ್ದು. ಆ ಕಾರಣದಿಂದಲೇ ವಚನಕಾರರ ಹಾಡುಗಳಿಗೆ ಹರಿದಾಸಕ್ಕೆ ಪರ್ಯಾಯ ಎಂಬಂತೆ 'ಶಿವದಾಸ' ಎಂದು ಕರೆದರು. ಆ ಸ್ವರವಚನಗಳು ಸಂಕಲನ' ಶಿವದಾಸ ಗೀತಾಂಜಲಿ' ಎಂಬ ಅಂಕಿತ ಪಡೆಯಿತು.

ಇಲ್ಲಿಯೇ ದಾಖಲಿಸಬೇಕಾದ ಕೃತಿ 'ಪ್ರಭುದೇವರ ಶೂನ್ಯಸಂಪಾದನೆ' ೧೬ನೇ ಶತಮಾನದ ಗೂಳೂರು ಸಿದ್ಧವೀರನ ನಾಲ್ಕನೆಯ ಶೂನ್ಯಸಂಪಾದನೆಯೇ ಸಂವಾದ ರೂಪದ ಮೊದಲವಚನ ಸಂಕಲನವೆಂದು ಭಾವಿಸಿದ್ದ ಹೊತ್ತಿನಲ್ಲಿ ಶಿವಗಣಪ್ರಸಾದಿಯ 'ಶೂನ್ಯಸಂಪಾದನೆ' ಯನ್ನು ಪ್ರಕಟಿಸುವ ಮೂಲಕ ಎಲ್‌ಬಿ ಅವರು ವಿಸ್ಮಯವನ್ನುಂಟು ಮಾಡಿದರು. ಇದೊಂದು ವಿಸ್ತೃತ ತೌಲನಿಕ ಅಧ್ಯಯನ ಕೃತಿ. ಅನುಬಂಧದ ಜೊತೆಯಲ್ಲಿ ಪಾಠ ಪರಿಸ್ಕಾರವನ್ನು ಮೊದಲಿಗೆ ಕೊಟ್ಟರು. ಸಾಂಸ್ಕೃತಿಕವಾಗಿ ಬಸವಚಳುವಳಿಯ ತಿರುಳನ್ನು ವಿವೇಚಿಸಲಾದ ಬಸವಣ್ಣನ ಷಟ್ಸ್ಥಲದ ವಚನಗಳನ್ನು ಕುರಿತ ವ್ಯಾಖ್ಯಾನ ಗ್ರಂಥವನ್ನು ಗಮನಿಸಬೇಕು. ಸಂಶೋಧಕನ ನಿರ್ಲಿಪ್ತ ಧೋರಣೆಯ ಪ್ರಮಾಣ ಅರಿವಾಗುತ್ತದೆ. ಅದೇ ಜನಾಂಗದಿಂದ ಬಂದ ಎಲ್‌ಬಿ ಅವರು ನಿರ್ಭಿಡೆಯಿಂದ ಮತೀಯ ಚೌಕಟ್ಟಿನಿಂದ ಹೊರಬಂದು ಮುಕ್ತವಾಗಿ ವ್ಯಾಖ್ಯಾನಿಸಿರುವ ರೀತಿ ಎಂಥವರು ''ಅಹುದು ಅಹುದು'' ಎನ್ನುವಂತಿದೆ. ಸಂಶೋಧನೆ ಗುಣಮಟ್ಟ ಹೇಗಿರಬೇಕು ಎನ್ನುವುದಕ್ಕೆ ಈ ಕೃತಿ ಸಾಕ್ಷಿಯಾಗಿದೆ.

ಇವರ 'ನಿಜಗುಣಶಿವಯೋಗಿಯ ತತ್ತ್ವದರ್ಶನ' ಕೃತಿ ವೀರಶೈವರಿಗಿಂತ, ವೀರಶೈವೇತರಿಗೆ ಅತ್ಯಂತ ಪ್ರಿಯವಾದ ಸಾಂಸ್ಕೃತಿಕ ಕೃತಿ.

ಉತ್ತರಕರ್ನಾಟಕದ ಭಾಗಕ್ಕೆ ಹೋದಂತೆಲ್ಲ ಇದು ಗಮನಕ್ಕೆ ಬರುತ್ತದೆ. ಹುಬ್ಬಳ್ಳಿಯ ಸಿದ್ಧಾರೂಢ ಮಠದವರಿಗಿಂತೂ ಇದು ಪೂಜ್ಯಮಂತ್ರ ಕೃತಿ. ಶಿವಯೋಗ-ಶಿವತತ್ತ್ವ ಚಿಂತನೆ ಯನ್ನು ವಿಸ್ತಾರವಾಗಿ ಸರಳ ಕನ್ನಡ ಅನು ವಾದದ ಮೂಲಕ ಈ ಕೃತಿ ಪರಿಚಯಿಸುವುದರ ಮೂಲಕ ಜನ ಸಾಮಾನ್ಯರ ಆರಾಧ್ಯ ಗ್ರಂಥವಾಗಿದೆ.

ತಮಿಳಿನ 'ತಿರುಕ್ಕುರುಳ್' , ವೇಮನನ 'ಸೂಕ್ತಿ'ಗಳಿಗೆ ಸಮಸಮವಾಗಿ ಪ್ರಾಶಸ್ತ್ಯವಿರುವ ಸರ್ವಜ್ಞನ ವಚನಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ, ಯಾವುದು ಮೂಲ, ಯಾವುದು ಪ್ರಕ್ಷಿಪ್ತ ಎಂಬುದನ್ನು ಪರಿಷ್ಕರಿಸಿ, ಸುಮಾರು ಎರಡೂವರೆ ಸಾವಿರ ಸರ್ವಜ್ಞನ ವಚನಗಳು ವಿದ್ವದಾವೃತ್ತಿಯನ್ನು ಎಲ್‌ಬಿ ಅವರು ಸಂಪಾದಿಸಿ 'ಪರಮಾರ್ಥ' ಎಂಬ ಹೆಸರಿನಲ್ಲಿ ಪ್ರಕಟಿಸಿರುವುದನ್ನು ಇಲ್ಲಿಯೇ ದಾಖಲಿಸಬೇಕು.

ಹೀಗೆ ಪ್ರೊ.ಎಲ್.ಬಸವರಾಜು ಅವರು ಉದ್ದಕ್ಕೂ ತಮ್ಮನ್ನು ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರೂ ಮೂಲತಃ ಕವಿ ಮನಸ್ಸುಳ್ಳವರು. ಸುಪ್ತವಾಗಿದ್ದ ಆ ಮನೋ ಭಾವ ಗಟ್ಟಿಗೊಂಡು ಸೃಜನಶೀಲತೆ ಯನ್ನೂ ತುಂಬಿ ಕೊಟ್ಟಿತು. ಆ ದಿಸೆಯ ಪ್ರಯತ್ನವೇ ಪುಟ್ಟ ಕಾದಂಬರಿ 'ಕಲುಬುರ್ಗಿಯ ಶರಣ ಬಸವ', ಕವನ ಸಂಕಲನ 'ಠಾಣಾಂತರ'.

ಎಲ್.ಬಸವರಾಜು ಅವರು ನೋವನ್ನು ನಲಿವಾಗಿಸಿಕೊಂಡು ಜೀವನವನ್ನು, ಪರಿಸರವನ್ನು ಪ್ರೀತಿಸಿದವರು; ಪ್ರೀತಿಸುವವರು. ಸದಾ ಬೇಕು ಬೇಡಗಳನ್ನು ಗಮನಿಸುವ ವಾತ್ಸಲ್ಯ ಮಯಿ ಮಡದಿಯ ವಿಶಾಲಾಕ್ಷಿಯ ಕಟ್ಟೆಚ್ಚರ. ಮಕ್ಕಳು ಭಾಗ್ಯಲಕ್ಷ್ಮಿ, ನಳಿನಿ, ಮೊಮ್ಮಗ ಚಾರುದತ್ತನ ಪ್ರೀತಿಯ ತೆಕ್ಕೆಯಲ್ಲಿ ಸದಾ ಸುಖಿ. ಅವರ ಜೀವನೋತ್ಸಾಹದ ಮೂಲ ಸೆಲೆಯೇ ಪ್ರೀತಿ. ಅವರ ಜೀವಂತಿಕೆಯ ಕೇಂದ್ರವೂ ಅದೇ. ಅವರ 'ಠಾಣಾಂತರ' 'ಪ್ರೀತಿಯ ಅನೇಕ ಮಗ್ಗಲುಗಳನ್ನು ಸ್ಪರ್ಶಿಸುವಂತೆ ಜನಪರಕಾಳಜಿಯನ್ನು ಕಾಣಿಸುತ್ತದೆ. ಬದುಕನ್ನು ಶೋಧಿಸುತ್ತಲೇ ತನ್ನ ಒಳಗನ್ನು ಶೋಧಿಸುವ ಕಲೆಗಾರಿಕೆ ಇಲ್ಲಿದೆ. ಬಹುಶಃ ಈ ಕಾರಣದಿಂದಲೇ ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭ್ಯವಾಯ್ತು.

ಹೀಗೆ ಪ್ರೊ. ಎಲ್.ಬಸವರಾಜು ಅವರು ಶಾಸ್ತ್ರಗ್ರಂಥ, ಮಹಾಕಾವ್ಯಗಳನ್ನು, ವಚನ, ವ್ಯಾಕರಣ, ಛಂದೋಕೃತಿಗಳನು ಸಂಪಾದಿಸಿ ಸಂಶೋಧಿಸಿದರು. ಕನ್ನಡಿಗರ ಪ್ರೀತಿಗೆ, ವೈಯಕ್ತಿಕವಾಗಿ ಉಜ್ವಲಕೀರ್ತಿಗೆ ಪಾತ್ರರಾದರು. ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯಅಕಾಡೆಮಿ ಪ್ರಶಸ್ತಿ, ಚಿದಾನಂದ ಮೂರ್ತಿ ಪ್ರಶಸ್ತಿ-ಹೀಗೆ ಹತ್ತಾರು ಪ್ರಶಸ್ತಿ ಬಹುಮಾನಗಳನ್ನು ಪಡೆಯುತ್ತಾ ಬಂದರು. ಇದೀಗ ಹೊಸಸೇರ್ಪಡೆ ಕರ್ನಾಟಕ ಸರ್ಕಾರದ ಅತ್ಯುನ್ನತ ಸಾಹಿತ್ಯಿಕ ಪ್ರಶಸ್ತಿ 'ಪಂಪ ಪ್ರಶಸ್ತಿ' ಈ ಬಗ್ಗೆ ಕೇಳಿದರೆ ಸಾಕು ಉತ್ತರ ಸಿಗದು ನಮಗೆ. ಆದರೆ ಅದೇ ಮಾಸದ ನಗು, ವಿನಯವಂತಿಕೆ, ತೃಪ್ತಿ ಮುಖದ ಮೇಲೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಮಠಮಾನ್ಯ ರಿಂದ ದೂರವಿರಲು ಬಯಸುವ, ಸ್ವಧರ್ಮ ಅನ್ಯಧರ್ಮವೆನ್ನದೆ ಆರೋಗ್ಯಕರವಾಗಿ ವಿಡಂಬಿಸುವ ಎಲ್‌ಬಿ ಅವರದು ಅನ್ವೇಷಕ ಬುದ್ಧಿ. ಇಳಿವಯಸ್ಸಿನಲ್ಲೂ ಕಾವ್ಯಕುತೂಹಲಿ ಯಾಗಿರುವ ಇವರು ಪ್ರಾಪಂಚಿಕಕಾಮನೆ ಗಳಿಂದ ಸಾಕಷ್ಟು ಮುಕ್ತರು. ಎತ್ತರಕ್ಕೇರಿದಷ್ಟು ನೆಲದಲ್ಲೇ ನಿಂತಿರುವ ಎಲ್‌ಬಿ ನಮ್ಮಂಥವರ ಕಣ್ಣಲ್ಲಿ ಯಾವಾಗಲೂ ಶಿಷ್ಯವಾತ್ಸಲ್ಯದ ಮೇರು.

ಉಚ್ಚ ನ್ಯಾಯಾಲಯ ಪೀಠ ಸ್ಥಾಪನೆ ಕುರಿತು ಚಳುವಳಿ ನ್ಯಾಯವೇ ?

ಎ.ಪಿ.ಗೌರಿಶಂಕರ್
ವಕೀಲರು
ಇಬ್ರೋಸ್ ಕಮರ್ಷಿಯಲ್ ಕಾಂಪ್ಲೆಕ್ಸ್
ಎಂ.ಜಿ.ರಸ್ತೆ, ಮಂಗಳೂರು-೫೭೫ ೦೦೩.

ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ವಿಭಾಗ ಪೀಠವನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಸ್ಥಾಪಿಸಬೇಕೆಂದು ಈ ಪ್ರದೇಶದ ವಕೀಲ ಸಮುದಾಯ ಆಗ್ರಹಪಡಿಸಿ ಅತಿ ತೀವ್ರ ಚಳುವಳಿಗೆ ಇತ್ತೀಚೆಗಿನ ದಿನಗಳಲ್ಲಿ ತೊಡಗಿರುತ್ತಾರೆ. ಚಳುವಳಿಯ ತೀವ್ರತೆಯು ಒಂದು ಘಟ್ಟದಲ್ಲಿ ಕರ್ನಾಟಕದ ಉತ್ತರ ವಲಯದ ೧೨ ರೆವಿನ್ಯೂ ಜಿಲ್ಲೆಗಳನ್ನು ಪ್ರತ್ಯೇಕ ರಾಜ್ಯವಾಗಿ ವಿಭಜಿಸಬೇಕೆಂಬುವ ತನಕ ವಿಷಮಿಸಿತ್ತು. ಚಳುವಳಿಯು ಪ್ರಾರಂಭವಾಗುವಷ್ಟರಲ್ಲೇ ರಾಜ್ಯ ಸರಕಾರ ಅವರಿಗೆ ಸಂಪೂರ್ಣ ಶರಣಾಗಿ ತಮ್ಮ ನೈತಿಕ ಕರ್ತವ್ಯ ಹಾಗೂ ಜವಾಬ್ದಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನ ನಡೆಯಿಸಿತು. ವಿಭಾಗ ಪೀಠ ಸ್ಥಾಪನೆಯ ಅಪೇಕ್ಷಣೀಯತೆ ಮತ್ತು ಸಾಧುತ್ವದ ಕುರಿತು ತನಿಖೆ ನಡೆಯಿಸಿ ವರದಿ ಸಲ್ಲಿಸಲು ಮಾನ್ಯ ಜೆ.ಎಚ್.ಪಾಟೀಲರ ಸರಕಾರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ವಿಜ್ಞಾಪಿಸಿದ್ದರು. ಸರಕಾರದ ವಿಜ್ಞಾಪನೆಯಂತೆ ಮುಖ್ಯ ನ್ಯಾಯಾಧೀಶರು ಐದು ಮಂದಿ ನ್ಯಾಯಾಧೀಶರ ಸಮಿತಿ ನೇಮಿಸಿ ವರದಿ ಪಡೆದರು. ನ್ಯಾಯಾಧೀಶರ ಒಮ್ಮತದ ಅಭಿಪ್ರಾಯದಂತೆ ಕರ್ನಾಟಕದ ಉತ್ತರ ವಲಯದಲ್ಲಿ ಪ್ರತ್ಯೇಕ ವಿಭಾಗಪೀಠ ಸ್ಥಾಪನೆಯ ಆವಶ್ಯಕತೆ ಇರುವುದಿಲ್ಲವೆಂದೂ, ಅದು ಅಪೇಕ್ಷಣೀಯವಲ್ಲ ಹಾಗೂ ಸಾಧುವಲ್ಲವೆಂದು ವರದಿಯೊಪ್ಪಿಸಿರುತ್ತಾರೆ. ಸರಕಾರದ ಆಶಯದಂತೆ ನೇಮಕಗೊಂಡ ಸಮಿತಿಯ ವರದಿಯಲ್ಲಿ ಏನು ಬರೆಯಲಾಗಿದೆ ಅಥವಾ ಸಮಿತಿಯು ನಕಾರಾತ್ಮಕ ತೀರ್ಮಾನಕ್ಕೆ ಕಾರಣಗಳೇನು ಎಂಬುದನ್ನು ಸಾರ್ವಜನಿಕರಿಗೆ ತಿಳಿಸದೆ, ಆ ಕುರಿತು ಯಾವುದೇ ಚರ್ಚೆ ನಡೆಯಿಸದೆ, ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಜವಾಬ್ದಾರಿಕೆಯನ್ನು ಸಂಪೂರ್ಣ ಕಡೆಗಣಿಸಿ ಚಳುವಳಿಗಾರರ ಬೇಡಿಕೆಯನ್ನು ಹೇಗೆ ಪೂರೈಸುವುದೆಂಬುದರ ವಿಧಿವಿಧಾನಗಳನ್ನು ಅರಸಲು ತೊಡಗಿರುತ್ತಾರೆ. ಮಾನ್ಯ ಮುಖ್ಯ ಮಂತ್ರಿಯವರು ದೇಶದ ಪ್ರಧಾನಿಯವರನ್ನು ಚಳುವಳಿಗಾರರ ನಿಯೋಗದೊಡನೆ ಭೇಟಿಯಾಗಿ ವಿಭಾಗ ಪೀಠ ಸ್ಥಾಪನೆ ಮಾಡಲು ಒತ್ತಾಯಪೂರ್ವಕ ವಿನಂತಿಸಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲದೆ, ಐದು ಮಂದಿ ನ್ಯಾಯಾಧೀಶರ ವರದಿಯ ಕುರಿತು ಪತ್ರಿಕಾ ವರದಿಗಾರರು ಖಚಿತವಾಗಿ ಪ್ರಶ್ನಿಸಿದಾಗ, ಈಗಿನ ಮುಖ್ಯ ನ್ಯಾಯಾಧೀಶರು ಕೆಲವೇ ದಿನಗಳಲ್ಲಿ ನಿವೃತ್ತರಾಗುವರು, ಅನಂತರ ಯಾವುದೇ ಅಡೆತಡೆಗಳಿಲ್ಲದೆ ನ್ಯಾಯಪೀಠದ ಸ್ಥಾಪನೆ ಮಾಡಬಹುದೆಂಬ ಕೇವಲ ಹಾಸ್ಯಾಸ್ಪದ ಉತ್ತರ ನೀಡಿರುತ್ತಾರೆ ! ಅವರ ಉತ್ತರದ ಇಂಗಿತದಂತೆ ವಿಭಾಗೀಯ ಪೀಠ ಸ್ಥಾಪನೆ ಪೂರ್ವ ನಿರ್ಧರಿತ ವಿಷಯ. ಇದಕ್ಕೆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ವಿನಾಕಾರಣ ವಿಘ್ನ ಉಂಟು ಮಾಡುತ್ತಾರೆ-ಎಂದು ಕಂಡು ಬರುತ್ತದೆ. ನಮ್ಮ ಯಾವುದೇ ರಾಜಕೀಯ ಪಕ್ಷ ಈ ಪ್ರಶ್ನೆಯ ಗಹನತೆಯ ಕುರಿತು ಸ್ವಲ್ಪವೂ ಚಿಂತಿಸುತ್ತಿರುವಂತೆ ಕಂಡು ಬರುವುದಿಲ್ಲ. ಚಳುವಳಿಗಾರರ ಮೂರ್ಖ ಅಂಧತೆಯೂ ಸಮಗ್ರ ರಾಜ್ಯದ

ಹಾಗೂ ದೇಶದ ಒಳಿತು, ಹಿತ, ಏಳಿಗೆಯ ಕುರಿತು ರಾಜಕೀಯ ಮುತ್ಸದ್ದಿಗಳ ಅನಾಸಕ್ತಿಯೂ, ನಮ್ಮನ್ನು ದುರಂತದಂಚಿಗೆ ಕೊಂಡೊಯ್ಯುತ್ತಿವೆ. ಚಳುವಳಿಗಾರರು ಎಷ್ಟೇ ತೀವ್ರವಾಗಿ ಗುಲ್ಲೆಬ್ಬಿಸಿದರೂ, ರಾಜಕೀಯ ಮುತ್ಸದ್ದಿಗಳು ಯಾವುದೇ ಅತ್ಯವಸರದ ತೀರ್ಮಾನ ಕೈಗೊಂಡರೂ, ಇನ್ನುಳಿದ ಪ್ರಾಜ್ಞ ಸಾರ್ವಜನಿಕರು-ಮುಖ್ಯ ನ್ಯಾಯಾಲಯದ ವಿಭಾಗ ಪೀಠವನ್ನು ರಾಜ್ಯ ಕೇಂದ್ರದಿಂದ, ಇತರ ಕಡೆಯಲ್ಲಿ ಸ್ಥಾಪಿಸಬೇಕೇ ಬೇಡವೇ ? ಅದರಿಂದ ಒತೇನು? ಕೆಡುಕೇನು? ಎಂಬುದರ ಕುರಿತು ಗಹನವಾಗಿ ಚಿಂತಿಸಬೇಕಾದುದು ಅತಿ ಅನಿವಾರ್ಯ. ಹಾಗೆಂದೇ ಸಾರ್ವಜನಿಕರ ಚಿಂತನೆಗಾಗಿ ಈ ಲೇಖನ ಬರೆಯಲಾಗಿದೆ.

ಐದು ಮಂದಿ ನ್ಯಾಯಾಧೀಶರ ವರದಿಯ ವಿವರಗಳನ್ನು ಮಾನ್ಯ ಸರಕಾರ ಉದ್ದೇಶಪೂರ್ವಕವಾಗಿಯೇ ಪ್ರಕಟಿಸದಿರುವಂತೆ ಕಂಡು ಬರುತ್ತದೆ. ಅಲ್ಲದೆ, ಅದರ ಕುರಿತು ಮಂತ್ರಿ ಸಂಪುಟ ಚರ್ಚೆಯೇನೂ ನಡೆಯಿಸಲಿಲ್ಲ. ಜೂನ್ ೨೧ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಹೊರತಾಗಿ ಇತರ ಪತ್ರಿಕೆಗಳು ಐದು ಮಂದಿ ನ್ಯಾಯಾಧೀಶರ ವರದಿಯ ವಿವರಗಳನ್ನು ಪ್ರಕಟಿಸಿರುವಂತೆ ಕಂಡು ಬರುವುದಿಲ್ಲ. ನ್ಯಾಯಾಧೀಶರ ವರದಿಯಲ್ಲಿ ಮಾನ್ಯ ಜಸ್ವಂತ್ ಸಿಂಗ್ ಕಮಿಟಿಯವರು ಮುಖ್ಯ ನ್ಯಾಯಾಲಯದ ವಿಭಾಗೀಯ ಪೀಠವನ್ನು ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪನೆ ಮಾಡುವ ಕುರಿತು ಸೂಚಿಸಿರುವ ನಿಯಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅನುಸರಿಸಿರುತ್ತಾರೆ. ಅಲ್ಲದೆ, ಈ ಹಿಂದೆ ನಮ್ಮ ರಾಜ್ಯದಲ್ಲೇ ವಿಭಾಗೀಯ ಪೀಠವನ್ನು ಬೆಂಗಳೂರಿನಿಂದ ಹೊರಗೆ ಸ್ಥಾಪಿಸುವ ಕುರಿತು ಉಚ್ಚ ನ್ಯಾಯಾಲಯ ಯಾವ ತೀರ್ಮಾನಕ್ಕೆ ಬಂದಿರುತ್ತಾರೆ ಎಂಬುದನ್ನೂ ಪರಿಶೀಲಿಸಿರುತ್ತಾರೆ. ಈ ಹಿಂದೆ ಈ ಪ್ರಶ್ನೆ ಹಲವು ಸಲ ಸರಕಾರ ಹಾಗೂ ಉಚ್ಚ ನ್ಯಾಯಾಲಯದ ಮುಂದೆ ಉದ್ಭವಿಸಿತ್ತು. ೧೯೬೯ರಿಂದ೧೯೯೪ರ ತನಕ ೯ ಸಲ ಉಚ್ಚ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರುಗಳು ಸಭೆ ಸೇರಿ ಒಮ್ಮತದಲ್ಲಿ, ಪೀಠ ಸ್ಥಾಪನೆಯು ಅವಶ್ಯವಲ್ಲವೆಂದೂ, ಅಪೇಕ್ಷಣೀಯವಲ್ಲವೆಂದೂ ಸಾಧುವಲ್ಲವೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಈ ಒಮ್ಮತದ ೯ಸಲದ ಅಭಿಪ್ರಾಯಕ್ಕೆ ೧೯೬೯ರಲ್ಲಿ ಅಂದಿನ ಮುಖ್ಯ ನ್ಯಾಯಾಧೀಶ ಮಾನ್ಯ ಡಿ.ಎಂ. ಚಂದ್ರಶೇಖರ ಮಾತ್ರ ಆಕ್ಷೇಪವೆತ್ತಿದ್ದಾರೆ. ಕರ್ನಾಟಕದ ಉತ್ತರ ವಲಯದಲ್ಲಿ ವಿಭಾಗ ಪೀಠ ಸ್ಥಾಪನೆಯನ್ನು ಅವರು ಅನುಮೋದಿಸಿದ್ದರು. ಆದರೆ, ಸರಕಾರ ಇಚ್ಚ ನ್ಯಾಯಾಲಯದ ಸ್ಥಾಪನೆಗೆ ಅತಿ ಅವಶ್ಯವಾದ ಕಟ್ಟಡಗಳ ಮತ್ತು ವಸತಿ ಗೃಹಗಳ ನಿರ್ಮಾಣ ಮತ್ತು ಇತರ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಿದ ಅನಂತರವೇ ಸ್ಥಾಪನೆಯ ನಿರ್ಧಾರ ಕೈಗೊಳ್ಳತಕ್ಕದ್ದೆಂಬ ಶರ್ತಬದ್ಧ ಅನುಮೋದನೆಯನ್ನಿತ್ತಿದ್ದರು.

ಜಸ್ವಂತ ಸಿಂಗ್ ಕಮಿಟಿ ಸೂಚಿಸುರುವ ಒಂದು ನಿಯಮದಂತೆ ವಿಭಾಗೀಯ ಪೀಠ ಸ್ಥಾಪಿಸಲಿರುವ ಪ್ರದೇಶವು ಚಾರಿತ್ರಿಕವಾಗಿ, ಸಾಂಸ್ಕೃತಿಕ ಆಡಳಿತಾತ್ಮಕವಾಗಿ ಮತ್ತು ಪ್ರಾದೇಶಿಕ ರೂಢಿ ಕಾಯದೆ ಆಧಾರದಲ್ಲಿ ಒಂದು ಪ್ರತ್ಯೇಕ ವಲಯವಾಗಿರತಕ್ಕದ್ದು. ಕರ್ನಾಟಕದ ಉತ್ತರ ವಲಯದ ಬೆಳಗಾವಿ, ರೆವಿನ್ಯೂ ವಿಭಾಗದಲ್ಲಿ - ಧಾರವಾಡ, ಕಾರವಾರ, ಬಿಜಾಪುರ, ಬೆಳಗಾವಿ, ಹಾವೇರಿ ಮತ್ತು ಗದಗ್ ಜಿಲ್ಲೆಗಳಿವೆ; ಗುಲ್ಬರ್ಗ ರೆವಿನ್ಯೂ ವಿಭಾಗದಲ್ಲಿ ಬಳ್ಳಾರಿ, ಬೀದರ್, ಗುಲ್ಬರ್ಗ,

ರಾಯಚೂರ್, ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳಿವೆ. ಬೆಳಗಾವಿ, ಬಿಜಾಪುರ, ಧಾರವಾಡ, ಕಾರವಾರ ಜಿಲ್ಲೆಗಳು ಹಿಂದಿನ ಮುಂಬಯಿ ರಾಜ್ಯದಿಂದ ಕರ್ನಾಟಕ ಏಕೀಕರಣದ ಮೂಲಕ ಬಂದವು. ಅಂತೆಯೇ ಗುಲ್ಬರ್ಗ, ಬೀದರ್ ಮತ್ತು ರಾಯಚೂರ್ ಜಿಲ್ಲೆಗಳು ಹೈದರಾಬಾದ್ ಪ್ರಾಂತ್ಯದಿಂದಲೂ ಮತ್ತು ಬಳ್ಳಾರಿಯು ಮದರಾಸು ಪ್ರಾಂತ್ಯದಿಂದಲೂ ಬಂದಿರುತ್ತವೆ. ಚಾರಿತ್ರಿಕ ಹಿನ್ನೆಲೆ ಮತ್ತು ಹಿಂದಿನ ಆಡಳಿತ ಭಾಷೆಗಳು ಹಾಗೂ ಆಡಳಿತ ವಿಧಾನ ಮೇಲೆ ಹೇಳಿರುವ ಮೂರು ವಿಭಾಗಗಳಲ್ಲೂ ವಿಭಿನ್ನವಾಗಿವೆ. ಸ್ಥಳೀಯ ರೂಢಿ ಕಾನೂನುಗಳು ವಿಬಿನ್ನ. ಅಲ್ಲದೆ, ಧಾರವಾಡ, ಬೆಳಗಾವಿ, ಬಳ್ಳಾರಿ, ಬಿಜಾಪುರ, ಮತ್ತು ಗುಲ್ಬರ್ಗ ಪ್ರತಿ ಜಿಲ್ಲೆಗಳ ವಕೀಲ ಸಂಘಗಳ ಪ್ರತಿನಿಧಿಗಳು ತಮ್ಮ ತಮ್ಮ ಜಿಲ್ಲೆಯಲ್ಲೇ ಉಚ್ಚ ನ್ಯಾಯಾಲಯ ಪೀಠ ಸ್ಥಾಪನೆಯಾಗಬೇಕೆಂದು ಅಗ್ರಹಿಸುತ್ತಾರೆ. ಅಷ್ಟು ಮಾತ್ರವಲ್ಲದೆ ಗುಲ್ಬರ್ಗ, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳ ವಕೀಲರ ಪ್ರತಿನಿಧಿಗಳು ಅವರ ಜಿಲ್ಲಾ ಕೇಂದ್ರಗಳಲ್ಲಿ ನ್ಯಾಯಾಲಯ ಪೀಠ ಸ್ಥಾಪನೆ ಸಾಧ್ಯವಿಲ್ಲವಾದರೆ, ಈಗ ಪ್ರಚಲಿತವಿರುವ ಬೆಂಗಳೂರು ಕೇಂದ್ರವೇ ಶಾಶ್ವತವಾಗಿ ಮುಂದುವರಿಯಬೇಕೆಂದು ವಿನಂತಿಸುತ್ತಾರೆ. ಧಾರವಾಡ-ಹುಬ್ಬಳ್ಳಿಯಲ್ಲಿ ನ್ಯಾಯಾಲಯ ಪೀಠ ಸ್ಥಾಪನೆಯನ್ನು ಅವರು ಪ್ರಬಲವಾಗಿ ವಿರೋಧಿಸುತ್ತಾರೆ. ಈ ತರದ ಪರಸ್ಪರ ವಿರೋಧ ಸೆಳೆತ, ಚಾರಿತ್ರಿಕ ಹಿನ್ನೆಲೆ, ಆಡಳಿತ, ಇತ್ಯಾದಿಗಳಲ್ಲಿಯ ವಿಭಿನ್ನತೆಗಳ ಕಾರಣದಿಂದ ಕರ್ನಾಟಕದ ಉತ್ತರ ವಲಯವನ್ನು ಒಂದು ಒಮ್ಮತದ ಪ್ರದೇಶವೆಂದು ಪರಿಗಣಿಸಲು ಸಾಧ್ಯವಿಲ್ಲ. ಬೀದರ್ , ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ ಜಿಲ್ಲೆಗಳ ಮೂಲಕ ರೈಲ್ವೇ ಹಾಗೂ ನೇರ ಬಸ್ಸು ಸಂಪರ್ಕವಿರುವುದರಿಂದ ಬೆಂಗಳೂರಿನೊಡನೆ ಅವರಿಗೆ ಸುಲಭ ಸಂಪರ್ಕ ಸೌಕರ್ಯವಿದೆ. ಹುಬ್ಬಳ್ಳಿ-ಧಾರವಾಡದೊಡನೆ ನೇರ ಸಾರಿಗೆ ಸಂಪರ್ಕವಿಲ್ಲದಿರುವುದಿರಿಂದ, ಹುಬ್ಬಳ್ಳಿ-ಧಾರವಾಡದಲ್ಲಿ ಉಚ್ಚನ್ಯಾಯಾಲಯದ ಪೀಠ ಸ್ಥಾಪನೆ ಅವರಿಗೇನೂ ಹೆಚ್ಚಿನ ಅನುಕೂಲತೆ ಒದಗಿಸುವುದಿಲ್ಲ. ಈ ಮೇಲಿನ ಕಾರಣಗಳಿಗಾಗಿ ಉತ್ತರ ವಲಯವು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ಪಡೆಯಲು ಅರ್ಹವಾಗುವ ಪ್ರತ್ಯೇಕವಾದ ಪ್ರದೇಶವೆಂದು ಪರಿಗಣಿಸಲು ಸಾಧ್ಯವಿರುವುದಿಲ್ಲವೆಂಬುದು ನ್ಯಾಯಾಧೀಶರ ಸಮಿತಿಯು ನೀಡುವ ಒಂದನೇ ಕಾರಣ.

ಕರ್ನಾಟಕದ ಉತ್ತರ ವಲಯದಿಂದ (ಮೇಲೆ ಹೇಳಿರುವ ೧೨ ಜಿಲ್ಲೆಗಳ ಪ್ರದೇಶ) ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ತಾ:೨೨.೧೧.೧೯೯೭ರ ಅವಧಿಗೆ ದಾಖಲಾಗಿ ಇತ್ಯರ್ಥವಾಗಲು ಬಾಕಿ ಇರುವ ದಾವೆ: ಮೊಕದ್ದಮೆಗಳ ಕಡತಗಳು, ಸಮಗ್ರ ಕರ್ನಾಟಕದ ಇತ್ಯರ್ಥವಾಗಲು ಬಾಕಿ ಇರುವ ಕಡತಗಳ ಶೇಕಡಾ ೩೦.೪೨ ಆಗಿರುತ್ತಿತ್ತು. ಅನಂತರ, ತಾ:೦೧.೦೮.೯೯ಕ್ಕೆ ಶೇಕಡಾ ೨೦.೧೧ ಮತ್ತು ತಾ:೦೧.೦೧.೨೦೦೦ಕ್ಕೆ ಶೇಕಡಾ೧೮.೩೭ ತಿಳಿದಿದೆ. ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗಲು ಬಾಕಿ ಇರುವ ಸಮಗ್ರ ಕಡತಗಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಇಳಿಮುಖವಾಗಿದೆ. ಆದುದರಿಂದ, ಕ್ಷಿಪ್ರ ನ್ಯಾಯ ತೀರ್ಮಾನ ಕಾರಣಕ್ಕಾಗಿ ಪ್ರತ್ಯೇಕ ವಿಭಾಗೀಯ ಪೀಠ ಸ್ಥಾಪನೆ ಅವಶ್ಯವಲ್ಲವೆಂಬುದು ಇನ್ನೊಂದು ಕಾರಣ.

ಉತ್ತರ ವಲಯದಿಂದ, ಬೆಂಗಳೂರಿನ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿರುವ

ಒಟ್ಟು ಮೇಲ್ಮನವಿ, ರಿಟ್ ಅರ್ಜಿ, ಮೊಕದ್ದಮೆ ಇತ್ಯಾದಿಗಳು ಅಲ್ಲಿ ದಾಖಲಾಗಿರುವ ಸಮಗ್ರ ಕರ್ನಾಟಕದ ಮೊಕದ್ದಮೆಗಳ ಮೂರನೆಯ ಒಂದಕ್ಕಿಂತ ಕಡಿಮೆ ಇರುತ್ತದೆ. ಜಸ್ವಂತ್ ಸಿಂಗ್ ಕಮಿಟಿಯ ನಿಯಮದಂತೆ ಉಚ್ಚ ನ್ಯಾಯಾಲಯದ ಪ್ರತ್ಯೇಕ ಪೀಠ ಸ್ಥಾಪನೆಗೆ ಇದು ಅನರ್ಹತೆ. ಅಷ್ಟು ಮಾತ್ರವಲ್ಲದೆ ವರ್ಷದಿಂದ ವರ್ಷಕ್ಕೆ ಆ ವಲಯದ ದಾವೆ ಇತ್ಯಾದಿಗಳ ಸಂಖ್ಯೆ ಇಳಿಮುಖವಾಗಿದೆ. ನ್ಯಾಯ ತೀರ್ಮಾನ ತ್ವರಿತಗೊಳಿಸುವ ದೃಷ್ಟಿಯಿಂದ ವಿಭಾಗೀಯ ಪೀಠ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಆವಶ್ಯಕತೆ ಇಲ್ಲವೆಂದಾಯ್ತು.

ಕರ್ನಾಟಕ ರಾಜ್ಯದ ಜನಸಂಖ್ಯೆ ೧೯೯೧ರ ಅವಧಿಗೆ ೪,೪೯,೭೭,೦೦೦. ಅದೇ ಅವಧಿಗೆ ಉತ್ತರ ವಲಯ(೧೨ ಜಿಲ್ಲೆಗಳು) ಜನಸಂಖ್ಯೆ ೧,೯೨,೭೩,೦೦೦. ಹಾಗಿದ್ದರೂ, ಬೆಳಗಾವಿ ರೆವಿನ್ಯೂ ವಿಭಾಗ ಅಥವಾ ಗುಲ್ಬರ್ಗಾ ರೆವಿನ್ಯೂ ವಿಭಾಗದ ಜನಸಂಖ್ಯೆಯನ್ನು ಪ್ರತ್ಯೇಕವಾಗಿ ಸಮಗ್ರ ಕರ್ನಾಟಕದೊಡನೆ ತುಲನೆ ಮಾಡಿದರೆ, ಒಟ್ಟು ಜನಸಂಖ್ಯೆಯ ಕಾಲು ಅಂಶಕ್ಕಿಂತಲೂ ಕಡಿಮೆಯಾಗುವುದು. ಆ ಕಾರಣಕ್ಕಾಗಿ ಎರಡೂ ಪ್ರದೇಶಗಳೂ (ಧಾರವಾಡ, ಹುಬ್ಬಳ್ಳಿ ಮತ್ತು ಗುಲ್ಬರ್ಗ) ನ್ಯಾಯಾಲಯ ಪೀಠ ಹೊಂದಲು ಅನರ್ಹವಾಗಿವೆ.

ಕರ್ನಾಟಕದ ಉತ್ತರ ತುದಿ ಬೀದರ್‌ನಿಂದ ಬೆಂಗಳೂರಿಗೆ ೧೪ ತಾಸುಗಳ ಪ್ರಯಾಣ ಕಾಲ. ಉತ್ತರದ ಪ್ರತಿ ಜಿಲ್ಲೆಯಿಂದಲೂ ಬೆಂಗಳೂರಿಗೆ ರೈಲ್ವೇ ಮತ್ತು ಬಸ್ಸು ಮೂಲಕ ನೇರ ಪ್ರಯಾಣದ ಸೌಕರ್ಯವಿದೆ. ಇತರ ಎಲ್ಲಾ ಕೇಂದ್ರಗಳಿಂದ ಬೆಂಗಳೂರಿಗೆ ಸಾಧಾರಣ ೮-೧೦ ಗಂಟೆಗಳ ಪ್ರಯಾಣ. ಆದರೆ, ಗುಲ್ಬರ್ಗಾ ಬಳ್ಳಾರಿ, ಬೀದರ್ ರಾಯಚೂರ್ -ಇತ್ಯಾದಿ ಜಿಲ್ಲೆಗಳಿಂದ ,ಧಾರವಾಡ-ಹುಬ್ಬಳ್ಳಿಗೆ ನೇರ ಪ್ರಯಾಣದ ಸೌಕರ್ಯವಿಲ್ಲ. ಪ್ರಯಾಣ ಕಾಲ ಹಾಗೂ ನೇರ ಸಂಪರ್ಕ ಅನುಕೂಲತೆಯ ದೃಷ್ಟಿಯಲ್ಲೂ ಧಾರವಾಡ-ಹುಬ್ಬಳ್ಳಿ ಪ್ರದೇಶ ಗುಲ್ಬರ್ಗಾ ರೆವಿನ್ಯೂ ಡಿವಿಜನ್ ಜಿಲ್ಲೆಗಳಿಗೆ ಬೆಂಗಳೂರಿಗಿಂತ ಕಷ್ಟಕರವೆಂದು ಅಲ್ಲಿನ ವಕೀಲರ ಪ್ರತಿನಿಧಿಗಳ ಹೇಳಿಕೆ.

ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಅಥವಾ ರಿಟ್ ಅರ್ಜಿ ಸಲ್ಲಿಸಲು ಆಗುವ ಒಟ್ಟು ಖರ್ಚಿನಲ್ಲಿ ಪ್ರಯಾಣದ ಖರ್ಚು ಅತ್ಯಲ್ಪ. ನ್ಯಾಯಾಲಯದ ಶುಲ್ಕ ಹಾಗೂ ವಕೀಲರ ಸಂಭಾವನೆ ಮತ್ತು ಇತರ ಖರ್ಚುಗಳು ಸಿಂಹಪಾಲು. ಆದುದರಿಂದ, ಉಚ್ಚನ್ಯಾಯಾಲಯ ಯಾವ ಕೇಂದ್ರದಲ್ಲಿದ್ದರೂ ಪಕ್ಷಗಾರರ ನಿಜವಾದ ಖರ್ಚು ಒಂದೇ ಆಗಿರುತ್ತದೆ.

ಉಚ್ಚ ನ್ಯಾಯಾಲಯದಲ್ಲಿ ಪಕ್ಷಗಾರನ ಮುಖತಃ ತನಿಖೆ ನಡೆಯುವುದಿಲ್ಲ. ಕೆಳಗಿನ ನ್ಯಾಯಾಲಯಗಳಲ್ಲಿ ಬರೆಯಲಾದ ಲಿಖಿತ ಹೇಳಿಕೆ, ಹಾಜರುಪಡಿಸಲಾದ ದಾಖಲೆ ಪತ್ರ ಮತ್ತು ಎರಡೂ ಪಕ್ಷಗಳ ವಕೀಲರ ವಾದ ಮಂಡನೆಯ ಆಧಾರದಲ್ಲಿ ತೀರ್ಮಾನವಾಗುತ್ತದೆ. ರಿಟ್ ಅರ್ಜಿಯ ತನಿಖೆಯಲ್ಲೂ ಇದೇ ಕ್ರಮ. ಆದುದರಿಂದ, ಹೆಚ್ಚಿನ ವಿವಾದಗಳಲ್ಲಿ ಪಕ್ಷಗಾರರು ಸ್ವತಃ ನ್ಯಾಯಾಲಯದ ಕೇಂದ್ರಸ್ಥಾನಕ್ಕೆ ಪ್ರಯಾಣಿಸುವ ಅಗತ್ಯವಿರುವುದಿಲ್ಲ. ಅಲ್ಲದೆ, ಇನ್ನು ಸ್ವಲ್ಪ ಕಾಲದಲ್ಲಿ ಮುಖ್ಯ ನ್ಯಾಯಾಲಯ ಮತ್ತು ರಾಜ್ಯದ ಎಲ್ಲಾ ಕೆಳನ್ಯಾಯಾಲಯಗಳೊಡನೆ ಕಂಪ್ಯೂಟರ್ ಜಾಲ ನಿರ್ಮಿಸುವ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಅಂಥ ಸಂದರ್ಭದಲ್ಲಿ ಎಲ್ಲಾ ಕೆಳ ನ್ಯಾಯಾಲಯಗಳೊಡನೆ ನೇರ, ಸುಲಭ, ಸರಳ ಮತ್ತು ನಿಗದಿತ ಸಂಪರ್ಕ

ವೇರ್ಪಟ್ಟು ದೂರದ ಕುರಿತಿರುವ ಚಿಂತನೆಗೆ ಆಸ್ಪದವಿಲ್ಲವಾಗುತ್ತದೆ.

ಈ ಮೊದಲೇ ವಿವರಿಸಿರುವಂತೆ ಉತ್ತರ ವಲಯದ ಹೆಚ್ಚಿನ ಜಿಲ್ಲಾ ಕೇಂದ್ರಗಳ ವಕೀಲರೂ ತಮ್ಮಲ್ಲೇ ವಿಭಾಗೀಯ ಪೀಠ ನೆಲಸತಕ್ಕದೆಂದು ವಾದಿಸುತ್ತಾರೆ. ಆ ಪ್ರಕಾರ ವಿಭಾಗೀಯ ಪೀಠ ಒಂದಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಸ್ಥಾಪಿಸುವುದು ಅನಪೇಕ್ಷಣೀಯ, ಆರ್ಥಿಕವಾಗಿ ದುಂದು ಮತ್ತು ಇದರ ಪರಿಣಾಮವಾಗಿ ನ್ಯಾಯ ತೀರ್ಮಾನ ಆಡಳಿತ ವ್ಯವಸ್ಥೆಯ ಶಿಥಿಲವಾಗುವುದು. ಅಲ್ಲದೇ ವ್ಯವಸ್ಥೆಯ ಸಮಗ್ರತೆ, ಶಿಸ್ತು ಮತು ಸ್ಥಿರತೆಗಳು ನಷ್ಟ ಹೊಂದುವುದರಲ್ಲಿ ಎಳ್ಳಷ್ಟೂ ಸಂಶಯ ವಿಲ್ಲ.

ಪ್ರಸ್ತುತ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಮಂಜೂರಾಗಿರುವ ನ್ಯಾಯಾಧೀಶರ ಸಂಖ್ಯೆ ೪೦ ಮತ್ತು ಈಗ ನೇಮಕಾತಿಯಾಗಿದ್ದು ಸೇವೆ ನಿರತವಾಗಿರುವವರು ೩೪ ಮಂದಿ. ಈಗ ೩೪ ಮಂದಿಯ ನ್ಯಾಯಾಲಯ ಒಗ್ಗಟ್ಟಿನಲ್ಲಿ ದಕ್ಷತೆಯಲ್ಲಿ ಶಿಸ್ತುಬದ್ಧರಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಕೇಂದ್ರ ಸ್ಥಾನದಿಂದ ಒಂದು ವಿಭಾಗೀಯ ಪೀಠ ದೂರದೂರಿನಲ್ಲಿ ಸ್ಥಾಪಿಸಲಾದರೆ, ಆದರ್ಶ ಕಾರ್ಯ ವೈಖರಿಗೆ ಬಹಳ ತೊಡಕುಂಟಾಗುತ್ತದೆ.

ಈಗ ಬೆಂಗಳೂರಿನಲ್ಲಿ ರಾಜ್ಯದ ವಿವಿಧ ಭಾಗಗಳ ವಕೀಲರುಗಳು ಬಂದು ನೆಲಸಿ ವೃತ್ತಿಜೀವನವನ್ನು ತೃಪ್ತಿಕರವಾಗಿ ನಡೆಯಿಸುತ್ತಿದ್ದಾರೆ. ರಾಜ್ಯದ ಎಲ್ಲಾ ಪ್ರದೇಶಗಳ ಪ್ರತಿನಿಧಿತ್ವ ಹೊಂದಿರುವುದರಿಂದ ನ್ಯಾಯಾಲಯದ ಕೆಲಸ ಸುವ್ಯವಸ್ಥಿತವಾಗಿ ನಡೆಯುತ್ತಿದೆ. ವಿಭಾಗ ಪೀಠ ಬೇರೆ ಕೇಂದ್ರದಲ್ಲಿ ಸ್ಥಾಪನೆಯಾದರೆ, ರಾಜ್ಯದ ಎಲ್ಲಾ ಪ್ರದೇಶಗಳ ಪ್ರತಿನಿಧಿತ್ವ ನಷ್ಟವಾಗುತ್ತದೆ. ಇದು ರಾಜ್ಯದ ಆರೋಗ್ಯಕರ ಬೆಳವಣಿಗೆಗೆ ಪೂರಕವಲ್ಲ. ಐದು ಮಂದಿ ನ್ಯಾಯಾಧೀಶರ ಸಮಿತಿಯ ಅಭಿಪ್ರಾಯಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ

ನಮ್ಮ ನೆರೆ ರಾಜ್ಯಗಳಾದ ಮಹರಾಷ್ಟ್ರದ ಔರಂಗಾಬಾದ್ ಮತ್ತು ಚೆನ್ನೈಯ ಮಧುರೈಯಲ್ಲಿ ವಿಭಾಗೀಯ ಪೀಠವನ್ನು ರಾಜ್ಯ ಕೇಂದ್ರದಿಂದ ಹೊರಗೆ ಸ್ಥಾಪಿಸಿದ್ದು ಸ್ಥಳೀಯ ಜನರ ಬಲವಂತ ಮತ್ತು ರಾಜಕೀಯ ಮುತ್ಸದ್ದಿಗಳ ರಾಜಕೀಯ ಕಾರಣಕ್ಕಾಗಿ. ಅದನ್ನು ಕರ್ನಾಟಕವು ಪೂರ್ವ ನಿದರ್ಶನವೆಂದು ಸ್ವೀಕರಿಸುವುದು ಸರಿಯಲ್ಲ. ಭಾಷಾವಾರು ರಾಜ್ಯ ನಿರ್ಮಾಣವಾಗುವ ಪೂರ್ವದಲ್ಲೇ ನಾಗಪುರ ಮತ್ತು ಲಕ್ನೋಗಳಲ್ಲಿ ಉಚ್ಚ ನ್ಯಾಯಾಲಯಗಳ ಪೀಠ ಅಸ್ತಿತ್ವದಲ್ಲಿದ್ದುದನ್ನು ಮುಚ್ಚದೆ ಮುಂದುವರಿಸಲಾಗಿದೆ. ಆದುದರಿಂದ, ಈ ಕಾರಣ ಕರ್ನಾಟಕಕ್ಕೆ ಅನ್ವಯಿಸುವುದಿಲ್ಲ. ಪಂಜಾಬ್ ಮತ್ತು ಹರ್ಯಾಣ ಎರಡು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯವಿದೆ. ಅಲ್ಲಿನ ಸಾರ್ವಜನಿಕರಿಗೆ ಪ್ರತ್ಯೇಕ ಉಚ್ಚ ನ್ಯಾಯಾಲಯಗಳಿಲ್ಲದಿರುವುದರಿಂದ ಯಾವುದೇ ಕಷ್ಟ ಅಥವಾ ತೊಂದರೆಗಳಾದಂತೆ ಕಂಡು ಬರುವುದಿಲ್ಲ. ಜನಸಂಖ್ಯೆಯಲ್ಲಿ ಮತ್ತು ಭೌಗೋಳಿಕವಾಗಿ ಕರ್ನಾಟಕಕ್ಕಿಂತ ಹಿರಿದಾಗಿರುವ ಆಂಧ್ರ ಪ್ರದೇಶ ಮತ್ತು ಪಶ್ಚಿಮ ಬಂಗಾಳಗಳಲ್ಲಿ ರಾಜ್ಯ ಕೇಂದ್ರ ಸ್ಥಾನದಲ್ಲಿ ಮಾತ್ರ ಉಚ್ಚ ನ್ಯಾಯಾಲಯವಿರುವುದಾದರೂ, ಅಲ್ಲಿನ ಜನತೆ ವಿಭಾಗೀಯ ಪೀಠಗಳನ್ನು ಬೇರೆಡೆಯಲ್ಲಿ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿರುವುದಿಲ್ಲ. ನಿಜಸ್ಥಿತಿ ಮೇಲಿನಂತಿರುವಾಗ ಕರ್ನಾಟಕದಲ್ಲಿ ವಿಭಾಗೀಯ ಪೀಠವನ್ನು ರಾಜ್ಯ ಕೇಂದ್ರದಿಂದ ಬೇರೆ ಕಡೆಗೊಯ್ಯುವುದರಲ್ಲಿ ಯೋಗ್ಯ ಕಾರಣಗಳು ಕಾಣಿಸುವುದಿಲ್ಲ.

ಇದೊಂದು ಅನುತ್ಪಾದಕ ಮತ್ತು ಅನಿವಾರ್ಯ ವಲ್ಲದ ನಷ್ಟ.

ರಾಜ್ಯದ ಎಲ್ಲಾ ಕೆಳ ನ್ಯಾಯಾಲಯಗಳ ಆಡಳಿತೆಯ ಜವಾಬ್ದಾರಿಕೆ ಉಚ್ಚ ನ್ಯಾಯಾಲ ಯದಲ್ಲಿ ನಿಹಿತವಾಗಿದೆ. ಎಲ್ಲಾ ಕೆಳ ನ್ಯಾಯಾಧೀಶರುಗಳ ವರ್ಗಾವಣೆ, ಸೇವಾ ಹಿರಿತನ ನಿರ್ಣಯ, ಶಿಸ್ತು ನಿಯಮ ಪಾಲನೆ ಹಾಗೂ ನಿಯಂತ್ರಣ ಇತ್ಯಾದಿ ಆಡಳಿತಾತ್ಮಕ ನಿರ್ಧಾರಗಳನ್ನು ಉಚ್ಚ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರುಗಳು ಸಭೆ ಸೇರಿ ನಿರ್ಧರಿಸತಕ್ಕದ್ದು. ಅಂಥಾ ಸಂದರ್ಭಗಳಲ್ಲಿ ರಾಜ್ಯ ಕೇಂದ್ರದಿಂದ ದೂರದಲ್ಲಿರುವ ವಿಭಾಗೀಯ ಪೀಠಾಧೀಶರೂ ಅನಿವಾರ್ಯವಾಗಿ ಕೇಂದ್ರ ನ್ಯಾಯಾ ಸ್ಥಾನಕ್ಕೆ ಪ್ರಯಾಣಿಸ ಬೇಕಾಗುತ್ತದೆ. ಇಂಥ ಸಮಗ್ರ ನ್ಯಾಯಾಧೀಶರ ಬೈಠಕ್ಕುಗಳು ಆಗಿಂದಾಗ್ಗೆ ಜರಗಬೇಕಾಗು ವಾಗ, ಅನಿವಾರ್ಯವಾದ ಪ್ರಯಾಣ ಖರ್ಚು, ಸೇವಾಕಾಲ ನಷ್ಟ ಮತ್ತು ನ್ಯಾಯ ತೀರ್ಮಾನದ ಕೆಲಸದಲ್ಲಿ ಉಂಟಾಗುವ ಅಡ್ಡಿ, ಆತಂಕ, ಅಡಚಣೆಗಳನ್ನು ಕ್ಷುಲ್ಲಕವೆಂದು ಅವಗಣಿಸಲು ಸಾಧ್ಯವಿಲ್ಲ. ನಿವೃತ್ತ ನ್ಯಾಯಾಧೀಶ ಮಾನ್ಯ ರಾಮಜೋಯಿಸರ ಮೇಲಿನ ಅಭಿಪ್ರಾಯ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ವ್ಯಕ್ತಪಡಿಸಿರುತ್ತಾರೆ.

ನ್ಯಾಯ ತೀರ್ಮಾನ ವ್ಯವಸ್ಥೆ, ಕೇವಲ ವಕೀಲರುಗಳ ಮತ್ತು ರಾಜಕೀಯ ಮುತ್ಸದ್ದಿ ಗಳಿಗೆ ಸೀಮಿತವಾದ ಕ್ಷೇತ್ರವಲ್ಲ. ಈ ವಿಚಾರ ದಲ್ಲಿ ಸಾಕಷ್ಟು ಆಸಕ್ತಿ ವಹಿಸಿ ಅಧ್ಯಯನ ನಡೆಯಿಸಿ ಸಮಗ್ರ ರಾಜ್ಯಕ್ಕೂ, ಹಾಗೂ ದೇಶಕ್ಕೂ ಹಿತವಾಗುವ ನಿರ್ಧಾರ ಕೈಗೊಳ್ಳು ವುದು ಸಾರ್ವಜನಿಕರ ಕರ್ತವ್ಯ. ಅಂತೆಯೇ ನ್ಯಾಯಾಲಯ ಸ್ಥಾಪನೆಯ ಊರು, ಅಥವಾ ಸ್ಥಾನ ನಿರ್ಣಯವು ಸ್ಥಳೀಯರಿಗೆ ಮಾತ್ರ ಮೀಸಲಾದ ವಿಷಯವಲ್ಲ. ಕರ್ನಾಟಕ ರಾಜ್ಯದ ಉತ್ತರ ವಲಯದಲ್ಲಿ ವಿಭಾಗೀಯ ಪೀಠ ಸ್ಥಾ ಪನೆಯಾಗಬೇಕೆಂಬ ಚಳುವಳಿ ನ್ಯಾಯವಾ ದುದೇ ಎಂಬುದನ್ನು ರಾಜ್ಯದ ಇತರೆಡೆಗಳ ಸಾರ್ವಜನಿಕರು ಕೂಡಾ ಗಹನವಾಗಿ ಚಿಂತಿಸ ತಕ್ಕದ್ದು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿ ಗಳು ಕೇವಲ ರಾಜಕೀಯ ನಿರ್ಧಾರ ತೆಗೆದು ಕೊಳ್ಳುವುದು ಸಾರ್ವಜನಿಕರಿಗೆ ಸಿಗುವ ದ್ರೋಹ. ಈ ವಿಚಾರದಲ್ಲಿ ಮೌನವಾಗಿರು ವುದು ರಾಜಕೀಯ ಪಕ್ಷಗಳ ಕರ್ತವ್ಯ ಚ್ಯುತಿ. ಇದನ್ನು ತಿಳಿಯಲು ಅನಾಸಕ್ತಿ ತಳೆಯುವುದು ನಮ್ಮೆಲ್ಲರ ನೈತಿಕ ಪತನ. ವಕೀಲ ಮುಂದಾಳು ಗಳ ನೇರ ಹಾಗೂ ಮೌನ ಪ್ರೇರಣೆಯಂತೆ ಸರಕಾರಿ ಕಟ್ಟಡಗಳಿಗೆ ಬೆಂಕಿ ಹಚ್ಚುವುದು ಬಲಾತ್ಕಾರಪೂರ್ವಕ ಸಾರಿಗೆ, ಸಂಪರ್ಕ ತಡೆ ಯುವುದು, ವ್ಯಾಪಾರ ವ್ಯವಹಾರ ಸ್ಥಗಿತಗೊಳಿಸಿ ''ಯಶಸ್ವಿ ಬಂದ್''-ಎಂದು ಪ್ರಕಟಿಸುವಂಥಾ ಸ್ವಾರ್ಥ ಪರ ಹಾಗೂ ಸಂಕುಚಿತ ಮನೋಭಾವ ಪ್ರೇರಿತ ಆಂದೋಲನದಿಂದ ನಾಡಿಗೇನು ಪ್ರಯೋಜನ? ವಿದ್ಯಾವಂತ ವಕೀಲರುಗಳು ಸಂಯಮ ತಳೆದು, ಅವಿಚ್ಛಿನ್ನ ರಾಜ್ಯ ಹಾಗೂ ದೇಶದ ಒಳಿತನ್ನು ದೃಷ್ಟಿಯಲ್ಲಿರಿಸಿಕೊಂಡು ಸಾರ್ವಜನಿಕ ಹಾಗೂ ಪ್ರಾಮಾಣಿಕ ನಿಷ್ಪಕ್ಷಪಾತ ಚರ್ಚೆ ನಡೆಯಿಸಿ ನ್ಯಾಯಯುತ ನಿರ್ಧಾರ ಕೈಗೊಳ್ಳಬೇಕಾದುದು ಅವರ ನೈತಿಕ ಕರ್ತವ್ಯ. ಕರ್ನಾಟಕ ರಾಜ್ಯ ಹಲವು ಭಾಷೆಗಳು, ವಿಭಿನ್ನ ಸಂಸ್ಕೃತಿಗಳ, ವಿವಿಧ ಜಾತಿ, ಮತ ಧರ್ಮಗಳನ್ನು ಅನುಸರಿಸುವ ಜನರ ಸ್ವಇಚ್ಛೆಯ ಸಂಯೋಜನೆ ಯಿಂದ ರೂಪತಳೆದ ಅತ್ಯಪೂರ್ವ ರಾಜಕೀಯ ಘಟಕ ವೆಂಬ ಸತ್ಯವನ್ನು ಮರೆಯದೆ, ಘಟಕಗಳ ಸಮತೋಲನೆಯನ್ನು ಕೆಡಿಸದೆ ಜಾಗ್ರತೆ ಯು ನಡೆಯನ್ನು ಸಾರ್ವಜನಿಕರು ನಿರೀಕ್ಷಿಸುತ್ತಾರೆ.'

ಹಂತಕನ ಜಾಡಲ್ಲಿ

ಮುಳಿಯ ರಾಘವಯ್ಯ
ನಂ.೪, ಸ್ವರ್ಣ ವಿಲಾಸ
೯೨೬, ೧ನೇ ಮುಖ್ಯರಸ್ತೆ
ಲಕ್ಷ್ಮೀಪುರ, ಮೈಸೂರು-೫೭೦ ೦೦೪

ಹಂತಕರನ್ನು ಕುರಿತಂತೆ ಅಂತಕನ ದೂತರೇ ಆಗಿರುವ ಆರಕ್ಷಕ ಶೋಧಕರಿಗೆ ಕಿಂಚಿತ್ತು ದಯವಿಲ್ಲ!

ಅತಿಯಾದ ರಕ್ತಸ್ರಾವದಿಂದ ಅಸು ನೀಗಲು ಜೀನ್ ಬೆಲ್ಲಿಸ್‌ಗೆ ಎಷ್ಟು ಸಮಯ ಬೇಕಾಗಿದ್ದಿರಬಹುದು? ತಿಳಿದವರಾರು ? ಇಂಗ್ಲೆಂಡ್‌ನ, ಬರ್ಮಿಂಗ್‌ಹ್ಯಾಂನಲ್ಲಿ ತನ್ನ ಮನೆಯ ಅಡುಗೆಕೋಣೆಯ ನೆಲದ ಮೇಲೆ ಒರಗಿದ್ದ ಅವಳ ಆರ್ತಮೊರೆಯನ್ನು ಕೇಳಿದವರಿಲ್ಲ. ಯಾರೇ ಆಗಲಿ, ಮನೆಯ ಗೇಟು ದಾಟಿ, ಹಿಂದಿನ ಕೈದೋಟವನ್ನು ಹಾಯ್ದು ಬಂದು ಕಿಟಕಿಯಿಂದ ಹಣಿಕಿ ನೋಡಿದ್ದರೂ ಅವಳನ್ನು ನೋಡಲು ಸಾಧ್ಯವಿರಲಿಲ್ಲ; ಯಾಕೆಂದರೆ ಕೊಲೆಗಡುಕ ಯುಕ್ತ ಮುಂಜಾಗ್ರತೆ ವಹಿಸಿ, ಅವಳು ಯಾರ ಕಣ್ಣಿಗೂ ಬೀಳದಂತೆ ಮರೆಮಾಡಿದ್ದ.

ನೆರೆಹೊರೆಯ ಯಾರೋ ಪುಣ್ಯಾತ್ಮರು ಮೃತ ಶರೀರವನ್ನು ಪತ್ತೆ ಹಚ್ಚುವಷ್ಟರಲ್ಲಿ ಒಂದು ವಾರವೇ ಕಳೆದಿತ್ತು. ಇಬ್ಬರು ಮಕ್ಕಳ ತಾಯಿ, ೩೮ ವಯಸ್ಸಿನ ಜೀನ್ ಬೆಲ್ಲಿಸಳ ಶರೀರ ಮೇಲಿದ್ದ ಐದು ಆಳವಾದ ಇರಿತಗಳಲ್ಲಿ -ಪ್ರಾಯಶಃ ಕತ್ತರಿಯಿಂದ ಮಾಡಲ್ಪಟ್ಟ- ಒಂದು ಮಾರಕವಾಗಿದ್ದಿರಬಹುದು ಎಂದು ಪೊಲೀಸ್ ರೋಗತಜ್ಞರ ಇತ್ಯರ್ಥವಾಗಿತ್ತು. ಮೈಮೇಲಿನ ಇನ್ನಿತರ ೨೧ ಗಾಯಗಳು ಹಾಗೂ ಕುತ್ತಿಗೆ ಹಿಚುಕಿದ ಗುರುತುಗಳು, ಬಹುಶಃ ಹಣಕಾಸು, ಆಭರಣ ಮತ್ತು ಇತರ ಅಮೂಲ್ಯ ವಸ್ತುಗಳನ್ನು ಬಚ್ಚಿಟ್ಟ ಇರವನ್ನು ತಿಳಿಸುವಂತೆ ಒತ್ತಾಯಿಸಲೋಸುಗ ಮಾಡಿದ ಚಿತ್ರಹಿಂಸೆಯ ಫಲವಾಗಿರಬಹುದು ಎಂದೂ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹಂತಕನು ಮನೆಯನ್ನು ಆಮೂಲಾಗ್ರ ಶೋಧಿಸಿ, ಅವಳನ್ನು ಹಜಾರದಿಂದ ಅಡುಗೆಮನೆಯವರೆಗೆ ಎಳೆದು ತಂದು ಕೆಡವಿಹಾಕಿ ಹೋಗುವಲ್ಲಿಯವರೆಗೂ ಅವಳು ಪ್ರಜ್ಞಾಹೀನಳಾಗಿದ್ದಿರಲಿಕ್ಕಿಲ್ಲ ಎಂದೂ ತರ್ಕಿಸಿದ್ದರು.

''ಇಷ್ಟೆಲ್ಲ ನಡೆದು ಎರಡು ವರ್ಷಗಳೇ ಕಳೆದಿದ್ದರೂ ಹಂತಕನನ್ನು ಇನ್ನೂ ಹಿಡಿಯಲಾಗಲಿಲ್ಲವಲ್ಲಾ''-ಎಂದು ಧೂಳು ಮುಸುಕಿದ ಪ್ರಕರಣದ ಕಡತವನ್ನು ಪರಿಶೀಲಿಸುತ್ತಾ ಡಿಟೆಕ್ಟಿವ್ ಚೀಫ್ ಇನ್ಸ್‌ಪೆಕ್ಟರ್ ಬಾಬ್ ಪೂಲ್ ಯೋಚಿಸುತ್ತಿದ್ದ. ಸಾಧಾರಣವಾಗಿ ಅವನ ಕಛೇರಿ ಯಾವಾಗಲೂ ಸುವ್ಯವಸ್ಥಿತ ರೀತಿಯಲ್ಲಿರುತ್ತಿತ್ತು. ಆದರೆ ಇಂದು ಕಡತ ದೊಳಗಿಂದ ಚೆಲ್ಲಿದ್ದ ಕಾಗದಪತ್ರಗಳು ಮತ್ತು ಚಿತ್ರಗಳು ನೆಲದ ಮೇಲೆಲ್ಲಾ ಚೆಲ್ಲಾಪಿಲ್ಲಿಯಾಗಿ ಹರಡಿದ್ದುವು. ಕಡತದೊಳಗೆ ೧೮೦ ದಾಖಲೆಗಳಿದ್ದವು. ಅವೆಲ್ಲವನ್ನೂ ಆಮೂಲಾಗ್ರ ಪರಿಶೀಲಿಸಲು ತಿಂಗಳುಗಟ್ಟಲೆ ಬೇಕಾಗಬಹುದು ಎಂದು ಪೂಲ್ ಚಿಂತಿಸುತ್ತಿದ್ದ.

ಏಪ್ರಿಲ್ ೧೯೯೩ರಲ್ಲಿ ಈ ಕೊಲೆಯು ನಡೆದಾಗ ಪೊಲೀಸ್ ಠಾಣೆಯಲ್ಲಿ ಎಲ್ಲರಂತೆ, ೪೮ವಯಸ್ಸಿನ ಪೂಲ್ ಸಹ ಹತ್ಯೆಯ ಹಿಂದಿನ ಕ್ರೌರ್ಯವನ್ನು ನೋಡಿ ತಲ್ಲಣಗೊಂಡಿದ್ದ.

ಜುಲೈ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪೀಟರ್ ಮೂಲ್‌ರಿಕ್ ಅವರ 'ಟು ಕ್ಯಾಚ್ ಎ ಕಿಲ್ಲರ್' ಎಂಬ ಲೇಖನದ ಅನುವಾದ

೪೦ ಜನ ಪೊಲೀಸರು ಶೋಧನೆಯಲ್ಲಿ ತೊಡಗಿದ್ದರೂ ಕೊಲೆಗಾರ ಇನ್ನೂ ಮುಕ್ತನಾಗಿಯೇ ಇದ್ದ!

ಈಗ, ಎರಡು ವರ್ಷಗಳ ಅನಂತರ, ಕೊಲೆಪ್ರಕರಣದ ಪತ್ತೆಯ ಜವಾಬ್ದಾರಿ ಪೂಲ್‌ನ ಅಧೀನಕ್ಕೆ ರವಾನಿಸಿಲ್ಪಟ್ಟಿದೆ. ಜಟಿಲವಾದ ಈ ಸಮಸ್ಯೆಯನ್ನು ಅವನು ಪರಿಹರಿಸುವನೆಂಬ ನಂಬಿಕೆಯಂತೂ ಯಾರಿಗೂ ಇರಲಿಲ್ಲ. ಆದರೂ ದಾಖಲೆಗಳನ್ನು ನೋಡುತ್ತ ಹೋದಂತೆ ತನಗೇ ಅರಿವಿಲ್ಲದಂತೆ ಸಮಸ್ಯೆಯ ಒಳಕ್ಕೆ ಅವನು ಆಕರ್ಷಿಸಲ್ಪಟ್ಟ.

ಇದುವರೆಗೆ ಆರು ಜನ ಸಂಶಯಾಸ್ಪದ ವ್ಯಕ್ತಿಗಳ ಬಂಧನವೇನೋ ಆಗಿತ್ತು. ಆದರೆ ಅವರೆಲ್ಲರಿಗೂ ಅಭೇದ್ಯವಾದ ಸ್ಥಳಾಂತರನೆಪ ಇದ್ದುದರಿಂದ ಅಪರಾಧ ಸಾಬೀತಾಗದೆ ಬಿಡುಗಡೆಯಾಗಿದ್ದರು. ಅವರಲ್ಲಿ ೨೫ ರ ಪೀಟರ್ ಹೇಸ್ಟಿಂಗ್ಸ್ ಎಂಬುವನ ವಿರುದ್ಧ ಸಾಕಷ್ಟು ಪುರಾವೆಗಳಿದ್ದುವು. ಅವನಿಗೆ ಕೊಲೆಯಾದವಳ ಪರಿಚಯ ಚೆನ್ನಾಗಿ ಇತ್ತು. ಅವಳ ಉಂಗುರಗಳನ್ನು ಕೆಲವು ಶಾಲಾ ವಿದ್ಯಾರ್ಥಿಗಳಿಗೆ ಮಾರಲು ಯತ್ನಿಸುತ್ತ, ಜೀನ್ ಬೆಲ್ಲಿಸಳನ್ನು ತಾನು ''ಇರಿದಿದ್ದೆ'' ಎಂದು ಅವರ ಮುಂದೆ ಬಡಾಯಿ ಕೊಚ್ಚಿಕೊಂಡದ್ದನ್ನು ಕೇಳಿದವರಿದ್ದರು. ಅಷ್ಟು ಮಾತ್ರವಲ್ಲ, ಜೀನಳದ್ದೇ ಎನ್ನಬಹುದಾಗಿದ್ದ ಕೂದಲು ಸಿಕ್ಕಿಕೊಂಡಿದ್ದ ಒಂದು ಸೊಂಟಪಟ್ಟಿಯನ್ನು ಕೂಡ ಅವನು ಬೇಲಿಯಿಂದಾಚೆಗೆ ಎಸೆಯುವುದನ್ನು ಕಂಡವರಿದ್ದರು.

ರೋಚಕ ಕತೆಗಳನ್ನು ಹೆಣೆಯುವುದರಲ್ಲಿ ಹೇಸ್ಟಿಂಗ್ಸ್ ನಿಸ್ಸೀಮ ಎನ್ನುವುದು ಎಲ್ಲರಿಗೂ ತಿಳಿದಿತ್ತು. ಸುತ್ತಲೂ ಎಳೆಯರ ಗುಂಪನ್ನು ಸೇರಿಸಿಕೊಂಡು, ತಾನು ಹಲವಾರು ಕುಖ್ಯಾತ ಕೊಲೆಗಾರರ ಸಂಬಂಧಿಕ ಎಂದು ಕಟ್ಟುಗತೆ ಹಬ್ಬಿಸುವುದು ಅವನ ಹವ್ಯಾಸವಾಗಿತ್ತು. ವಾಸ್ತವವಾಗಿ ಅವನೊಬ್ಬ ಚಿಕ್ಕಪುಟ್ಟ ಕಳ್ಳತನಗಳಿಗಾಗಿ ೧೯ ಬಾರಿ ಜೈಲುವಾಸ ಮಾಡಿ ಬಂದಿದ್ದ ಚೋರ ಅಷ್ಟೆ.

ಹೆಚ್ಚಿನ ಅಂಶ ಕೊಲೆ ನಡೆದಿರಬಹುದೆಂದು ಪೊಲೀಸ್ ರೋಗತಜ್ಞರು ಊಹಿಸಿದ್ದ ಏಪ್ರಿಲ್ ೯,೧೦ರಂದು ಹೇಸ್ಟಿಂಗ್ಸನು ತೋರ್ಕೆ ಎನ್ನುವ ದೂರದ ಊರಲ್ಲಿ ನೂರಾರು ಜನ ಸಾಕ್ಷಿಗಳ ಸಮ್ಮುಖದಲ್ಲಿದ್ದುದು ಅವನನ್ನು ಕೊಲೆಗಾರನೆಂದು ಪ್ರಮಾಣೀಕರಿಸಲು ಮುಖ್ಯವಾದ ಆತಂಕವಾಗಿತ್ತು. ಏಪ್ರಿಲ್ ೧೨ರ ತನಕ ಅವನು ಬರ್ಮಿಂಗ್‌ಹ್ಯಾಮಿಗೆ ಹಿಂದಿರುಗಿರಲಿಲ್ಲ. ಸ್ವತಃ ಜೀನಳು ಅವನ್ನು ಮಾರಾಟ ಮಾಡಲಿಕ್ಕಾಗಿ ತನಗೆ ಮಾರ್ಚ್ ತಿಂಗಳ ಮೊದಲ ದಿನಗಳಲ್ಲೇ ಉಂಗುರಗಳನ್ನು ಕೊಟ್ಟಿದ್ದಳು ಎಂದು ಅವನು ಸಾಧಿಸಿದ್ದ.

ಕಡತವನ್ನು ಆಸಕ್ತಿಯಿಂದ ಪರೀಕ್ಷಿಸುತ್ತಿದ್ದ ಪೂಲ್‌ಗೆ ಸಮಯ ಹೋದದ್ದೇ ಅರಿವಾಗಲಿಲ್ಲ. ಆಗಲೇ ಮಧ್ಯರಾತ್ರಿ ಕಳೆದಿತ್ತು. ಮೇಜಿನ ಮೇಲಿದ್ದ ಕಡತದಿಂದ ತಲೆಎತ್ತಿ ಪೂಲ್ ಸುತ್ತ್ತಲೂ ದೃಷ್ಟಿ ಹಾಯಿಸಿದ. ಪ್ರಪಂಚದ್ಯಂತ ಅವನಿಗೆ ದೊರಕಿದ ಪ್ರಶಸ್ತಿ ಪತ್ರಗಳು, ನೆನಪಿನ ಕಾಣಿಕೆಗಳು ಗೋಡೆಗಳನ್ನಲಂಕರಿಸಿದ್ದುವು. ಅಪರಿಹಾರ್ಯ ಪ್ರಕರಣಗಳನ್ನು ಬಗೆಹರಿಸುದರಲ್ಲಿ ನಿಷ್ಣಾತ ಎನ್ನುವ ಖ್ಯಾತಿ ಅವನದಾಗಿತ್ತು. ಆದರೂ ಪ್ರಸ್ತುತ ಸಮಸ್ಯೆ ಕಬ್ಬಿಣದ ಕಡಲೆಯೇ ಎಂಬುದನ್ನು ಪೂಲ್ ಮನಗಂಡಿದ್ದ.

ಎರಡು ವರ್ಷಗಳಾದ ಮೇಲೆ, ಈಗ ಪ್ರಕರಣ ಎಷ್ಟು ಹಳಸಿತ್ತೆಂದರೆ- ಆರಡಿ ಎರಡು ಅಂಗುಲದ, ಕೆಂಬಣ್ಣದ ಚಹರೆಯ, ಭೀಮಕಾಯದ ಪೂಲ್‌ನ ಸಹಾಯಕ್ಕೆ ಕೇವಲ

ಇಬ್ಬರನ್ನು ಆಯ್ದುಕೊಳ್ಳಲು ಅವಕಾಶ ಕೊಡಲಾಗಿತ್ತು. ಹತ್ಯೆಗೆ ಸಂಬಂಧಿಸಿದ ಸಾಕ್ಷಿವಸ್ತುಗಳ ನಿಯಂತ್ರಕ ''ಕ್ರಿಸ್ ಪ್ರಯರ್'' ಹಾಗೂ ಮೃತಳ ಪರಿವಾರದ ಸಂಪರ್ಕಾಧಿಕಾರಿಯಾಗಿದ್ದ ''ಜೋ ಗೌಫ್'' ಎಂಬ ಇಬ್ಬರನ್ನು ತನ್ನ ಸಹಾಯಕ್ಕೆ ಪೂಲ್ ಆಯ್ದುಕೊಂಡ.

ವೃಥಾ ಸಮಯಗಳೆಯದೆ ಅವರು ಶೋಧನೆಯ ಕೆಲಸಕ್ಕನುವಾದರು. ಪ್ರಾರಂಭದ ಹೆಜ್ಜೆ. ಪ್ರಕರಣದ ವಿಪುಲವಾದ ದಾಖಲೆಗಳನ್ನು ಅಭ್ಯಸಿಸುವುದು ಹಾಗೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದಾಗಿತ್ತು. ತಂಡದ ಮೂವರಿಗೂ ತಮ್ಮತಮ್ಮ ಇತರ ಕರ್ತವ್ಯಗಳ ನಡುವೆ ಇದಕ್ಕಾಗಿ ಕಾಲಾವಕಾಶ ಮಾಡಿಕೊಳ್ಳಬೇಕಾಗುತ್ತಿತ್ತು. ಸಮಸ್ಯೆಯ ಸಮಾಧಾನ ಆ ದಾಖಲೆಗಳ ಕಟ್ಟಿನಲ್ಲೆಲ್ಲೋ ಅಡಗಿದೆ ಎಂದು ಪೂಲ್ ದೃಢವಾಗಿ ನಂಬಿದ್ದ.

ಆಗಾಗ ಪೂಲ್ ಹೇಳುತ್ತಿದ್ದ-''ಕೊಲೆ ವಿಚಾರಣೆ ಒಂದು ಚಿತ್ರಬಂಧ ಇದ್ದ ಹಾಗೆ. ಅದರ ಒಂದು ತುಂಡು ಸ್ಥಾನಪಲ್ಲಟವಾದರೂ ಇಡೀ ಚಿತ್ರವೇ ಬದಲಾಗಬಹುದು. ಕೆಲವೊಮ್ಮೆ ಸಮಸ್ಯೆಯ ತುಂಡುಗಳನ್ನು ಮೇಲ್ನೋಟಕ್ಕೆ ಅಸಂಬದ್ಧವೇ ಎನ್ನುವ ರೀತಿಯಲ್ಲಿ ಪುನಃ ಜೋಡಿಸಬೇಕಾಗಬಹುದು. ಯಾಕೆಂದರೆ, ಕೊಲೆಗೆ ಎಂದಾದರೂ ಅರ್ಥ ಉಂಟೇ ?

ಜೇನ್ ಬೆಲ್ಲಿಸ್ ಸಾಕಷ್ಟು ಜನಪ್ರಿಯಳಾಗಿದ್ದಳು. ಅನುರಾಗಾಸಕ್ತಳಾಗಿದ್ದರೂ ಅವಳ ಪ್ರೇಮ ಸಂಬಂಧಗಳ ಚರಿತ್ರೆ ಸುಖಕರವಾಗಿರಲಿಲ್ಲ. ೩೪ರ ವಯಸ್ಸಿನಲ್ಲಿ ಅವಳು ಮದುವೆಯಾಗುವಷ್ಟರಲ್ಲಿ ಆಗಲೇ ಇಬ್ಬರು ಮಕ್ಕಳ ತಾಯಿಯಾಗಿದ್ದಳು (ಗಂಡ) ಸ್ಟೀಫನ್ ಬೆಲ್ಲಿಸ್‌ನೊಡನೆ ಅವಳ ವೈವಾಹಿಕ ಸಂಬಂಧ ಒಂದೂಕಾಲು ವರ್ಷದೊಳಗೆಯೇ ಹದಗೆಟ್ಟಿತು. ಕಂದುಬಣ್ಣದ , ನೀಳಗೂದಲಿನ, ತೆಳುಗಾತ್ರದ ಚೆಲುವೆ, ಜೇನ್‌ನ ಪರಿಚಯವಿದ್ದ ಒಬ್ಬ ಪೊಲೀಸನವನು - ಪುರುಷರು ಅವಳೆಡೆಗೆ ಸಹಜವಾಗಿ ಆಕರ್ಷಿತರಾದರೂ, ಅವಳು ಇಷ್ಟಪಡುತ್ತಿದ್ದುದು ಅನಪೇಕ್ಷಣೀಯ ಪುರುಷರನ್ನೇ'' ಎಂದು ಅವಳ ಬೇಕುಬೇಡಗಳನ್ನು ಬಣ್ಣಿಸಿದ.

ಪೀಟರ್ ಹೇಸ್ಟಿಂಗ್ಸ್ ಅಂತಹ ಪುರುಷರಲ್ಲಿ ಒಬ್ಬನಾಗಿದ್ದ. ಶಾಲಾದಿನಗಳಲ್ಲಿ ಸಹಪಾಠಿಯಾದ ಜೇನ್‌ನ ಮಗಳು ರ್ಹೋಂಡಾಳೊಡನೆ ಅವನು ಗೆಳೆತನ ಬೆಳೆಸಿದ್ದ. ತನ್ನಿಂದ ತುಂಬಾ ಎಳೆಯರೊಡನೆ ಅವನ್ನು ಹೆಚ್ಚಾಗಿ ಬೆರೆಯುತ್ತಿದ್ದ ರೀತಿಯನ್ನು ನೋಡಿ ರ್ಹೋಂಡಾ ಆಶ್ಚರ್ಯ ಪಡುತ್ತಿದ್ದಳು. ಒರಟಾದ ಅವನ ಪಾದರಕ್ಷೆಗಳನ್ನು ಹೇಸ್ಟಿಂಗ್ಸ್ ಹೊಳಪಿಸುವುದರಲ್ಲಿ ತೆಗೆದುಕೊಳ್ಳುತ್ತಿದ್ದ ಆಸ್ಥೆಯನ್ನು ಕಂಡು ನಗುತ್ತಿದ್ದಳು. ತನ್ನ ಬಾಹ್ಯರೂಪದ ಕುರಿತು ಹೇಸ್ಟಿಂಗ್ಸ್ ತುಂಬ ಕಾಳಜಿವಹಿಸುತ್ತಿದ್ದ. ಕೊಳವೆಯಾಕಾರದ ''ಜೀನ್ಸ್'' ಪ್ಯಾಂಟ್ ಮತ್ತು ಬಿಳಿ ಕಾಲುಚೀಲಗಳನ್ನು ತಪ್ಪದೇ ಧರಿಸಿಕೊಳ್ಳುವುದು ಅವನ ದಿನಚರಿಯಾಗಿತ್ತು. ಪ್ರತಿದಿನವೂ ಹೊಳಪಿಸಿ ಹಾಕಿಕೊಳ್ಳುತ್ತಿದ್ದ ಒರಟು ಪಾದರಕ್ಷೆಗಳು ಅವನ ಹೆಮ್ಮೆಯ ಆಸ್ತಿಯಾಗಿದ್ದುವು.

ಜೇನಳ ವಿವಾಹವು ಮುರಿಯುವಷ್ಟರಲ್ಲಿ ೧೭ ವರ್ಷ ರ್ಹೋಂಡಾ ಮತ್ತು ಅವಳಿಂದ ಎರಡು ವರ್ಷಕ್ಕೆ ಹಿರಿಯಾಳಾದ ಅಕ್ಕ ವಾನೆಸ್ಸಾ, ಇಬ್ಬರೂ ತಾಯಿಯನ್ನು ಏಕಾಂಗಿಯಾಗಿಯನ್ನಾಗಿಸಿ ಮನೆಯನ್ನು ತೊರೆದು ಹೋಗಿದ್ದರು. ಒಂದು ದಿನ ರ್ಹೋಂಡಾಳನ್ನರಸಿ, ಅವಳ ಗೆಳೆಯರಲ್ಲೊಬ್ಬನಾಗಿದ್ದ ಪೀಟರ್ ಹೇಸ್ಟಿಂಗ್ಸ್‌ನಿಂದ ಒಂದು ಪತ್ರ ಬಂತು. ಪತ್ರದ ಮೇಲೆ ಇದ್ದ ಗುರುತು ''ಸಾರ್ವಭೌಮರ ಕಾರಾಗೃಹ''.

ಪತ್ರದಲ್ಲಿ ಜೇನಳ ಕುರಿತಾದ ವಿಚಾರಣೆಯೂ ಇತ್ತು. ಪತ್ರಕ್ಕೆ ಅವಳು ಉತ್ತರ ಬರೆದಳು. ಹೇಸ್ಟಿಂಗ್ಸ್‌ನ ಬಿಡುಗಡೆಯಾದನಂತರವೂ ಅವರಿಬ್ಬರ ಸಂಬಂಧ ಮುಂದುವರಿಯಿತು. ಹೇಸ್ಟಿಂಗ್ಸ್ ಕ್ರಮವಾಗಿ ಅವಳ ಮನೆಗೆ ಬಂದಹೋಗುವುದು ಸಾಮಾನ್ಯವಾಯಿತು.

ಸಂಶಯಾಸ್ಪದರಾಗಿದ್ದ ಆರೂ ಮಂದಿಯ ವಿಷಯವಾದ ದಾಖಲೆಗಳನ್ನು- ಅವರ ಪೂರ್ವಾಪರಗಳನ್ನು ಸ್ಥಳಾಂತರ ನೆಪಗಳನ್ನು ಇತ್ಯಾದಿ -ಕೂಲಂಕಷವಾಗಿ ಪರಿಶೀಲಿಸಿದ ಬಳಿಕ ಪೂಲ್ ಮತ್ತು ಸಂಗಡಿಗರು, ಎಲ್ಲರಿಗಿಂತ ಹೆಚ್ಚು ಸಂಶಕ್ಕೊಳಗಾಗುವವನು ಪೀಟರ್ ಹೇಸ್ಟಿಂಗ್ಸ್ ಮಾತ್ರ ಎಂಬ ನಿರ್ಧಾರಕ್ಕೆ ಬಂದರು. ''ಅವನ ವಿಷಯದಲ್ಲಿ ಏನೋ ಸರಿಯಿಲ್ಲ. ತೋರ್ಕ್ವೇ ಎಂಬಲ್ಲಿನ ಡಿಸ್ಕೋವಿ ನಲ್ಲಿ ಅವನು ಏಪ್ರಿಲ್ ಮತ್ತು ೧೦ರಂದು ಔತಣಕೂಟದಲ್ಲಿ ಭಾಗವಹಿಸಿದ್ದೇನೋ ನಿಜ.ಆ ಸ್ಥಳಾಂತರ ನೆಪದುರ್ಭೇದ್ಯ'' ಎಂದು ಪೂಲ್ ಅರಿತಿದ್ದ., ಹೇಸ್ಟಿಂಗ್ಸ್‌ನ್ನು ಒಮ್ಮೆ ಬಂಧಿಸಿ, ಸಾಕಷ್ಟು ರುಜುವಾತಿಲ್ಲದ ಕಾರಣ ಬಿಡುಗಡೆ ಮಾಡಲಾಗಿತ್ತು. ಅವನನ್ನು ಮತ್ತೊಮ್ಮೆ ಬಂಧಿಸಿ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲು ಬಹಳಷ್ಟು ಹೊಸ ಪುರಾವೆಗಳನ್ನು ಒದಗಿಸಬೇಕೆಂದು ಪ್ರಾಸಿಕ್ಯೂಟರು ಕೇಳುವುದು ಕಂಡಿತ ಎಂದು ತನ್ನ ೨೮ ವರ್ಷಗಳ ಪೊಲೀಸ್ ಅನುಭವದಿಂದ ಪೂಲ್ ಚೆನ್ನಾಗಿ ಮನಗಂಡಿದ್ದ.

ಆದುದರಿಂದ ಹೇಸ್ಟಿಂಗ್ಸನ್ನು ಬಿಡುಗಡೆ ಮಾಡಲು ಕಾರಣವೇನಿತ್ತು ಎನ್ನುವುದನ್ನು ಅಭ್ಯಸಿಸಲು ಆರಂಭಿಸಿದ. ಪ್ರಥಮತಃ ಪೊಲೀಸರು ಹೇಸ್ಟಿಂಗ್ಸ್‌ನ ಮೇಲೆ ಸಂಶಯಪಡಲು ಕಾರಣ-ಬೆಲ್ಟಿನಲ್ಲಿ ಸಿಕ್ಕಿಕೊಂಡಿದ್ದ ಕೂದಲು ಮತ್ತು ಅವನ ಪಾದರಕ್ಷೆಗಳ ಮೇಲಿದ್ದ ರಕ್ತದ ಗುರುತುಗಳು. ಆದರೆ ಆ ಕೂದಲು ಮತ್ತು ರಕ್ತ ಜೇನಳದ್ದೇ ಎಂಬುದು ಮೊದಲು ಸಂಶಯಕ್ಕೆಡೆಬಾರದಂತೆ ಸಾಬೀತಾಗಬೇಕಾಗಿತ್ತು. ಹೇಸ್ಟಿಂಗ್ಸ್ ತನ್ನ ಪಾದರಕ್ಷೆಗಳ ಮೇಲೆ ಹಲವು ಪದರ ಪಾಲಿಷ್ ಮೆತ್ತಿದ್ದು ಇದಕ್ಕೆ ಅಡ್ಡಿಯಾಗಿತ್ತು. ಅದೇ ಹೊಸತಾಗಿ ಉಪಯೋಗಕ್ಕೆ ಬರುತ್ತಿದ್ದ ''ಡಿ.ಎನ್.ಎ.'' ವಿಶ್ಲೇಷಣ ತಂತ್ರಕ್ಕೆ ಮೊರೆಹೊಕ್ಕರೂ ಇದಮಿತ್ಥಂ ಎನ್ನುವ ಇತ್ಯರ್ಥಕ್ಕೆ ಬರಲಾಗಲಿಲ್ಲ. ಕೊಲೆ ನಡೆದ ವೇಳೆ ಬೇರೆಡೆಯಲ್ಲಿ ಇದ್ದ ಎನ್ನುವ ವಿಷಯವೂ ಸೇರಿದಂತೆ ಪುರಾವೆಗಳೆಲ್ಲಾ ಹೇಸ್ಟಿಂಗ್ಸನ ಪರವಾಗಿದ್ದುದರಿಂದ ಅವನನ್ನು ಬಂಧನದಿಂದ ಬಿಡುಗಡೆ ಮಾಡದೆ ಅನ್ಯ ವಿಧಿಯಿರಲಿಲ್ಲ.

ಆಗ ಪೂಲ್‌ಗೆ ಒಂದು ಯೋಚನೆ ಹೊಳೆಯಿತು. ಈಗ ೧೯೯೬. ಹತ್ಯಾಕಾಂಡ ನಡೆದು ವರ್ಷ ಮೂರು ಕಳೆದಿದೆ. ''ನ್ಯಾಯವಿಜ್ಞಾನ'' ಈ ಮೂರು ವರ್ಷಗಳಲ್ಲಿ ಆಶ್ಚರ್ಯಕರವಾದ ಮುನ್ನಡೆ ಸಾಧಿಸಿತ್ತು. ಕೂದಲು, ರಕ್ತದ ಕಲೆ ಮತ್ತು ಕೊಲೆಯ ಸ್ಥಳದಲ್ಲಿ ದೊರೆತ ಕೆಲವು ಸಿಗರೇಟ್ ತುಂಡುಗಳ ವಿಶ್ಲೇಷಣೆಗೆ ೧೯೯೩ರಲ್ಲಿ ಬಳಸಲಾದ ವಿಧಾನ ಬಹಳ ಸರಳವಾಗಿತ್ತು. ಅದರಲ್ಲಿ ವಿಶ್ವಾಸದಾಯಕವಾದ ಫಲ ದೊರಕಲು ವಿಶ್ಲೇಷಿಸಲ್ಪಡುವ ವಸ್ತುಗಳು (ಕೂದಲು, ರಕ್ತ ಇತ್ಯಾದಿ) ಇದ್ದುದಕ್ಕಿಂತ ಅಧಿಕ ಪ್ರಮಾಣದಲ್ಲಿ ಬೇಕಿದ್ದುವು. ಆದರೆ ಇಂದಿನ ಅತ್ಯಾಧುನಿಕ ಡಿ.ಎನ್.ಎ. ತಂತ್ರ ಅಪೇಕ್ಷಿತ ಫಲ ಕೊಡಬಹುದೇ?

ಹೇಸ್ಟಿಂಗ್ಸನ ಬಟ್ಟೆಗಳು ವಿಶ್ಲೇಷಣಕ್ಕೆ ಕಳುಹಲ್ಪಟ್ಟ ಅಪರಾಧ ಪ್ರಯೋಗಾಲಯವನ್ನು ಪೂಲ್ ಟೆಲಿಫೋನ್ ಮೂಲಕ ಸಂಪರ್ಕಿಸಿದ. ಆದರೆ ಅಲ್ಲಿನ ಸಿಬ್ಬಂದಿವರ್ಗದಿಂದ ವಿಶೇಷ ಸಹಕಾರ ದೊರೆಯಲಿಲ್ಲ. ಟೆಲಿಫೋನ್

ಕೆಳಗಿಡುತ್ತಾ ತನ್ನ ಸಂಗಡಿಗರಿಗೆ ತಿಳಿಸಿದ- ''ಪ್ರಯೋಜನವಿಲ್ಲ. ೧೯೯೪ರಲ್ಲೇ ಹೇಸ್ಟಿಂಗ್ಸ್‌ನ ವಕೀಲರು ಅವನ ಬಟ್ಟೆಗಳನ್ನು ಹಿಂದಕ್ಕೆ ಪಡೆದು ಕೊಂಡಿದ್ದಾರಂತೆ.''

ಅದಕ್ಕೆ ಥಟ್ಟನೇ ಪ್ಲೈಯರ್ ಮಾರ್ನುಡಿದ- ''ಅದು ಹೇಗೆ ಸಾಧ್ಯ ? ಪಾದರಕ್ಷೆಗಳನ್ನು ಹಿಂದಿರುಗಿಸಲು ನಾನು ಬಿಡಲಿಲ್ಲವಲ್ಲಾ ! ನನಗೆ ನೆನಪಿದೆ. ಅವುಗಳ ಮೇಲಿದ್ದ ರಕ್ತದ ಕಲೆಗಳಿಗೆ ವಿಶೇಷ ಮಹತ್ವವಿರಲೇಬೇಕು ಎಂದು ನಮಗೆ ಅಂದೇ ಅನಿಸಿತ್ತು.''

ನಿಜವಾಗಲೂ, ಪಾದರಕ್ಷೆಗಳು ಇನ್ನೂ ಪ್ರಯೋಗಾಲಯದಲ್ಲೇ ಇದ್ದುವು. ಬರ್ಮಿಂಗ್ ಹ್ಯಾಮಿನ ಅಪರಾಧ ಪ್ರಯೋಗಾಲಯದ ಡೇವ್ ಲಾಕ್ಸ್ಲಿ ಎನ್ನುವ ತಜ್ಞನನ್ನು ಪೂಲ್ ಸಂಪರ್ಕಿಸಿದ. ಪ್ರಯೋಗಾಲಯದೊಳಕ್ಕೆ ಕಾಲಿಡುತ್ತಿದ್ದಂತೆಯೇ ಲಾಕ್ಸ್ಲಿ ಉದ್ಗರಿಸಿದ ''ಇಲ್ನೋಡು, ಬಾ.'' ಒಳಬಂದ ಪತ್ತೇದಾರ ನಿಗೆಪೂಲ್) ತನ್ನ ಅತಿನವೀನ ''ಆಟಿಗೆ' ಯನ್ನು-ಹೊಸತಾದೊಂದು ಶಕ್ತಿಯುತ ಸೂಕ್ಷ್ಮದರ್ಶಕ-ತೋರಿಸಿದ ಲಾಕ್ ಸ್ಲಿಯ ದನಿಯಲ್ಲಿ ಹಿಗ್ಗಿದ ಬಾಲಕನ ಉತ್ಸಾಹ ಎದ್ದು ಕಾಣುತ್ತಿತ್ತು. ಹೇಸ್ಟಿಂಗ್ಸನ ಪಾದರಕ್ಷೆಯನ್ನು ಆ ಸೂಕ್ಷ್ಮದರ್ಶಕದ ಮೂಲಕ ಪರೀಕ್ಷಿಸಿದಾಗ- ಅದೋ ಅಲ್ಲಿ ರಕ್ತದ ಕಲೆಗಳು!. ಉಪಕರಣದ ಮಸೂರದ ಮೂಲಕ ದೃಷ್ಟಿಹಾಯಿಸಿದ ಪೂಲ್ ಒಮ್ಮೆಲೆ ಉದ್ಗಾರ ವೆತ್ತಿದ ''ಓ! ಇವು (ಕಲೆಗಳು) ದೈತ್ಯ ಬಂಡೆಗಳಂತಿವೆಯಲ್ಲಾ!''

''ಪಾದರಕ್ಷೆಯ ಮೇಲಿಂದ ಕಲೆಯನ್ನು ಮೇಲೆತ್ತುವುದು ಖಂಡಿತ ಸಾಧ್ಯವಿದ್ದರೂ ಅವುಗಳ ಮೇಲೆ ಹಲವು ಪದರಗಳಷ್ಟು ಪಾಲಿಷ್ ಇವೆ ಎನ್ನುವುದನ್ನು ಮರೆಯಬೇಡ'' ಎಂದು ಲಾಕ್ಸ್ಲಿ ಮುನ್ನೆಚ್ಚರಿಕೆಯಿತ್ತ.

ವೆದರ್‌ಬಿ ಎನ್ನುವಲ್ಲಿರುವ ವಿಶೇಷ ಪ್ರಯೋಗಾಲಯಕ್ಕೆ ಪಾದರಕ್ಷೆಗಳನ್ನು ಕಳುಹಿಸಲಾಯಿತು. ಅಲ್ಲಿ ರಕ್ತದ ಕಲೆಗಳಂತ ''ಜೀವಂತ'' ಮಾದರಿಗಳ ಮೇಲೆ ಅತ್ಯಾಧುನಿಕ ರೀತಿಯ ಡಿ.ಎನ್.ಎ. ತುಲನಾ ಪರೀಕ್ಷೆಯನ್ನು ಮಾಡುವ ಸೌಕರ್ಯವಿತ್ತು. ಇದಕ್ಕೆ ''ಹ್ರಸ್ವ ಸರದಿಯ ಪುನರಾವರ್ತಕಗಳು'' ಎಂದು ಹೆಸರು. ಈ ಹ್ರಸ್ವ ಸರದಿಯ ಪುನರಾವರ್ತಕಗಳು ಪ್ರತಿಯೊಬ್ಬನ ಜೀನುಗಳ ಪ್ರತ್ಯೇಕತೆಗೆ ತಳಹದಿಯಾಗಿವೆ. ಆವರ್ತಕಗಳ ಸಂಖ್ಯೆ ಪ್ರತಿಯೊಬ್ಬರಲ್ಲೂ ಭಿನ್ನವಾಗಿರುತ್ತದೆ.

ಪರೀಕ್ಷೆಯ ಫಲಿತಾಂಶಗಳು ಬರಬೇಕಿತ್ತಷ್ಟೆ. ಸದ್ಯ ಅವುಗಳಿಗೆ ಕಾಯುವುದಷ್ಟನ್ನು ಮಾತ್ರ ಪೂಲ್ ಮಾಡಬಹುದಿತ್ತು. ಇಷ್ಟು ಮಾತ್ರ ಪುರಾವೆ ಸಾಕಾಗಬಹುದೇ? ಇದು ಅವನ ಮುಂದಿದ್ದ ಯಕ್ಷಪ್ರಶ್ನೆ. ಅವನು ಪೊಲೀಸ್ ಠಾಣೆಯ ತುಂಬಿದ್ದ ''ವಸ್ತು ಭಂಡಾರ''ಕ್ಕೆ ತೆರಳಿದ. ಹೇಸ್ಟಿಂಗ್ಸನ ವಕೀಲರು ಅವನ ಬಟ್ಟೆಬರೆಗಳಲ್ಲಿ ಹೆಚ್ಚಿನವನ್ನು ತಮ್ಮ ವಶಕ್ಕೆ ಪುನಃ ತೆಗೆದು ಕೊಂಡದ್ದೇನೋ ನಿಜ. ಆದರೆ ಅವನ ಬೆಲ್ಟು ಮಾತ್ರ ಇನ್ನೂ ಅಲ್ಲಿಯೇ ಉಳಿದಿತ್ತು. ಮಾತ್ರವಲ್ಲ; ಅದರಲ್ಲಿ ಸಿಕ್ಕಿಹಾಕಿಕೊಂಡಿದ್ದ ಕೂದಲೆಳೆ ಕೂಡ ಸುರಕ್ಷಿತವಾಗಿ ಇಡಲ್ಪಟ್ಟಿತ್ತು.

ಆತುರದಿಂದ ಪೂಲ್ ಬೆಲ್ಟನ್ನು ಲಾಕ್ಸ್ಲಿಯ ಬಳಿ ಕೊಂಡೊಯ್ದ. ಆದರೆ ಅವನಿಗೆ ಅಲ್ಲಿ ನಿರಾಸೆ ಕಾದಿತ್ತು. ಕೂದಲಿನಂಥ ''ಮೃತ'' ವಸ್ತುವಿನ ಮೇಲೆ STR ವಿಶ್ಲೇಷಣೆಯನ್ನು ನಡೆಸಲು ಸಾಧ್ಯವಿಲ್ಲವೆಂದು ಲಾಕ್ಸ್ಲಿ ಅವನಿಗೆ ತಿಳಿಸಿದ. ಆದರೂ ಸಂಪೂರ್ಣವಾಗಿ ನಿರಾಶೆ ಹೊಂದಬೇಕಾಗಿರಲಿಲ್ಲ. ಮತ್ತೂ ಒಂದು ಅವಕಾಶವಿತ್ತು. ನ್ಯಾಯವಿಜ್ಞಾನ ಆಗಷ್ಟೇ "mitochondrial DNA(mtDNA) test ಎನ್ನುವ ಇನ್ನೊಂದು ಸಂಕೀರ್ಣವಾದ

ಪ್ರಕ್ರಿಯೆಯನ್ನು ಆವಿಷ್ಕರಿಸಿತ್ತು. mtDNA ಯು ತಾಯಿಯಿಂದ ಮಗುವಿನ ಜೀನುಗಳಿಗೆ ಯಾವ ಬದಲಾವಣೆಯೂ ಇಲ್ಲದೆ ದಾಟಿಸಲ್ಪಡುತ್ತದೆ. ಇದರಲ್ಲಿ ತಂದೆಯ ಯಾವ ರೀತಿಯ ಕೊಡುಗೆಯೂ ಇರುವುದಿಲ್ಲ. ಅಷ್ಟೇ ಅಲ್ಲ; ಇದು ಎಲ್ಲಾ ಸಹೋದರ ಸಹೋದರಿಯರಲ್ಲಿ ಒಂದೇ ಪ್ರಕಾರವಾಗಿ ಮೈದೋರಿರುತ್ತದೆ. ಇನ್ನೂ ಮುಖ್ಯವಾದ ಸಂಗತಿ ಎಂದರೆ- mtDNA ಯನ್ನು ''ಮೃತ'' ವಸ್ತುಗಳಿಂದಲೂ ಪಡೆಯಬಹುದಾಗಿತ್ತು.

ಕೂದಲೆಳೆಯನ್ನು ಪ್ರಯೋಗಶಾಲೆಗೆ ರವಾನಿಸಿದನಂತರ, ಠಾಣೆಯ ಸಾಕ್ಷಿವಸ್ತು ಭಂಡಾರದಿಂದ ದೊರೆತ ಉಳಿದ ಮೂರು ವಸ್ತುಗಳ ಮೇಲೆ ಪೂಲ್ ಗಮನಹರಿಸಿದ- ಜೀನಳ ಮನೆಯಲ್ಲಿ ಸಿಕ್ಕಿದ ಸಿಗರೇಟು ತುಂಡು, ಅವಳ ಪರಿವಾರದ ಒಂದು ವೀಡಿಯೋಕ್ಯಾಸೆಟ್ ಮತ್ತು ಮರಣದ ಸಮಯದಲ್ಲಿ ಅವಳ ಕ್ಯಾಮೆರಾದಲ್ಲಿದ್ದ ಫಿಲ್ಮಿನಿಂದ ದೊರೆತ ಚಿತ್ರಗಳು.

ಮೊದಲ ಸುತ್ತಿನ ಶೋಧನೆಯ ಕಾಲದಲ್ಲಿ ಕ್ಯಾಮೆರಾದಲ್ಲಿದ್ದ ಫಿಲ್ಮನ್ನು ''ತೊಳೆದು'' ಚಿತ್ರಗಳು ಮುದ್ರಿಸಲ್ಪಟ್ಟಿದ್ದರೂ ಅವುಗಳೆಡೆಗೆ ಯಾರೂ ಹೆಚ್ಚು ಗಮನ ಕೊಟ್ಟಿರಲಿಲ್ಲ. ಈಗ ಮತ್ತೊಮ್ಮೆ ಆ ಚಿತ್ರಗಳನ್ನು ಆಸಕ್ತಿಯಿಂದ ಬಾಬ್ ಪೂಲ್ ಪರಿಶೀಲಿಸಿದ. ಚಿತ್ರಗಳಲ್ಲಿ ಜೀನ್ ಬೆಲ್ಲಿಸಳು ತನ್ನ ಮಕ್ಕಳು ಮತ್ತು ಮೊಮ್ಮಕ್ಕಳೊಡನೆ ಪರಿವಾರದಲ್ಲೊಂದು ಜನ್ಮದಿನವನ್ನಾಚರಿಸುವುದು ಕಂಡುಬಂತು. ಒಂದು ಚಿತ್ರದಲ್ಲಿ ಅವಳು ಕೈಯಲ್ಲಿ ಪಾನೀಯದ ಗ್ಲಾಸನ್ನು ಹಿಡಿದುಕೊಂಡಿರುವುದನ್ನು ಎಚ್ಚರಿಕೆಯಿಂದ ಪರೀಕ್ಷಿಸಿದ. ಅವಳ ಬೆರಳುಗಳಲ್ಲಿ ಉಂಗುರಗಳಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಚಿತ್ರ ಯಾವೊತ್ತು ತೆಗೆಯಲ್ಪಟ್ಟಿತೋ ಎಂದು ಚಿಂತಿಸಿದ.

ಮಾರನೆಯ ದಿನ ಅವನು ರ್ಹೋಂಡಾ ಮತ್ತು ವಾನೆಸ್ಸಾಳನ್ನು ಟೆಲಿಫೋನ್ ಮುಖಾಂತರ ಸಂಪರ್ಕಿಸಿದ. ಆ ಚಿತ್ರವನ್ನು ತೆಗೆದ ದಿನಾಂಕ ಮಾರ್ಚ್ ೧೫ರಂದು ಎಂಬುದನ್ನು ಅವರಿಬ್ಬರೂ ಪುಷ್ಟೀಕರಿಸಿದರು. ಅದಾದನಂತರ ಬರ್ಕ್‌ಶಾಯರಿನ ಮಾಸ್ಕ್ ಟೆಕ್ನಾಲಜಿ ಎಂಬ ಸಂಸ್ಥೆಯಲ್ಲಿದ್ದ ಪ್ರತಿಬಿಂಬ ವಿಶ್ಲೇಷಣ ತಜ್ಞ ಆ್ಯಶ್ಲಿ ವಿಂಡ್ಸರ್ ಎಂಬುವನನ್ನು ಸಂಪರ್ಕಿಸಿ, ಆ ಜನ್ಮ ದಿನಾಚರಣೆಯ ಫೋಟೋಗಳನ್ನೂ, ಜೀನಳ ಶವಪರೀಕ್ಷೆಯ ಸಮಯದಲ್ಲಿ ತೆಗೆದ ಫೋಟೋಗಳನ್ನೂ, ಪರಿವಾರದ ವೀಡಿಯೋ ಕ್ಯಾಸೆಟ್ಟನ್ನೂ ಅವನಿಗೆ ಕಳುಹಿಸಿದ. ವಿಂಡ್ಸರ್ ಮಾಡಬಹುದಾದ ವಿಶೇಷ ರೀತಿಯ ಪರಿಶೀಲನೆ, ಬರೀ ಕಣ್ಣಿಗೆ ಅಗೋಚರವಾದ ವಿವರಗಳನ್ನೇನಾದರೂ ಈಯಬಹುದೇ?

ವಿಂಡ್ಸರ್, ಪ್ರತಿಬಿಂಬೋತ್ಕರ್ಷಣ ತಂತ್ರವನ್ನು ಬಳಸಿ, ಜೀನಳ ಕೈಗಳ ಎಲ್ಲ ಚಿತ್ರಗಳನ್ನು ಕ್ರೋಡೀಕರಿಸಿ ನೋಡಿದಾಗ ಬಯಲಿಗೆ ಬಂದ ವಿಷಯ- ಜೀನಳು ಆ ಜನ್ಮದಿನಾಚರಣೆಯ ಚಿತ್ರಗಳಲ್ಲಿ ಹಾಗೂ ವೀಡಿಯೋ ಚಿತ್ರದಲ್ಲಿ ಧರಿಸಿದ್ದ ಐದು ಉಂಗುರಗಳು, ಚಿತ್ರಗಳನ್ನು ತೆಗೆಯುವ ಒಂದೂವರೆ ವಾರಗಳ ಹಿಂದೆ ತನಗೆ ಸ್ವತಃ ಅವಳೇ ಕೊಟ್ಟಿದ್ದಳು ಎಂದ ಹೇಸ್ಟಿಂಗ್ಸ್ ಹೇಳುತ್ತಿದ್ದ ಉಂಗುರಗಳೇ! ಹಾಗಾದರೆ ಹೇಸ್ಟಿಂಗ್ಸನ ಕತೆ ಸುಳ್ಳಾಯಿತಲ್ಲ!

ಇದಾದನಂತರ ವಿಂಡ್ಸರ್ ತನ್ನ ಗಮನವನ್ನು ಮತ್ತೊಮ್ಮೆ ಆ ಚಿತ್ರಗಳೆಡೆಗೆ ಹರಿಸಿದ. ಅವನು ಚಿತ್ರಗಳ ತ್ವಚೆಯ ಬಣ್ಣದ ಛಾಯೆಗಳಲ್ಲಿ ಕೆಲವನ್ನು ಇಂಗಿಸಿ, ಇನ್ನು ಕೆಲವನ್ನು ವರ್ಧಿಸಿ, ಹುದುಗಿದ್ದ ಗುರುತುಗಳನ್ನು, ಕಲೆಗಳನ್ನು ಮತ್ತಿತರ ನ್ಯೂನತೆಗಳನ್ನು ಎದ್ದುಕಾಣುವಂತೆ ಮಾಡುವ ತಂತ್ರವನ್ನು ಇತ್ತೀಚೆಗೆ ಪರಿಷ್ಕರಿಸು

ವುದರಲ್ಲಿ ತೊಡಗಿದ್ದ. ಅದೇ ತಂತ್ರವನ್ನು ಬಳಸಿ ಪ್ರಸ್ತುತ ಚಿತ್ರಗಳಿಂದ ಅವನು ಹೊರದೆಗೆದ ವಿವರಗಳು ಅದ್ಭುತವಾಗಿದ್ದುವು.

''ಇವಳ (ಜೀನಳ) ಕತ್ತಿನ ಸುತ್ತ ಎರಡು ಸಮಾನಾಂತರ ರೇಖೆಗಳನ್ನು ಕಾಣಬಹುದು. ಗಮನವಿಟ್ಟು ನೋಡಿದರೆ ಅವಳ ಕತ್ತಿನ ಸುತ್ತ ಒಂದು ಸೊಂಟಪಟ್ಟಿಯನ್ನು ಸುತ್ತಿದಂತೆ ಕಾಣುತ್ತದೆ. ಅದರ ಕೊಕ್ಕೆ ಇರಬೇಕಾದ ಜಾಗದಲ್ಲಿ ಗುರುತು ಅನುಗುಣವಾಗಿ ತುಸು ಅಗಲವಿರುವುದು ಈ ಸಿದ್ಧಾಂತವನ್ನು ಪುಷ್ಟೀಕರಿಸುತ್ತದೆ''-ಎಂದು ವಿಂಡ್ಸರ್ ಪೂಲ್‌ನ್ನು ಉದ್ದೇಶಿಸಿ ವಿವರಿಸಿದ.

ಪೂಲ್ ವಿಸ್ಮಯಚಕಿತನಾದ. ಸೊಂಟಪಟ್ಟಿಯ ವಿಷಯವನ್ನು ವಿಂಡ್ಸರಿಗೆ ಯಾರೂ ಹೇಳಿರಲಿಲ್ಲ!

ವಿಂಡ್ಸರ್ ಇನ್ನೂ ತನ್ನ ವಿಶ್ಲೇಷಣೆಯನ್ನು ಮುಗಿಸಿರಲಿಲ್ಲ. ಮುಂದುವರಿಸುತ್ತಾ- ''ಕೊಕ್ಕೆಯಿದ್ದಿರಬಹುದಾದ ಪ್ರದೇಶದೊಳಗೆ ಒಂದು ಅಡ್ಡವಾದ ಗೀರು ಇದ್ದ ಹಾಗಿದೆ. ಕೊಕ್ಕೆಯ ಮೊಳೆ ಬಹುಶಃ ಬಗ್ಗಿದ್ದಿರಬಹುದು''ಎಂದ.

ಸಾಕ್ಷಿವಸ್ತುವಾಗಿದ್ದ ಸೊಂಟಪಟ್ಟಿಯನ್ನು ಪೂಲ್ ತರಿಸಿ ಪರೀಕ್ಷಿಸಿದ. ಅದರ ಕೊಕ್ಕೆಯ ಮೊಳೆಯೂ ನಿರೀಕ್ಷಿಸಿದಂತೆಯೇ ಬಗ್ಗಿಕೊಂಡಿತ್ತು!

ಕೊನೆಯಲ್ಲಿ ಎಲ್ಲಾ ಡಿ.ಎನ್.ಎ. ಪರೀಕ್ಷೆಗಳ ಫಲಿತಾಂಶಗಳು ದೊರಕಿದುವು. ವೆದರ್‌ಬಿ ಪ್ರಯೋಗಶಾಲೆ, ಪಾದರಕ್ಷೆಯ ಚರ್ಮವನ್ನು ಒಳಭಾಗದಿಂದ ಕೆರೆದು ಅದರ ಅಡಿಯಲ್ಲಿದ್ದ ರಕ್ತದ ಕಣಗಳನ್ನು ಬೇರ್ಪಡಿಸುವುದರಲ್ಲಿ ಯಶಸ್ವಿಯಾಯಿತು. ಹೇಸ್ಟಿಂಗ್ಸ್ ಅಷ್ಟು ಜಾಗರೂಕತೆಯಿಂದ ಮೆತ್ತಿದ ಪಾಲಿಷ್‌ನ ಪದರ ರಕ್ತದ ಕಣಗಳನ್ನು ಸುರಕ್ಷಿತವಾಗಿಡಲು ಸಹಾಯವಾಗಿತ್ತು! ರಕ್ತಾಣುಗಳ ಮೇಲೆ ನಡೆಸಿದ STR ಪರೀಕ್ಷೆಯಿಂದ ಸಿದ್ಧವಾದ ವಿಷಯ- ಆ ರಕ್ತಾಣು ಜೀನ್ ಬೆಲ್ಲಿಸಳ ಹೊರತು ಇನ್ನೊಬ್ಬರದಾಗಿರಬಹುದಾದ ಸಂಭವನೀಯತೆ ೫.೮೯ ಕೋಟಿಯಲ್ಲಿ ಒಂದಂಶ.

ಕೂದಳೆಯ ಮೇಲೆ ನಡೆಸಿದ mtDNA ಯ ಪರೀಕ್ಷೆಯೂ ಅದೇ ರೀತಿಯ ಫಲ ಕೊಟ್ಟಿತು. ಸಿಗರೇಟ್ ತುಂಡಿನ ಮೇಲಿಂದ ದೊರಕಿದ ಎಂಜಲೂ ಹೇಸ್ಟಿಂಗ್ಸನದೇ ಎಂದು ಸಾಬೀತಾಯಿತು. ಹೇಸ್ಟಿಂಗ್ಸ್‌ನನ್ನು ಹತ್ಯೆಯೊಡನೆ ಜೋಡಿಸುವ ಪುರಾವೆಗಳು ಬಲಗೊಂಡವು. ಹಾಗಾದರೆ ಏಪ್ರಿಲ್ ೯-೧೦ರಂದು ತೋರ್ಕೆಯಲ್ಲಿ ಅಷ್ಟು ಜನರು ಅವನಿದ್ದುದನ್ನು ಕಂಡುದು ಹೇಗೆ?

ಹೇಸ್ಟಿಂಗ್ಸನ ವಿರುದ್ಧ ಕೇಸನ್ನು ಇನ್ನೂ ಬಲಪಡಿಸುವ ಸಲುವಾಗಿ, ಅವನು ಉಂಗುರಗಳನ್ನು ಯಾರು ಯಾರಿಗೆ ಮಾರಲು ಯತ್ನಿಸಿದ್ದನೋ ಆ ಸಾಕ್ಷಿಗಳನ್ನು ಕಲೆಹಾಕಲು ತನಿಖೆಗಾರರು ತೊಡಗಿದರು. ಅಂಥ ಒಬ್ಬ ಸಾಕ್ಷಿಯ ಪತ್ತೆಯೊಡನೆ ಪೂಲ್‌ನ ಹೃದಯದ ಗತಿ ಏರಿತು! ಹತ್ಯಾ ಪ್ರಕರಣ ನಡೆದಿರಬಹುದಾದ ತಾರೀಖಿನಿಂದ ಎರಡು ದಿನಗಳ ಹಿಂದೆಯೇ, ಏಪ್ರಿಲ್ ೭ರಂದು, ಹೇಸ್ಟಿಂಗ್ಸ್ ತನಗೆ ಉಂಗುರಗಳನ್ನು ಮಾರಲಿಚ್ಛಿಸಿದ್ದ ಎಂದು ಯುವಕನೊಬ್ಬ ಹೇಳಿಕೆ ನೀಡಿದ! ಅಂದರೆ ಜೀನಳ ಮರಣದ ಸಮಯವೇ ಬೇರಾಗಿತ್ತೇ..ಹೇಸ್ಟಿಂಗ್ಸನ ಸ್ಥಳಾಂತರ ನೆಪ ಕುಸಿದು ಬೀಳಬಹುದೇ ...?

ಪೂಲ್ ತನ್ನ ಹೊಸ ಸಿದ್ಧಾಂತವನ್ನು ಪೊಲೀಸ್ ರೋಗತಜ್ಞರ ಮುಂದಿಟ್ಟ. ಅವರು ಕೈಯಲ್ಲಿದ್ದ ಪುರಾವೆಗಳನ್ನು ಪುನರ್ವಿಮರ್ಶಿಸತೊಡಗಿದರು. ಚಿತ್ರಬಂಧದ ಕೊನೆಯ ಚೂರು ತಕ್ಕ ಸ್ಥಳಕ್ಕೆ ಹೊಂದಿಕೆಯಾಯಿತು! ೧೯೯೩ ಏಪ್ರಿಲ್ ತಿಂಗಳಿನ ಶೀತ ಹವಾಮಾನ ಮತ್ತು ಜೀನಳ ಅಡುಗೆಮನೆಯ ಕಲ್ಲಿನ ನೆಲ ಇವೆರಡೂ

ಸೇರಿ ಅವಳ ದೇಹವನ್ನು ಮೊದಲು ಎಣಿಸಿದ್ದಕ್ಕಿಂತ ಹೆಚ್ಚು ದಿನ ಕಾಪಿಟ್ಟಿದ್ದುವು. ಶವದ ಮಿದುಳು ಕ್ಷಯಿಸಿದ ವೇಗವನ್ನು ಅಭ್ಯಸಿಸಿದಾಗ ತಿಳಿದ ಇನ್ನೊಂದು ಭೀಕರ ವಿಷಯ -ಪ್ರಾಣಾಂತಕ ಹಲ್ಲೆ ಆದನಂತರವೂ ಅಸಹಾಯಕ ಸ್ಥಿತಿಯಲ್ಲಿ ಜೇನ್ ಹೇಗೋ ಮತ್ತೂ ೪೮ಗಂಟೆಗಳ ಕಾಲ ಬದುಕಿದ್ದಿರಬೇಕು. ಅಂದರೆ ಹಲ್ಲೆಯ ಸಮಯ ಇನ್ನೂ ಹಿಂದಕ್ಕೆ ಹೋದ ಹಾಗಾಯಿತು. ಪ್ರಾಯಶಃ ಏಪ್ರಿಲ್ ೬ರಂದು; ಹೇಸ್ಟಿಂಗ್ಸ್ ತೋರ್ಕೆಗೆ ಹೋಗುವುದಕ್ಕೆ ೩ ದಿನಗಳ ಹಿಂದೆ!

ಆಗಾಗ ಜೇನ್‌ನ ಬಳಿಗೆ ಬಂದು ಹೇಸ್ಟಿಂಗ್ಸ್ ಹಣ ಕೀಳುತ್ತಿದ್ದ ಎನ್ನುವ ಸಂಗತಿ, ಹಿಂದಿನ ವರ್ಷ (೧೯೯೯)ಫೆಬ್ರುವರಿಯಲ್ಲಿ ಅವನ ಮೊಕದ್ದಮೆಯಲ್ಲಿ ಬೆಳಕಿಗೆ ಬಂತು. ಕೊನೆಯಲ್ಲಿ ಕೇವಲ ೯ ಪೌಂಡುಗಳಿಗೆ (ಈಗಿನ ವಿನಿಮಯ ದರದ ಪ್ರಕಾರ ಸುಮಾರು ರೂ.೫೮೫/-) ಅವಳ ಉಂಗುರಗಳನ್ನು ಅವನು ಮಾರಾಟ ಮಾಡಿದ್ದ.

ಹೇಸ್ಟಿಂಗ್ಸ್ ಅಪರಾಧಿ ಎಂಬ ನಿರ್ಣಯಕ್ಕೆ ಬರಲು ಜ್ಯೂರಿಗಳಿಗೆ ಬೇಕಾದ ಕಾಲ ಬರೇ ಮೂರು ಗಂಟೆ ಅಷ್ಟೆ. ನ್ಯಾಯಾಧೀಶ ವಿಧಿಸಿದ ಜೀವಾವಧಿ ಶಿಕ್ಷೆಯನ್ನು ಅನುಭವಿಸಲು ಕಾರಾಗೃಹಕ್ಕೆ ಹೊರಡುತ್ತಿದ್ದಂತೆಯೇ ಅವನು ನ್ಯಾಯಾಲಯದ ಕಟಕಟೆಯಲ್ಲಿ ಕುಸಿದು ಬಿದ್ದು ರೋದಿಸಲಾರಂಭಿಸಿದ.

''ಈ ಪ್ರಕರಣ X filesನ (ಒಂದು ರಹಸ್ಯಾತ್ಮಕ ಟಿ.ವಿ. ಧಾರಾವಾಹಿ) ಕತೆಯಂತಿದೆ. ಡಿ.ಎನ್.ಎ. ಪ್ರತಿಬಿಂಬೋತ್ಕರ್ಷ- ಇದೊಂದನ್ನೂ ನಾನರಿಯೆ. ಆದರೆ ಖಂಡಿತ ಹೇಸ್ಟಿಂಗ್ಸನೇ ನನ್ನ ಅಮ್ಮನ ಕೊಲೆಪಾತಕಿ ಎಂದು ನಾನು ಯಾವಾಗಲೂ ನಂಬಿದ್ದೆ. ಈ ರಹಸ್ಯವನ್ನು ಬಯಲು ಮಾಡಿದ ವಿಜ್ಞಾನಕ್ಕೆ ಅನಂತ ಧನ್ಯವಾದಗಳು. ಈಗ ಅಮ್ಮನ ಆತ್ಮಕ್ಕೆ ಶಾಂತಿ ದೊರೆಯಿತು'' ಎನ್ನುತ್ತಾಳೆ ಜೇನಳ ಪುತ್ರಿ ರ್‍ಹೋಂಡಾ.



ಬರಲಿವೆ ಹಾರುವ ಕಾರುಗಳು

ಪ್ರೊ. ಎಂ.ಎಸ್. ಗೋಪಾಲನ್
೫೬, ಮಾರುತಿ ದೇವಸ್ಥಾನ ರಸ್ತೆ,
೪ನೇ ಮುಖ್ಯ ರಸ್ತೆ, ಕುವೆಂಪುನಗರ,
ಮೈಸೂರು - ೫೭೦ ೦೦೯

ಗಗನದಲ್ಲಿ ಹಾರುವ ಕಾರುಗಳು ಎಂದ ಒಡನೆ ನಿಮಗೆ ನನ್ನ ಮಿದುಳಿನ ಬಗ್ಗೆ ಸಂಶಯ ಬರುವುದು ಸ್ವಾಭಾವಿಕ. ಏಕೆಂದರೆ, ಅಂಥ ವಾಹನಗಳನ್ನು ನಾನಾಗಲೀ ಅಥವಾ ನೀವಾಗಲೀ ಇಂದಿನವರೆವಿಗೂ ನೋಡಿಲ್ಲ. ಆದರೆ ನಾನು ಈಗ ಹೇಳುತ್ತಿರುವುದು ನೂರಕ್ಕೆ ನೂರು ಸತ್ಯ! ಗಗನದಲ್ಲಿ ವಿಮಾನದಂತೆ ಹಾರಾಡುವ ಕಾರುಗಳು ಇನ್ನು ಕೆಲವೇ ವರ್ಷಗಳಲ್ಲಿ ಬರಲಿವೆ! ಹಾರಾಡುವ ಕಾರುಗಳು ನಮ್ಮ ಜೀವನದಲ್ಲಿ ಕಾಲಿಟ್ಟರೆ, ಈಗ ಸಂಭವಿಸುತ್ತಿರುವ ರಸ್ತೆ ಅಪಘಾತಗಳು, ಟ್ರಾಫಿಕ್ ಸಿಗ್ನಲ್ಲುಗಳು, ಟ್ರಾಫಿಕ್ ಜ್ಯಾಮುಗಳು ಇರುವುದೇ ಇಲ್ಲ. ಹಾರುವ ಕಾರುಗಳ ಜನ್ಮದಾತ ಯಾರು ಗೊತ್ತೆ? ಅವರು ಅಮೆರಿಕದಲ್ಲಿರುವ ತಂತ್ರವಿಜ್ಞಾನಿ ಪಾಲ್ ಮೊಲ್ಲರ್. ಪಾಲ್ ಮೊಲ್ಲರ್ ಮೊದಲು ಅಮೆರಿಕ ದೇಶದ ಡೇವಿಸ್ ನಗರದಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ವಿಭಾಗದ ಪ್ರೊಫೆಸರ್ ಆಗಿದ್ದರು. ಇವರು ತಾವು ಕಂಡುಹಿಡಿದಿರುವ ಹಾರುವ ಕಾರಿಗೆ ಎಂ.೪೦೦ ಎಂದು ನಾಮಕರಣ ಮಾಡಿದ್ದಾರೆ. ಎಂ.೪೦೦ ಹಾರುವ ಕಾರು ಸಾಧಾರಣ ಕಾರು ಉಪಯೋಗಿಸುವ ಪೆಟ್ರೋಲನ್ನೇ ಉಪಯೋಗಿಸುತ್ತದೆ. ಆದರೆ ಈ ಹಾರುವ . ಕಾರು ನಿತ್ಯ ಉಪಯೋಗಿಸುವಂಥ ಕಾರಿಗಿಂತ ಸ್ವಲ್ಪ ಭಿನ್ನವಾಗಿದೆ ಅಷ್ಟೆ. ಎಂ.೪೦೦ ಕಾರು ನೇರವಾಗಿ ಆಕಾಶಕ್ಕೆ ಜಗಿಯಬಲ್ಲದು ಮತ್ತು ನೇರವಾಗಿ ಭೂಮಿಗೆ ಇಳಿಯಬಲ್ಲದು.

ಹಾರುವ ಕಾರುಗಳ ಬಗ್ಗೆ ಈಗಾಗಲೇ ಸಾಕಷ್ಟು ಸಂಶೋಧನೆ ನಡೆದಿದೆ. ಆದರೆ ಇಲ್ಲಿವರೆಗಿನ ಹಾರುವ ಕಾರುಗಳು ಸಾಧಾರಣ ಕಾರುಗಳಂತೆಯೇ ಇದ್ದು ಅವುಗಳಿಗೆ ರೆಕ್ಕೆ ಗಳು ಜೋಡಿಸಲ್ಪಟ್ಟಿವೆ. ಇಂಥ ಕಾರುಗಳು ರಸ್ತೆಯ ಮೇಲೆ ಸಂಚರಿಸಬೇಕಾದರೆ, ಜೋಡಿಸಿದ್ದ ರೆಕ್ಕೆಗಳನ್ನು ತೆಗೆಯಬೇಕಾಗುತ್ತಿತ್ತು. ಆದರೆ ಎಂ ೪೦೦ ಮಾದರಿ ಹಾರುವ ಕಾರಿಗೆ ಈ ಕಷ್ಟ ಕಾರ್ಯ ಮಾಡಬೇಕಾಗಿಲ್ಲ. ಈ ಕಾರಿಗೆ ೪ ಜೊತೆ ಇಂಜನ್ನುಗಳನ್ನು ಜೋಡಿಸಿದ್ದಾರೆ. ಇದರಿಂದ ಕಾರು ಮೇಲಕ್ಕೆ ಜಗಿಯುವಾಗ ರೆಕ್ಕೆಗಳಿಗೆ ಬೇಕಾಗುವ ಶಕ್ತಿಯನ್ನು ಕೊಡುವ ಸೌಲಭ್ಯ ಇದೆ. ಹಾರಾಡಲು ಶುರುವಾದಾಗ, ಎಂ.೪೦೦ ಗಂಟೆಗೆ ೬೦೦ ಕಿ.ಮೀ. ವೇಗದಿಂದ ಹಾರಲು ಸಾಧ್ಯತೆ ಇದೆ. ಒಂದು ರೀತಿಯಲ್ಲಿ ನೋಡಿದರೆ, ಎಂ.೪೦೦ ಜಾದೂಗಾರರು, ಮಂತ್ರವಾದಿಗಳು ಹೇಳುವ ''ಹಾರುವ ರಗ್ಗು'' ಅನ್ನು ಹೋಲುತ್ತದೆ ಎನ್ನುತ್ತಾರೆ ಪ್ರೊಫೆಸರ್ ಮೊಲ್ಲರ್! ಹಾರುವ ಕಾರುಗಳನ್ನು ನಾನಾ ಕ್ಷೇತ್ರಗಳಲ್ಲಿ ಉಪಯೋಗಿಸಬಹುದೆನ್ನುತ್ತಾರೆ ಕಾರಿನ ಜನ್ಮದಾತ. ಉದಾಹರಣೆ ಗಳಿಗೆ ಲೆಕ್ಕವಿಲ್ಲ, ಅವರ ಪ್ರಕಾರ!

ಪ್ರೊಫೆಸರ್ ಮೊಲ್ಲರ್ ತಮ್ಮದೇ ಆದ ಮೊಲ್ಲರ್ ಇಂಟರ್ ನ್ಯಾಷನಲ್'' ಎಂಬ ಸಂಸ್ಥೆಯನ್ನು ತೆರೆದು, ಎ.೪೦೦ ಹಾರುವ ಕಾರಿನ ಸಂಶೋಧನೆಗಾಗಿ ಇಲ್ಲಿಯ ತನಕ ನೂರು ಮಿಲಿಯನ್ ಡಾಲರ್ ಹಣವನ್ನು ವೆಚ್ಚ ಮಾಡಿದ್ದಾರೆ. ತಮ್ಮ ಸಂಶೋಧನೆಗೆ ''ವೊಲಂಟರ್'' ಎಂದು ನಾಮಕರಣ ಮಾಡಿ

ದಿನಾಂಕ ೮.೬.೧೯೯೯ ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಕಟವಾದ ಆರ್. ಶಂಕರ್ ಅವರ ಇಂಗ್ಲಿಷ್ ಲೇಖನದ ಭಾವಾನುವಾದ

ದ್ದಾರೆ. ಈ ಕಾರನ್ನು ನಡೆಸಲು ''ಪೈಲೆಟ್ ಲೈಸೆನ್ಸ್''ನ ಆವಶ್ಯಕತೆಯಿಲ್ಲ. ಕಾರಣ, ಇಂಥ ಕಾರು ಗಣಕಯಂತ್ರದ ಸಹಾಯದಿಂದ ಓಡುತ್ತದೆ ಮತ್ತು ಹಾರುತ್ತದೆ. ಎಂ.೪೦೦ ಮಾದರಿ ಅಥವಾ ಇತರೇ ಮಾದರಿ ಕಾರುಗಳಿಗೆ ಜನಸಂದಣಿ ಇರುವ ಕಡೆ ಗಗನಕ್ಕೆ ಜಿಗಿಯಲು ಸಾಧ್ಯವಾಗದ ಕಾರಣ, ಅವುಗಳಿಗೆ ಪ್ರತ್ಯೇಕ ''ವರ್ಟಿಪೋರ್ಟ್'' ನಿರ್ಮಿಸಬೇಕಾಗುತ್ತದೆ. ಇದೇನು ಅಸಾಧ್ಯವಾದ ಕೆಲಸವೇನೂ ಅಲ್ಲ!

ಎಂ.೪೦೦ ಹಾರುವ ಕಾರು ತಯಾರಿಸಲು ಪ್ರೊಫೆಸರ್ ಮೊಲ್ಲರ್ ಹೇಳಿದಂತೆ ೧ ಮಿಲಿಯನ್ ಡಾಲರು ಬೇಕಾದೀತು. ಆದರೆ ಹಾರುವ ಕಾರುಗಳನ್ನು ಜಾಸ್ತಿ ಪ್ರಮಾಣದಲ್ಲಿ ತಯಾರಿಸಿದರೆ, ಅದರ ಬೆಲೆ ಕೇವಲ ೬೦, ಸಾವಿರ ಡಾಲರಿಗೆ ಇಳಿಸಬಹುದು . ಅಂತೂ , ಎಂ.೪೦೦ ಹಾರುವ ಕಾರು ನಮ್ಮ ನಿತ್ಯ ಜೀವನದಲ್ಲಿ ಒಂದು ದೊಡ್ಡ ಕ್ರಾಂತಿಯನ್ನುಂಟು ಮಾಡುವುದರಲ್ಲಿ ಸಂಶಯವೇ ಇಲ್ಲ. ಆ ಶುಭ ದಿನ ಶೀಘ್ರದಲ್ಲಿಯೇ ಬರಲಿ ಎಂದು ಆಶಿಸೋಣ.



ಸ್ವಾತಂತ್ರ್ಯವನ್ನು ಪಡೆಯ[illegible]ಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕ[illegible]ಮು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಸಾಕಿಕೊಂಡು ಹೋಗಬೇಕು.

-ನೆಹರೂಜಿ

ಪುಸ್ತಕ ಪರಿಚಯ

ಸಾಹಿತ್ಯ ರಚನಾದರ್ಶ: ಸಾಹಿತ್ಯ ಹಾಗೂ ಸಾಹಿತ್ಯ ರಚನೆಗೆ ಸಂಬಂಧಿಸಿದ ಪುಸ್ತಕ, ಲೇಖಕ ಮತ್ತು ಪ್ರಕಾಶಕ: ಶ್ರೀ ಸಿ.ಇ.ಜ್ಞಾನೇಶ್ ಕುಮಾರ್ ಎಂ.ಎ. ನಂ.೨೨೩೭ ವಾಗಾರ್ಥ ನಿಲಯ, ರಾಜೀವನಗರ೧ನೇ ಹಂತ, ಮೈಸೂರು-೫೭೦ ೦೧೯, ಮೊದಲ ಮುದ್ರಣ: ೧೯೯೯, ಪುಟಗಳು: ೧೨೬+೨೦ ಬೆಲೆ: ರೂ.೬೦.೦೦

'ಸಾಹಿತ್ಯವನ್ನು ರಚಿಸುವ ಕುರಿತಂತೆ ಒಂದು ವಿವೇಚನೆ' ಎಂದು ಲೇಖಕರೇ ಹೇಳಿರುವಂತೆ ಈ ಗ್ರಂಥದಲ್ಲಿ ಒಟ್ಟು ೧೪ ಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಾಯಕ್ಕೂ ಒಂದೊಂದು ಶೀರ್ಷಿಕೆ ನೀಡಿದ್ದಾರೆ. ''ನವಸಾಹಿತಿಯ ಮನೋಸ್ಥಿತಿ'' ಪ್ರಥಮ ಅಧ್ಯಾಯ. ಇದರಲ್ಲಿ ಪಾಶ್ಚಾತ್ಯ ದೇಶದಲ್ಲಿ ಲೇಖಕರು ಯಾವ ಸ್ಥಿತಿಯಲ್ಲಿ ಇರುತ್ತಾರೆ ಹಾಗೇ ನಮ್ಮ ದೇಶದಲ್ಲಿ ಅವರ ಪಾಡೇನು, ನವ್ಯ ಕವಿ, ಉದಯೋನ್ಮುಖ ಸಾಹಿತಿಗಳ ಸ್ಥಿತಿಯನ್ನು ಹಾಸ್ಯ ಬೆರಸಿ ಬರೆದಿದ್ದಾರೆ. ಎರಡನೆಯ ಅಧ್ಯಾಯ ''ವಸ್ತುಸ್ಥಿತಿ ಮತ್ತು ಪರಿಹಾರ'' ಇದರಲ್ಲಿ ನವಸಾಹಿತಿಯ ದೌರ್ಬಲ್ಯಗಳೇನು ಅವನ್ನು ಹೇಗೆ ತಿದ್ದಿಕೊಳ್ಳಬೇಕು ಎಂಬಿತ್ಯಾದಿ ವಿಷಯಗಳನ್ನು ಕುರಿತು ಬರೆದಿದ್ದಾರೆ. ''ನವಸಾಹಿತಿಯಾದವನು ಮೊದಲಿಗೆ ಒಳ್ಳೆಯ ಓದುಗ ನಾಗಬೇಕು' ಎಂಬ ಉತ್ತಮ ಸಲಹೆ ನೀಡಿದ್ದಾರೆ. ''ಕೆಲವು ಸಲಹೆಗಳು'' ಎಂಬ ಮೂರನೆ ಅಧ್ಯಾಯದಲ್ಲಿ ನವ ಸಾಹಿತಿ ಗಳಿಗೆ ಸಾರ್ವತ್ರಿಕ ಸಲಹೆಗಳು, ಕಿವಿಮಾತು ಗಳು, ಎಂಬುದರ ಮೂಲಕ ಸಹನೆ, ಶಾಂತಿ ಕವಿಯಾದವನಿಗೆ ಇರಬೇಕೆಂದೂ ಜ್ಞಾನಾ ಭಿವೃದ್ಧಿಗೆ ಶ್ರಮ ಪಡಬೇಕೆಂದೂ ಮತ್ತೊಬ್ಬ ಸಾಹಿತಿಗಳ ಏಳಿಗೆಗೆ ಸಂತೋಷಪಡುವುದನ್ನು ಕಲಿಯಬೇಕೆಂದೂ ಒಳ್ಳೆಯ ಗುಣಗಳನ್ನು ಬೋಧಿಸಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ''ಸಾಹಿತ್ಯವೆಂದರೆ ಯಾವುದು?'' ಎಂಬುದರ ಬಗ್ಗೆ ಗಮನಾರ್ಹ ಚಿಂತನೆ ಹರಿಸಿದ್ದಾರೆ. ಇದರಲ್ಲಿ ಸಾಹಿತ್ಯದ ಹರವು, ಯಾವುದು ಸಾಹಿತ್ಯ ಯಾವುದು ಅಲ್ಲ ಮತ್ತು ಸಾಹಿತ್ಯದ ವಿವಿಧ ಪ್ರಕಾರಗಳು, ಸಾಹಿತ್ಯದ ಹುಟ್ಟು, ಉಪಯೋಗ ಇತ್ಯಾದಿಗಳ ವಿವರವಿದೆ. ಇದರಲ್ಲಿ ಕೆಲವು ವಿವರಣೆಗಳು ಸಾಲದು ಹಾಗೂ ಬಹು ಕಿರಿದಾದ ವಿವರಣೆಯಿಂದ, ಓದುಗರಿಗೆ ಹೆಚ್ಚು ಉಪಯುಕ್ತವಾಗದು ಅನಿಸುತ್ತದೆ. ಉದಾಹರಣೆಗೆ ಸಾಹಿತ್ಯದ ಉಪಯೋಗವೇನು ? ಸಾಹಿತ್ಯವೂ ನೀತಿಯೂ ಮತ್ತು ಸಾಹಿತ್ಯ ಹೇಗಿರಬೇಕು ? ಎಂಬುದನ್ನು ಗಮನಿಸಬಹುದು. ಅಧ್ಯಾಯ ಐದರಲ್ಲಿ ''ಸಾಹಿತ್ಯದ ಹರಹು'' ಈ ಭಾಗದಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಹೆಸರಿಸಿದ್ದಾರೆ. ಇಲ್ಲಿನ ವಿಷಯ ನೂರಾರು ಪುಟಗಳಷ್ಟು ವಿಸ್ತಾರವಾದದ್ದು ಆದರೆ ಲೇಖಕರು ಇಲ್ಲಿ ನಾಲ್ಕು ಪುಟಗಳಲ್ಲಿ ವಿಷಯವನ್ನು ಹೇಳಿ ಮುಗಿಸಿದ್ದಾರೆ. ವಿಷಯ ಕುರಿತು ಹೇಳಿರುವುದು ಸಾಲದಾಯಿತು ಎನ್ನುವ ಕೊರತೆ ಕಾಣುತ್ತದೆ. ಅಧ್ಯಾಯ ಆರರಲ್ಲಿ ''ಕನ್ನಡ ಸಾಹಿತ್ಯ ಪರಂಪರೆ'' ನೃಪತುಂಗ ಚಕ್ರವರ್ತಿಯ ಬರಹ, ಹಲ್ಮಿಡಿ ಶಾಸನ ಇವುಗಳಿಂದ ಮುಂದೆ ಕನ್ನಡ ಸಾಹಿತ್ಯ ಪರಂಪರೆ ಯಾರ ಯಾರ ಕಾಲದಲ್ಲಿ ಮತ್ತು ಯಾವ ಕವಿಗಳಿಂದ ಹೇಗೆ ಬೆಳೆದು ಬಂತು ಎಂದು ಹೇಳುವಾಗ ಕೆಲವೇ ಬೆರಳೆಣಿಕೆಯಷ್ಟು ಜನರನ್ನು ಲೇಖಕರು ಉದಾಹರಿಸುತ್ತಾರೆ. ಆದರೆ ಇವರು ಹೇಳಿರುವಂತೆ ಆ ಕೆಲವೇ ಮಂದಿಯಿಂದ ಮಾತ್ರ ಸಾಹಿತ್ಯ ಕ್ಷೇತ್ರ ಬೆಳೆಯಿತೆನ್ನುವುದನ್ನು ಒಪ್ಪಲಾಗದು. ಕೆಲವೊಂದು ಉದಾಹರಣೆ ಕೊಟ್ಟು ಇಂದಿನ ಸಾಹಿತ್ಯದವರೆಗೆ ಕನ್ನಡ ಸಾಹಿತ್ಯ

ಪ್ರವಹಿಸಿರುವ ಜಾಡನ್ನು ಇದರಲ್ಲಿ ಗುರುತಿಸಿದ್ದಾರೆ. ಏಳನೆಯ ಅಧ್ಯಾಯ ''ಸಾಹಿತ್ಯ ಮತ್ತು ಮೀಮಾಂಸೆ'' ಇದರಲ್ಲಿ ಉದಯೋನ್ಮುಖ ಸಾಹಿತಿಗಳಿಗೆ ಉಪಯುಕ್ತವಾದ ವಿಷಯಗಳನ್ನು ಪಕ್ಷಿ ನೋಟದಂತೆ ತಿಳಿಸಿದ್ದಾರೆ. ಯಾವುದು ಸಾಹಿತ್ಯ ? ಎಂಬುದರೊಂದಿಗೆ ಪ್ರಾರಂಭವಾಗುವ ಈ ಅಧ್ಯಾಯದಲ್ಲಿ ಕಾವ್ಯ ಸ್ವರೂಪ ಮಹತ್ವ ಅಲಂಕಾರ, ಗುಣ, ರೀತಿ, ರಸಧ್ವನಿ, ಔಚಿತ್ಯ ಅಔಚಿತ್ಯ , ವಕ್ರೋಕ್ತಿ, ಕವಿಸಮಯ ಇವನ್ನೆಲ್ಲ ಉದಾಹರಣಾ ಪೂರ್ವಕ ತಿಳಿಸಿದ್ದಾರೆ. ಸಾಹಿತ್ಯದಲ್ಲಿನ ಆಧುನಿಕ ಪ್ರಕಾರಗಳಾದ ಸಣ್ಣಕಥೆ, ಕಾದಂಬರಿ, ಪ್ರಬಂಧ, ನಾಟಕ ಇವನ್ನು ಕುರಿತ ತಿಳಿಯಾದ ಟಿಪ್ಪಣಿ ಗಳಿವೆ. ಅಧ್ಯಾಯ ಎಂಟು ''ಸಾಹಿತ್ಯ ಮತ್ತು ಛಂದಸ್ಸು'' ಕುರಿತಾದದ್ದು. 'ಕಾವ್ಯದ ಗೇಯಾಂಶವನ್ನೂ ನಾಟ್ಯಾಂಶವನ್ನೂ ಹಿಡಿ ದಿಡುವ ಕಟ್ಟು' ಎಂದು ಡಾ. ಟಿ. ವಿ. ವೆಂಕಟಾ ಚಲ ಶಾಸ್ತ್ರಿಗಳು ಛಂದಸ್ಸು ಕುರಿತು ಹೇಳಿರುವ ಮಾತನ್ನು ಉದಾಹರಿಸಿ, ಗಣ, ಪಾದ, ಅಕ್ಷರ, ಛಂದಸ್ಸು, ಮಾತ್ರಾ ಹಾಗೂ ಅಂಶ ಛಂದಸ್ಸುಗಳನ್ನು ಕುರಿತು ಹೇಳಿ' ಛಂದಸ್ಸು ಪದದ ವಿನ್ಯಾಸವನ್ನು ಕಾಯುತ್ತದೆ... ನಮ್ಮ ಪೂರ್ವಿಕರು ಕಷ್ಟಕರವಾದ ಛಂದಸ್ಸಿನ ಸೂತ್ರಗಳನ್ನು ಅನುಸಿರಸಿ ಅದರ ನಿಯಮಗಳಿಗೆ ಚ್ಯುತಿಯಾಗದಂತೆ ಕಾವ್ಯ ರಚಿಸುತ್ತಿದ್ದರು. ಅವರ ಪದಸಂಪತ್ತು, ಪದಚಮತ್ಕಾರ ಇವೆಲ್ಲ ರೋಮಾಂಚನಕಾರಿ, ಇವನ್ನು ಇಂದಿನ ಕವಿಗಳು ಅರಿತುಕೊಳ್ಳಬೇಕು ಎನ್ನುವ ಲೇಖಕರ ಮಾತು ಒಪ್ಪತಕ್ಕದ್ದಾಗಿದೆ,. ಅಧ್ಯಾಯ ಒಂಬತ್ತು ''ಸಾಹಿತ್ಯ ಮತ್ತು ಸಂಗೀತ'' ಇದರಲ್ಲಿ ಸಾಹಿತ್ಯ, ಸಂಗೀತ ಎರಡರ ಪರಸ್ಪರ ಸಂಬಂಧವನ್ನು ವಿವರಿಸಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಂಗೀತ ಹೇಗೆ ಹಾಸುಹೊಕ್ಕಾಗಿದೆ ಎಂಬುದನ್ನು ಉದಾಹರಣೆ ನೀಡಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಸಾಹಿತ್ಯ ಸಂಗೀತ ಪರಸ್ಪರ ಪೂರಕ ಕಲೆಗಳು ಎನ್ನುತ್ತಾರೆ. ಅಧ್ಯಾಯ ಹತ್ತರಲ್ಲಿ ''ಬರೆಯುವುದು ಹೇಗೆ?'' ಎನ್ನುವ ವಿಷಯ ಪ್ರಸ್ತಾಪಿಸುತ್ತ ಬರೆವುದನ್ನು ''ಗುರುಸಂದರ್ಶನ, ಗ್ರಂಥಾವಲೋಕನ ಹಾಗೂ ಸ್ವಾನುಭವಗಳಿಂದ ಉದಯೋನ್ಮುಖ ಸಾಹಿತಿ ತನ್ನನ್ನು ಉತ್ತಮ ಪಡಿಸಿಕೊಳ್ಳಬೇಕು'' ಎಂಬ ಕಿವಿಮಾತು ಹೇಳಿದ್ದಾರೆ. ಮುಂದೆ ತಮ್ಮವೇ ಆದ ಕಥೆ, ಕವನಗಳನ್ನು ಉದಾಹರಿಸುತ್ತ ಸಾಗುತ್ತಾರೆ. ಅಧ್ಯಾಯ ಹನ್ನೊಂದು ಒಂದು ಬಗೆಯಲ್ಲಿ ವಿಚಾರ ಪ್ರಚೋದನೆಗೆ ಕಾರಣವಾದ' ಸಾಹಿತಿಗಳಿಂದ ಸಮಾಜ ಸುಧಾರಣೆ ಸಾಧ್ಯವೆ?'' ಎಂಬ ವಿಷಯ. ಇದು ಬುದ್ಧಿವಂತರ ಕೈಗೆ ಸಿಕ್ಕಿದರೆ, ಚತುರ ಮಾತುಗಾರರು ಹೇಗೆ ಬೇಕಾದರೂ ಈ ವಿಷಯವನ್ನು ತಿರುಚಿ ವಾದಿಸಬಲ್ಲರು. ಒಮ್ಮತದ ಅಭಿಪ್ರಾಯ ಇದರಲ್ಲಿ ಸಿಗುವುದಿಲ್ಲ. ಲೇಖಕರು ಕೊನೆ ಯಲ್ಲಿ 'ಮಾನವೀಯ ಗುಣ ಮೌಲ್ಯಗಳಿಗೆ ಸ್ಪಂದಿಸುವ, ನಿಷ್ಕಾಮ ಕರ್ಮ ಸಾಹಿತಿ ಗಳಿಂದ' ಸಮಾಜ ಸುಧಾರಣೆ ಸಾಧ್ಯವೆಂದು ತಮ್ಮ ಅಭಿಪ್ರಾಯ ಮಂಡಿಸುತ್ತಾರೆ. ಅಧ್ಯಾಯ ಹನ್ನೆರಡರಲ್ಲಿ 'ಸಾಹಿತ್ಯದಾಚೆಯಿಂದ' ಕವಿ (ಇಲ್ಲಿ ಲೇಖಕರು) ಕೆಲವು ಹೊಸ ವಿಷಯ ಗಳತ್ತ ನಮ್ಮ ಗಮನ ಸೆಳೆಯುತ್ತಾರೆ. ಕೆಲವಂತೂ ಚಿಂತಿಸುವಂತಿವೆ. ಈ ಅಧ್ಯಾಯದಲ್ಲಿ ರಾಬಿನ್ ಸನ್ ಕ್ರೂಸೋ ಕಥೆ ಹೇಳಿ ಹೇಗೆ ಮೌನದಲ್ಲಿ, ಕಾಯಕದಲ್ಲಿ , ಜೀವನಾವಶ್ಯಕತೆಗಳ ಪೂರೈಕೆ ಯಲ್ಲಿ ಗುಪ್ತವಾಗಿ ಸಾಹಿತ್ಯ ಅಡಗಿದೆ ಎಂಬುದನ್ನು ತಿಳಿಸುತ್ತಾರೆ. ಸಾಹಿತ್ಯವು ಸ್ವಾವಲಂಬಿಯೆ? ಸಾಹಿತ್ಯವೂ ಭಾಷೆಯೂ, ಸಾಹಿತ್ಯವೂ ಸಮಾಜವೂ, ಸಾಹಿತ್ಯವೂ ಪಶು ಪಕ್ಷಿಗಳೂ, ಮತ್ತು ಸಾಹಿತ್ಯವೂ

ಆತ್ಮ ಅವಿನಾಶಿ ತತ್ತ್ವವೂ ಎಂಬ ವಿಷಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೆಲವು ಉದಾಹರಣೆಗಳನ್ನೂ ನೀಡಿ ತಮ್ಮ ಅನಿಸಿಕೆಯನ್ನು ಇವುಗಳ ಬಗ್ಗೆ ಹೇಳುವುದರೊಂದಿಗೆ ಈ ಅಧ್ಯಾಯದ ಉಪಯುಕ್ತತೆಯನ್ನೂ ತಿಳಿಸಿಕೊಡುತ್ತಾರೆ'. ಅಧ್ಯಾಯ ಹದಿಮೂರು ''ಕತ್ತಲೆಯಿಂದ ಬೆಳಕಿನೆಡೆಗೆ'' ಈ ಅಧ್ಯಾಯದಲ್ಲಿ ಲೇಖಕರ ನೆರಳೇ ಹೆಚ್ಚಿದೆ, ಅವರ ಸ್ವಗತವೆನ್ನುವಂತೆ ಕಾಣುವ ಇದರಲ್ಲಿ ಉದಯೋನ್ಮುಖ ಸಾಹಿತಿಗಳ ಹೊಣೆ, ಅವರ ಆಸೆ-ಆಕಾಂಕ್ಷೆಗಳನ್ನು ಕುರಿತು ಹೇಳುತ್ತಾರೆ. ಕವಿ ಮುದ್ದಣ್ಣನ ಉದಾಹರಣೆ ನೀಡಿ ಆ ಕವಿಯ ಕಷ್ಟಮಯ ಜೀವನದ ಮಧ್ಯೆಯೂ ಎದೆಗುಂದದೆ ಈ ಕ್ಷೇತ್ರಕ್ಕೆ ಆತ ನೀಡಿದ ಕೊಡುಗೆಯ ಮಹತ್ವ ಕುರಿತು ಹೇಳಿದ್ದಾರೆ. ಉದಯೋನ್ಮುಖ ಕವಿಗಳ ಗುಣಾವಗುಣಗಳನ್ನು ಹೇಳುತ್ತಾ- ''ಉದಯೋನ್ಮುಖ ಕವಿಗಳು ಸಮಾಜಕ್ಕೆ ಉಪಕಾರ ಮಾಡುವವರು, ಸ್ವಾಭಿಮಾನಿಗಳು, ಆತ್ಮ ವಿಮರ್ಶೆ ಮಾಡಿಕೊಳ್ಳುವವರು, ಆದರೂ ಇವರಲ್ಲಿ ಒಂದಿಷ್ಟು ಕೀರ್ತಿಯಾಶೆ ಇರುತ್ತದೆ; ವಿಶಾಲ ಮನೋಭಾವದಿಂದ ನಡೆದುಕೊಂಡು ಕಾವ್ಯಕ್ಷೇತ್ರದ ಘನತೆಯನ್ನು ಕಾಪಾಡಿಕೊಂಡು ಬಂದವರು, ಭರವಸೆ ಹಾಗೂ ಆಶಾಭಾವನೆಯಿಂದ ಮುನ್ನಡೆಯಬೇಕು'' ಎಂಬುದಾಗಿ ಹೇಳಿದ್ದಾರೆ. ಕೊನೆಯ ಅಧ್ಯಾಯ ''ಸಮಾರೋಪ'' ದಲ್ಲಿ-ಈ ಪುಸ್ತಕ ಉದಯೋನ್ಮುಖ ಲೇಖಕರ ಉಪಯೋಗಕ್ಕಾಗಿ ಬರೆದ ಪುಸ್ತಕ, ಇದನ್ನು ಬರೆದವನೂ ಓರ್ವ ಉದಯೋನ್ಮುಖ ಸಾಹಿತಿಯೇ ಎಂದು ಲೇಖಕರು ಹೇಳಿದ್ದಾರೆ. ತಮ್ಮ ಪುಸ್ತಕ ಕುರಿತೇ ಬರೆದಿರುವ ಈ ಅಧ್ಯಾಯದಲ್ಲಿ 'ಬರೆಯುವಾಗ ಅನೇಕ ಸಮಸ್ಯೆಗಳು ಎದುರಾಗುತ್ತದೆ, ವಿಷಯ ಎಷ್ಟೇ ಗಹನವಾದರೂ ಅದರ ವಿವರಣೆ ಲೇಖಕನ ಭೌದ್ಧಿಕ ಮಟ್ಟವನ್ನೂ ಅವನ ಅಧ್ಯಯನ ಮಟ್ಟವನ್ನೂ ಅವಲಂಬಿಸಿರುತ್ತದೆ' ಎಂದು ಹೇಳಿ ತಪ್ಪುಗಳಿದ್ದರೆ ಮನ್ನಿಸಿ ಹಿರಿಯ ಸಾಹಿತಿಗಳು ಸರಿದಾರಿಯಲ್ಲಿ ಮುನ್ನಡೆಸಲಿ ಎನ್ನುವರು. ಒಟ್ಟಿನಲ್ಲಿ ಒಂದು ಹೊಸ ಪ್ರಯೋಗದಂತೆ ಕಾಣುವ ಉತ್ತಮ ಸಾಹಿತ್ಯ ಗ್ರಂಥವೆನ್ನಬಹುದು.

ಶ್ರೀ ಸಿ.ಇ.ಜ್ಞಾನೇಶ್ ಕುಮಾರ್ ಅವರು ಈ ಪುಸ್ತಕ ಬರೆಯಲು ಸಹಾಯಕವಾದ ಪುಸ್ತಕಗಳ ಪಟ್ಟಿಯನ್ನು ಕೊನೆಯಲ್ಲಿ ಗ್ರಂಥ ಋಣವೆಂದು ಪಟ್ಟಿಕೊಟ್ಟಿದ್ದಾರೆ. ಆ ಪಟ್ಟಿಯಲ್ಲಿನ ಪುಸ್ತಕಗಳನ್ನು ಅಧ್ಯಯನ ಮಾಡಿರುವ ಇವರನ್ನು ಮೆಚ್ಚಿಕೊಳ್ಳಬೇಕಾದದ್ದೆ. ಶ್ರಮವಹಿಸಿ ಜ್ಞಾನಾರ್ಜನೆ ಮಾಡಿದ್ದಾರೆ. ಶ್ರೀ ಕರಿಮುದ್ದೀನ್ ಅವರು ಬರೆದಿರುವ ಮುನ್ನುಡಿ ''ಪ್ರವೇಶಿಕೆ'' ಅದೇ ಒಂದು ಆಕರ್ಷಕ, ವಿದ್ವತ್‌ಪೂರ್ಣ ಲೇಖನವಾಗಿದೆ. ಒಟ್ಟಿನಲ್ಲಿ ಸಾಹಿತ್ಯಾಸಕ್ತರು ಒಮ್ಮೆ ಓದಬಹುದಾದ ಪುಸ್ತಕ.

ಬಿ. ಶಾಮಸುಂದರ
ಗೌರವಸಂಪಾದಕ 'ಕನ್ನಡ ವಿಶ್ವಕೋಶ'
ನಂ.೮೩೩, ಲೋಕ ರಂಜನ ಮಹಲ್ ರಸ್ತೆ
೩ನೆ ತಿರುವು, ಇಟ್ಟಿಗೆ ಗೂಡು
ಮೈಸೂರು-೫೭೦ ೦೧೦

ಪುಸ್ತಕ ವಿಮರ್ಶೆ

ಮತಾಂತರ ಮತ್ತು ಇತರ ಲೇಖನಗಳು: ಡಾ.ವಿ.ಮುನಿವೆಂಕಟಪ್ಪ, ವಿಚಾರವಾದಿ ಪ್ರಕಾಶನ :೩ ೧೨೪೦, ೩ನೇ ಕ್ರಾಸ್, ಗಂಗೆ ರಸ್ತೆ, ಕುವೆಂಪು ನಗರ, ಮೈಸೂರು -೨೩, ಪುಟಗಳು: viii+128. ಮೊದಲ ಮುದ್ರಣ -೨೦೦೦, ಬೆಲೆ-ನೂರು ರೂಪಾಯಿಗಳು.

ಲೇಖಕರು ಕರೆದುಕೊಂಡಿರುವಂತೆ ಇದೊಂದು ವೈಚಾರಿಕ ಬರಹಗಳ ಸಂಗ್ರಹ. ಈ ಸಂಗ್ರಹದಲ್ಲಿ ಮತಾಂತರ : ಒಂದು ಚಿಂತನೆ, ವಚನ ಚಳುವಳಿಯಲ್ಲಿ ದಲಿತ ವಚನಕಾರರು, ಅಂತ್ಯಜನ ಆತ್ಮಕಥೆ, ದಲಿತ ಸಾಹಿತ್ಯ ಬೆಳೆದು ಬಂದ ಬಗೆ, ಭಾರತದಲ್ಲಿ ಅಭಿವ್ಯಕ್ತಿ ಸವಾಲುಗಳು, ಶೋಷಿತ ವರ್ಗದ ದನಿ ಡಾ.ಅಂಬೇಡ್ಕರ್, ಬುದ್ಧ ಮತ್ತು ಬೌದ್ಧ ಧರ್ಮ, ದೇವರು, ಧರ್ಮ ಮತ್ತು ದಲಿತರು, ಮೀಸಲಾತಿ : ಒಂದು ಅವಲೋಕನ ಮತ್ತು ಅನುಬಂಧಗಳು ಸೇರ್ಪಡೆಯಾಗಿವೆ.

ಮೊದಲ ಲೇಖನ ಮತಾಂತರ ಪುನರ್ಮತಾಂತರಗಳಿಗೆ ಸಂಬಂಧಿಸಿದಂತೆ ಕಾನೂನು, ಕಾರಣ, ಅಂಕಿ ಅಂಶಗಳನ್ನು ಪಟ್ಟಿಮಾಡುತ್ತದೆ. ಲೇಖಕರು ಆರಂಭದಲ್ಲಿ ಏನೋ ಹೇಳುತ್ತಾರೆಂಬ ಕುತೂಹಲ ಹುಟ್ಟಿಸುತ್ತಾರೆ. ಲೇಖನ ಮುಂದುವರಿದಂತೆ ಭಾಷೆ, ವಿಷಯ ಸಮರ್ಥನೆಗಳು ಜಾಳು ಜಾಳಾಗುತ್ತಾ ಆರಂಭದ ನಿರೀಕ್ಷೆ ಹುಸಿಯಾಗಿ ಬಿಡುತ್ತದೆ. ಯಾವ ಮತವೂ ಅನ್ನ, ವಸತಿ, ಉದ್ಯೋಗವನ್ನು ತಾನೇ ತಾನಾಗಿ ನೀಡದು. ಇಂದಿನ ಸಮಾಜದಲ್ಲಿ ವ್ಯಕ್ತಿಯ ಮತದ ಬಗ್ಗೆ ತಲೆ ಕೆಡಿಸಿಕೊಳ್ಳುವುದೇ ಕೆಲಸಕ್ಕೆ ಬಾರದ ವಿಷಯ. ಕಾನೂನಿನಂತೆ ಮತ, ವೈದ್ಯದಂತೆ ಲಿಂಗ ಇವೆರಡೂ ಇಂದು ದಿನೊಪ್ಪತ್ತಿನಲ್ಲಿ ಬದಲಾಗಬಲ್ಲವು. ವ್ಯಕ್ತಿಯ ಸಾಮರ್ಥ್ಯವನ್ನು ಇವು ಹಾಗೆಯೇ ಬದಲಾಯಿಸಬಲ್ಲವೆ? ಈ ಬಗ್ಗೆ ಲೇಖಕರು ಚರ್ಚಿಸದೆ ಮತ-ಜಾತಿಯ ಬಗ್ಗೆ ಗಹನವಾಗಿ ಚಿಂತಿಸುವ ಮಠಾಧೀಶರ ಭೋಜನಕೂಟದ ಮಾತುಗಳ ಬಗ್ಗೆ ತೀವ್ರವಾಗಿ ಚರ್ಚಿಸುತ್ತಾರೆ. ಈ ಚರ್ಚೆಗೂ ಒಂದು ಚೌಕಟ್ಟಿಲ್ಲ.

ವೈಚಾರಿಕ ಬರೆಹವೆಂಬ ಸಂಕಲನಕ್ಕೆ ಸ್ವಲ್ಪವಾದರೂ ಒಪ್ಪುವ ಲೇಖನ ಎರಡನೆಯದು. ಇಲ್ಲಿಯೂ ದಲಿತ ವಚನಕಾರರ ಸಾಹಿತ್ಯದ ಮೌಲಿಕ ಚರ್ಚೆ ನಡೆಯುವ ಬದಲಾಗಿ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಮಾರಯ್ಯ, ದೂಳಯ್ಯ ಕಾಳವ್ವೆಯರ ಬಗ್ಗೆ ಈಗಾಗಲೇ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ದಾಖಲಾದ ಮಾಹಿತಿಯನ್ನು ನೀಡುವುದನ್ನು ಕಾಣಬಹುದು. ಡೋಹರ ಕಕ್ಕಯ್ಯನ ಬಗ್ಗೆ ವಿಳಾಸ ನೀಡಿ 'ಅವನ ಆರು ವಚನಗಳು ದೊರೆತಿವೆ' ಎಂದು ಕೈತೊಳೆದು ಕೊಳ್ಳುತ್ತಾರೆ. ವಚನ ಸಾಹಿತ್ಯ ಚಳುವಳಿಯಲ್ಲಿ ಕಾಣಿಸಿಕೊಂಡ ದಲಿತ ವಚನಕಾರರನ್ನು ವಸ್ತುನಿಷ್ಠವಾಗಿ ವಿಮರ್ಶಿಸಿ, ವಿಶ್ಲೇಷಿಸುವ ಕೆಲಸ ನಡೆದಿಲ್ಲ'ಎಂದು ಅಪ್ಪಣೆ ಕೊಡುವ ಲೇಖಕರು ಈ ಕುರಿತು ಬಂದ ಮಹಾಪ್ರಬಂಧಗಳನ್ನೇ ಮರೆತಿದ್ದಾರೆ. ಮ.ನ.ಜವರಯ್ಯ. ಅರವಿಂದ ಮಾಲಗತ್ತಿ, ಬಸವರಾಜ ಸಬರದ, ಬಾಪು ಹೆದ್ದೂರಶೆಟ್ಟಿ ಮುಂತಾದವರ ಪ್ರಯತ್ನವನ್ನು ಗಮನಿಸಿದ್ದರೆ,ಈ ಮಾತು ಪ್ರಾಯಶಃ ಬರುತ್ತಿರಲಿಲ್ಲ. ಲೇಖಕರು ಈ ಲೇಖನವನ್ನು ಬರೆದಮೇಲೆಯೂ ಅವರ ಮಾತು, ಅಂಥ ಪ್ರಯತ್ನವೇ ನಡೆಯದಿದ್ದ ಪಕ್ಷದಲ್ಲಿ ಹಾಗೆಯೇ ಉಳಿಯುತ್ತದೆ!

ದಲಿತ ಸಾಹಿತ್ಯ ಬೆಳೆದು ಬಂದ ಬಗೆ ಎಂಬ ಲೇಖನ ಯಾವ ದೃಷ್ಟಿಯಿಂದಲೂ ವೈಚಾರಿಕವೆನಿಸಿಕೊಳ್ಳಲು ಸೂಕ್ತವಲ್ಲ. ತಮಗೆ ಮೆಚ್ಚುಗೆಯಾದ ಬರಹಗಾರರ ಬಗ್ಗೆ ಒಂದು, ಉಳಿದವರ ಬಗ್ಗೆ ಮತ್ತೊಂದು ಧಾಟಿಯ ಮಾತುಗಳು ಇಲ್ಲಿವೆ. 'ದಲಿತ ಸಾಹಿತ್ಯ'ಕ್ಕೆ ಎಂದು ಸೀಮಿತಗೊಳಿಸುವುದು ತಪ್ಪು, ಕನ್ನಡ ಸಾಹಿತ್ಯಕ್ಕೆ ಗೌರವ ತಂದ ದೇವನೂರರ ಬಗ್ಗೆ, ಸಿದ್ಧಲಿಂಗಯ್ಯನವರ ಬಗ್ಗೆ ಬಹಳ ಬಾಲಿಶವಾಗಿ ತಮ್ಮ ಅಸಮಾಧಾನವನ್ನು ಲೇಖಕರು ವ್ಯಕ್ತಪಡಿಸುತ್ತಾರೆ.'ಹೆಚ್ಚು ಬರೆಯದಿದ್ದರೂ, ಬರೆದಿದ್ದನ್ನೇ ಬಂಡವಾಳ ಮಾಡಿಕೊಂಡು ಪ್ರಶಸ್ತಿ, ಪದವಿಗಳನ್ನು ಗಳಿಸಿದವರು.. ಬೇಡವೆನ್ನುತ್ತಲೇ ಬೇಕುಗಳನ್ನು ಪಡೆವವರು,

ಕೃತಿಗಳನ್ನು ಪಠ್ಯಪುಸ್ತಕಗಳನ್ನಾಗಿ ಮಾಡಿಸಿಕೊಂಡು, ಪುಸ್ತಕ ಮುದ್ರಣದಲ್ಲಿ ತೊಡಗಿದವರು... ಇವರು ಯಾರನ್ನೂ ಬೆಳೆಯಲು ಬಿಡಲಿಲ್ಲ... ನೋಡಲು ಸಜ್ಜನಿಕೆಯ ವ್ಯಕ್ತಿ, ಆಳದಲ್ಲಿ ಕ್ರೂರಿ, ಸ್ವಾರ್ಥಿ ಎಂಬುದನ್ನು ಪಲವರು ಹೇಳಲು ಹೆದರುತ್ತಾರೆ (ಪುಟ ೪೮). ಇಂಥ ಕಡೆಗಳಲ್ಲಿ ಜಾಣ ಕುರುಡಿನ ಬರೆಹವನ್ನು ಲೇಖಕರು ಬಳಸುತ್ತಾರೆ. ಇಂಥ ಪೂರ್ವಗ್ರಹದ ಲೇಖನಗಳು ಯಾರಿಗೆ ಏನನ್ನು ಕೊಡುತ್ತವೆ ? ಕನ್ನಡಕ್ಕೊಬ್ಬರೇ ಮಹದೇವ ಎಂಬುದು ಕನ್ನಡ ಸಾಹಿತ್ಯ ಬಲ್ಲವರಿಗೆ ತಿಳಿದಿದೆ ಎಂಬುದನ್ನು ಲೇಖಕರು ಮರೆಯಬಾರದಿತ್ತು.

ಉಳಿದ ಬಹುಪಾಲು ಲೇಖನಗಳು ಚಹಾಪಾನದ ಮಾತುಗಳಾಗಿವೆ. ಸಂದರ್ಭ ಸಿಕ್ಕಕಡೆಗಳಲ್ಲಿ ಅಥವಾ ಸಂದರ್ಭ ಸೃಷ್ಟಿಸಿಕೊಂಡು ಮುನಿವೆಂಕಟಪ್ಪ ಸ್ವಂತಿಕೆಯ ಬಗ್ಗೆ ಹೇಳಿಕೊಳ್ಳತೊಡಗುತ್ತಾರೆ. ಸ್ವಯಂವೈಭವೀಕರಣ ಮತ್ತೆ ಮತ್ತೆ ಕಾಣುತ್ತದೆ. ಅಂಬೇಡ್ಕರ್‌ರಂಥ ಮಹಾನ್ ಚಿಂತಕರ ಮಾತುಗಳನ್ನು ಲೇಖಕರು ಸಂಕುಚಿತ ದೃಷ್ಟಿಗೆ ಒಳಪಡಿಸಲು ಮತ್ತೆ ಮತ್ತೆ ಯತ್ನಿಸುತ್ತಾರೆ.

ಅಂತ್ಯಜನ ಆತ್ಮಕಥೆ ಒಂದು ಅಸಂಬದ್ಧ ಪ್ರಲಾಪದಂತಿದೆ. ಇದನ್ನೂ ವೈಚಾರಿಕ ಬರೆಹ ಎಂದಿದ್ದಾರೆ. 'ನಮ್ಮ ಮಾಧ್ಯಮಿಕ ಶಾಲೆಯಲ್ಲಿ ಪ್ರಮೀಳ ಮೇಡಂ ಇದ್ದಳು. ಆಕೆ ಕಾಲುಗಳನ್ನು ಸ್ಟೂಲ್ ಮೇಲೆ ಇಟ್ಟುಕೊಂಡು ಪಾಠ ಮಾಡುತ್ತಿದ್ದಳು. ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದ ನಮಗೆ ಆಕೆಯ ಕಾಲು, ಒಳಲಂಗ ಹತ್ತಿರದಿಂದ ಕಾಣುತ್ತಿತ್ತು, ಇದು ನನಗೆ ಮೋಹಕವಾಗಿ ಕಾಣುತ್ತಿತ್ತು' (ಪು-೪೧) ಇಂಥ ಬರೆಪಗಳು ವೈಚಾರಿಕತೆಯ ಹೆಸರಿನಲ್ಲಿ ಪ್ರಕಟವಾಗುತ್ತಿರುವುದು ಒಂದು ಸಾಹಿತ್ಯಕ ದುರಂತ.

ಈ ಕೃತಿ ಕನ್ನಡ ಸಾಹಿತ್ಯಕ್ಕಾಗಲಿ, ಇನ್ಯಾವ ಉದ್ದೇಶಕ್ಕಾಗಲೀ ಸೃಜನಶೀಲವಾದುದನ್ನೇನೂ ಕೊಡುವುದಿಲ್ಲ. ಇದೊಂದು ಕಾಲ-ಹಣ ನಷ್ಟದ ಕೃತಿ.

ಡಾ. ಶ್ರೀಪಾದ ಭಟ್. ಉಪನ್ಯಾಸಕ,
ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

ನನ್ನ ಐವತ್ತೊಂದು ಕವಿತೆಗಳು: ಕವಿ. ಅಟಲ್ ಬಿಹಾರಿ ವಾಜಪೇಯಿ ಅನುವಾದ: ಗುರುಮೂರ್ತಿ ಪೆಂಡಕೂರು, ಪ್ರಕಟಣೆ : ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ, ವರ್ಷ : ೨೦೦೦, ಬೆಲೆ: ರೂ-೭೦, ಪುಟಗಳು: ೧೦+೧೨೪ (ಡೆಮಿ)

ಅನ್ಯ ಭಾಷೆಗಳಿಂದ ಕನ್ನಡಕ್ಕೆ ವಿಪುಲವಾಗಿ ಸಾಹಿತ್ಯ ಅನುವಾದವಾಗುತ್ತಿರುವ ಸಂತಸದ ಸಂಗತಿ. ಹೀಗೆ ನಾನಾ ಮೂಲಗಳಿಂದ ಸಣ್ಣ ಪುಟ್ಟ ತೊರೆಗಳೋಪಾದಿಯಲ್ಲಿ ಜ್ಞಾನ ಹರಿದು ಬಂದು ಸೇರಿಕೊಂಡಾಗಲೇ ನಮ್ಮ ನುಡಿ ಸಮೃದ್ಧವಾಗುವುದು. ಆ ಕೆಲಸ ಈಗ ಬಹಳ ಬಿರುಸಿನಿಂದ ಆಗುತ್ತಿದೆ. ವರ್ತಮಾನದ ಸಾಂಸ್ಕೃತಿಕ ಲೋಕದ ರೀತಿ ರಿವಾಜಿಗೆ ಅನುಗುಣವಾಗಿ ತಂತ್ರಜ್ಞಾನದ ಭರಾಟೆಯೇ ಪ್ರಧಾನವಾಗಿ ಕಾಣುತ್ತಿದ್ದು ಇಂಗ್ಲಿಷ್ ಭಾಷೆಗೆ ಎಲ್ಲಿಲ್ಲದ ಪ್ರಾಮುಖ್ಯತೆ ಬಂದಿರುವ ಹಿನ್ನೆಲೆಯಲ್ಲಿ ನಮ್ಮ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಹೊಸದಾಗಿ ಒಂದು ಪುಟ್ಟ ಆಲೋಚನೆ ಬಂದು ಸೇರಿಕೊಂಡರೂ ಅದನ್ನು ಸ್ವಾಗತಿಸಬೇಕು. ಸಾಹಿತ್ಯದ ಬೇರೆ ಬೇರೆ ಪ್ರಕಾರಗಳು ಕನ್ನಡಕ್ಕೆ ಬರುತ್ತಿರುವ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡಾಗ ಕವಿತೆಯ ಪ್ರಮಾಣ ಕಡಿಮೆ ಎಂದೇ ಹೇಳಬೇಕು. ಕವಿತೆ ಅನುವಾದವಾಗದ್ದಕ್ಕೆ ಅನೇಕ ಕಾರಣಗಳಿವೆ. ಮೂಲದ ಲಯ, ಸಂಕೇತ, ಸಂಸ್ಕೃತಿ-ನಿಷ್ಠ

ಭಾಷಾವಲಯ-ಹೀಗೆ ಬೇರೆ ಬೇರೆ ಅಂಗಗಳು ಅನುವಾದದಲ್ಲಿ ನಷ್ಟವಾಗುವ ದಿಗಿಲಿರುವುದರಿಂದ ಹೆಚ್ಚು ಜನರು ಆ ಕ್ಷೇತ್ರಕ್ಕೆ ಕೈ ಹಾಕುವುದಿಲ್ಲ. ಆರಂಭದ ಆ ದಿಗಿಲನ್ನು ಪಕ್ಕಕ್ಕಿಟ್ಟು ''ಈ ಅನುಭವ ಕನ್ನಡಕ್ಕೆ ಬೇಕು ಏನಾದರಾಗಲಿ'' ಮುನ್ನುಗ್ಗಿ ಕನ್ನಡಿಸುವವರನ್ನು ನಾವು ಅಭಿನಂದಿಸಬೇಕು. ಅಂಥ ಪ್ರಯತ್ನ ಗಳಿಂದ ಮಾತ್ರ ನಮಗೆ ಹೊರಗಿನದು ದಕ್ಕುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ಈಗಾಗಲೇ ಹೆಸರು ಮಾಡಿರುವ ಶ್ರೀಗುರುಮೂರ್ತಿ ಪೆಂಡಕೂರು ಅವರು ಭಾರತದ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ಮೇರಿ ಇಕ್ಯಾವನ್ ಕವಿತಾಯೆ ಸಂಕಲನದ ಕವಿತೆಗಳನ್ನು ನನ್ನ ಐವತ್ತೊಂದು ಕವಿತೆಗಳು ಎಂದು ಅನುವಾದಿಸಿದ್ದಾರೆ. ಮೂಲ ಕವಿ ಪ್ರಧಾನಿ ಎಂಬ ಕಾರಣಕ್ಕೆ ಅವರ ಕವಿತೆಗಳ ಅನುವಾದವನ್ನು ಕೈ ಗೆತ್ತಿಕೊಳ್ಳದೆ ನಿಜವಾದ ಕಾವ್ಯಪ್ರೀತಿಯಿಂದ ಪೆಂಡಕೂರು ಅವರು ಇಲ್ಲಿ ಅನುವಾದ ಕಾರ್ಯದಲ್ಲಿ ತೊಡಗಿರುವುದು ವೇದ್ಯವಾಗುತ್ತದೆ. ವಾಜಪೇಯಿಯವರ ವ್ಯಕ್ತಿತ್ವದ ಆಕರ್ಷಣೆಯೂ ಹಿನ್ನೆಲೆಗಿದೆ ಎನ್ನುವುದನ್ನು ನಾವು ಮರೆಯುವಂತಿಲ್ಲ.

೨

ವಾಜಪೇಯಿಯವರು ದೇಶ ದಾಸ್ಯದ ಶೃಂಖಲೆಯಲ್ಲಿದ್ದಾಗಲೇ ಜನ್ಮಿಸಿದವರು. ಈ ಪುಣ್ಯಭೂಮಿ ಭಾರತದ ಹೆಗ್ಗಳಿಕೆ, ಹಿರಿಮೆಯ ಬಗ್ಗೆ ಅವರಿಗೆ ಅಪಾರವಾದ ಗೌರವ. ಹಾಗಾಗಿ ವಿಮೋಚನೆಗೊಂಡ ಭಾರತದ ಚೈತನ್ಯ ನವವಿಧದಲ್ಲಿ ಪಲ್ಲವಿಸಿ ಸುತ್ತಲೂ ಸುಗಂಧ ಬೀರುವುದೆಂಬ ಅನನ್ಯ ನಂಬಿಕೆಯಿಂದ ಅವರು ಕವಿತೆ ಬರೆಯುತ್ತಾರೆ. ದಾಸ್ಯದ ಅಪಮಾನದ ಅನುಭವವಿದ್ದು, ಸ್ವಾತಂತ್ರ್ಯದ ಪರಿಮಳವನ್ನು ಆಘ್ರಾಣಿಸಿದ ಎಲ್ಲ ಮಹನೀಯರ ಮನಸ್ಸಿನಲ್ಲಿ ಈ ಭಾವನೆ ಮೂಡುವುದು ಸಹಜ.

ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಬ್ರಿಟಿಷರು ತಮ್ಮ ಊರಿಗೆ ಮರಳುವಾಗ ಭಾರತದಲ್ಲಿ "imperishable Empire" ಒಂದನ್ನು ನಾವು ಬಿಟ್ಟು ಹೋಗುತ್ತಿದ್ದೇವೆ ಎಂದು ಅವರು ಹೇಳಿಕೊಂಡಿದ್ದರು. ''ಅಳಿಸಲಾಗದ ಸಾಮ್ರಾಜ್ಯ'' ವೆಂಬುದು ಅದರ ಅರ್ಥ. ಇಂಗ್ಲಿಷ್ ಭಾಷೆ, ಚಿಂತನೆ, ಇತ್ಯಾದಿಗಳನ್ನೇ ಅವರು ಹಾಗೆ ಕರೆದಿದ್ದು. ಆದರೆ ಅಪ್ಪಟ ಭಾರತೀಯನ ಹೃದಯದಲ್ಲಿ ಯಾವ ಬ್ರಿಟಿಷ್‌ರಿಂದಲೂ ನಾಶ ಮಾಡಲಾಗದ ಒಂದು ಸನಾತನ ಸಂಸ್ಕೃತಿ ಒಂದಿರುತ್ತದೆ. ಅದು ನಿಜವಾದ "imperishable Empire" ಅಟಲ್ ಬಿಹಾರಿ ವಾಜಪೇಯಿಯವರು ಇಲ್ಲಿನ ಬಹುಪಾಲು ಕವಿತೆಗಳಲ್ಲಿ ಸಾಬೀತು ಪಡಿಸುತ್ತಿರುವುದು ಆ ಸಾಮ್ರಾಜ್ಯದ ಕುರುಹುಗಳನ್ನು.

ಅಪ್ರತಿಮ ದೇಶಪ್ರೇಮದ ಸಂಕೇತವಾಗಿ ಜನಸಂಘ, ಅದಕ್ಕೆ ಮೊದಲು ಆರ್ ಎಸ್ ಎಸ್ ಸಂಘಗಳು ಸ್ಥಾಪನೆಗೊಂಡದ್ದಕ್ಕೆ ಚಾರಿತ್ರಿಕವಾದ ಕಾರಣಗಳಿವೆ. ಅದನ್ನು ಮರೆತು ನಾವು ಮಾತನಾಡುವುದು ಔಚಿತ್ಯಪೂರ್ಣವೆನಿಸುವುದಿಲ್ಲ. ಹಾಗಾಗಿ ವಾಜಪೇಯಿಯವರು ಈ ದೇಶದ ಚಾರಿತ್ರಿಕವಾದ ಬೆಳವಣಿಗೆಗಳ, ಸಾಂಸ್ಕೃತಿಕ ಲೋಕದ ಬದಲಾವಣೆಗಳ ಪ್ರತಿನಿಧಿಯಾಗಿದ್ದಾರೆ. ರಾಜಕೀಯದ ಬಹಿರ್ಲೋಕಕ್ಕೆ ಅವರು ಪದಾರ್ಪಣ ಮಾಡಬೇಕಾದ್ದು ಅನಿವಾರ್ಯವಾದದ್ದರಿಂದ ಸೂಕ್ಷ್ಮ ಹೃದಯದ ಕವಿ ಹಿನ್ನೆಲೆಗೆ ಸರಿಯಬೇಕಾಯಿತು. ಅವರು ಸಾರ್ವಜನಿಕ ಜೀವನದಲ್ಲಿ ಇದುವರೆಗೆ ನಡೆಸಿರುವ ಚಿಂತನೆಗಳಲ್ಲಿ ಕವಿಯೊಬ್ಬನ ನಿರ್ದೇಶನವಿದೆಯೆಂದು ನಾವು ತಿಳಿಯಬಹುದಾದರೂ, ಕವಿ ನೇಪಥ್ಯದಲ್ಲಿರಬೇಕಾಯಿತೆಂಬುದು ಸ್ಪಷ್ಟ. ಜಗತ್ತಿನ ಇತಿಹಾಸವನ್ನು ಅವಲೋಕಿಸುವಾಗ ಇಂಥ ಉದಾಹರಣೆಗಳು ನಮಗೆ ಹಲವು ಸಿಕ್ಕುತ್ತವೆ. ಸಾರ್ವಜನಿಕ ಜೀವನದಲ್ಲಿದ್ದೂ ಸಾಹಿತ್ಯವನ್ನು ಜೊತೆಜೊತೆಗೇ ಕೃಷಿ ಮಾಡಿದವರು ಬಹಳ ಮಂದಿ ಇದ್ದಾರೆ. ಆದರೆ ನಾವು ಆಸೆಪಡುವ ಪ್ರಮಾಣದಲ್ಲಿ ಅದು ದಕ್ಕದಲ್ಲ ಎಂಬ ಕೊರಗು

ವಾತ್ರ ಇರುತ್ತದೆ. ದಕ್ಕಿದಷ್ಟಕ್ಕೆ ನಾವು ಸಂತೋಷಪಡಬೇಕು.

೩

ಈ ಸಂಕಲನದಲ್ಲಿ ನಾಲ್ಕು ವಿಭಾಗಗಳಲ್ಲಿ ಕವನಗಳನ್ನು ಇರಿಸಲಾಗಿದೆ : "ರಾಷ್ಟ್ರೀಯತೆಯ ದನಿಗಳು", "ಆಹ್ವಾನದ ಸ್ವರ" ಮತ್ತು "ವಿಧ ವಿಧ ಸ್ವರ" ಆರಂಭದ ಮೊದಲ ೨೩ ಕವಿತೆಗಳಿಗೆ ವಿಭಾಗದ ಶೀರ್ಷಿಕೆ ಇಲ್ಲ. ಈ ಭಾಗದ ಕವಿತೆಗಳು ಬಹುಪಾಲು ಅಂತರಂಗ ವೀಕ್ಷಣೆಗೆ ಮೀಸಲಾದವು. ಹಾಗಾಗಿ, ಮನುಷ್ಯನ ಇರವಿನ ಬಗೆಗೆ ಇಲ್ಲಿ ಚಿಂತನೆ ಯಿದೆ, ಕಳೆದು ಹೋಗುತ್ತಿರುವ ಕಾಲದ ಹರಿವಿನ ಬಗ್ಗೆ ದಿಗಿಲಿದೆ, ಹಾಡಲಾರದ ಸುಮ್ಮನಿರಲೂ ಆರದ ದ್ವಂದ್ವದ ಬಗೆಗೆ ಚಡಪಡಿಕೆಯಿದೆ, ಲೌಕಿಕ ಬದುಕು ಹಸನಾಗ ದೇಕೆ ಎಂಬುದಕ್ಕೆ ಉತ್ತರ ಹುಡುಕುವ ಒತ್ತಡ ವಿದೆ, ಮನವ ಸರಳಗೊಳಿಸಬೇಕಾದ್ದು ಅನಿವಾರ್ಯವೆಂಬ ಅರಿವಿದೆ, ಬಹಿರಂಗಕ್ಕೆ ವ್ಯಕ್ತಿ ಗೆದ್ದವನೆಂದು ಗೊತ್ತಾಗುವಾಗಲೂ ಅವನ ಒಳಮನಸ್ಸು ಸೋಲನ್ನು ದಾಖಲಿಸುವ ಪ್ರಾಮಾಣಿಕತೆಯಿದೆ- ಒಟ್ಟಿನಲ್ಲಿ ಈ ಭಾಗ ಸಂಕೀರ್ಣವಾಗಿದೆ, ಕಾವ್ಯದ ಸ್ಪರ್ಶದಿಂದ ಚೈತನ್ಯದಾಯಕವಾಗಿದೆ. ಕೆಲವು ಕವಿತೆಗಳ ಸಾಲುಗಳನ್ನು ಮೆಲುಕು ಹಾಕುವುದು ಯೋಗ್ಯವೆಂದು ತೋರುತ್ತದೆ.

"ಮನುಷ್ಯ ಮೇಲೂ ಇರುವುದಿಲ್ಲ ಕೆಳಗೂ ಇರುವುದಿಲ್ಲ
ದೊಡ್ಡವನೂ ಆಗುವುದಿಲ್ಲ, ಸಣ್ಣವನೂ ಆಗುವುದಿಲ್ಲ
ಮನುಷ್ಯ ಮನುಷ್ಯ ಮಾತ್ರನಾಗಿರುತ್ತಾನೆ".
('ಪರಿಚಯ')

"ಎತ್ತರದ ಬೆಟ್ಟದ ಮೇಲೆ
ಮರಗಿಡ ಬೆಳೆಯುವುದಿಲ್ಲ
ತರುಲತೆಗಳು ಕುಡಿಯಿಡುವುದಿಲ್ಲ
ಹುಲ್ಲು ಹಾಸಿ ನಳನಳಿಸುವುದಿಲ್ಲ"
('ಎತ್ತರ'-'ಪದ್ಮ ವಿಭೂಷಣ' ಪ್ರದಾನ ಮಾಡಿದಾಗ ರಚಿಸಿದ ಕವಿತೆ)

ಇದೇ ಪದ್ಯದ ಕೊನೆಯಲ್ಲಿ ಬರುವ ಪ್ರಾರ್ಥನೆ ಅತ್ಯಂತ ಗಮನಾರ್ಹವಾದದ್ದು.

ನನ್ನ ಪ್ರಭುವೆ
ನನಗೆ ಅಂತಹ ಎತ್ತರವನೆಂದೂ ನೀಡದಿರು
ಎಲ್ಲರನು ದೂರೀಕರಿಸುವ
ಒಣತನವನೆಂದೂ ನೀಡದಿರು! ('ಎತ್ತರ')
ಏನೀ ಬದುಕು ? ಸಾವೇ ಮೇಲು
ಆತಂಕವು ತುಂಬಿದೆ ಗಲ್ಲಿಗಳಲ್ಲು
ನಾನೂ ಅಳುವೆ ಸುತ್ತಲು ಮುತ್ತಲು
ಯಾರೂ ಇಲ್ಲದೆ ಇರುವಾಗ
ದೂರದಲಾರೋ ಅಳುವಾಗ ('ದೂರದ ಲ್ಲಾರೋ ಅಳುತ್ತಿರುವರು')

ಜನ್ಮ ದಿನಗಳಂದು ವಾಜಪೇಯಿಯವರು ತಮ್ಮ ಬದುಕಿನ ಸಾಧನೆ-ವೇದನೆಯ ಕುರಿತು ಹಿಮ್ಮುಖವಾಗಿ ನೋಡಿ ಪದ್ಯಗಳನ್ನು ಬರೆದಿದ್ದಾರೆ. ಇನ್ನೂ ಸರಳವಾಗಬೇಕು, ಇನ್ನೂ ಸಾಧಿಸಬೇಕು ಎಂಬ ಸಂಕಲ್ಪವನ್ನು ಪುನರ್ನವೀಕರಿಸುತ್ತಾರೆ. ಇಂಥಲ್ಲಿ ಬಹಳ ನವಿರಾದ ಭಾವನೆಗಳು ಅವರ ಮನದಲ್ಲಿ ಸುಳಿದು ಸರಿಯುತವೆ.

"ಕೆಲ ಪ್ರಶ್ನೆಗಳಿಗೆ ಉತ್ತರ ಸಿಗದಿದ್ದರೆ
ಏನಾಯಿತು ?
ಆದರೆ ಹುಡುಕಾಟ ನಿಲ್ಲದಿರಲಿ"
('ಯಕ್ಷಪ್ರಶ್ನೆ')

ಇನ್ನು ಉಳಿದ ಮೂರು ವಿಭಾಗಗಳಲ್ಲಿ ಬರುವ ಕವಿತೆಗಳು ಬಹಿರಂಗಕ್ಕೆ ಸಂಬಂಧಿಸಿದವು. ಇಲ್ಲೆಲ್ಲ ರಾಷ್ಟ್ರಪ್ರೇಮದ ಕಡೆ ಹೆಚ್ಚು ಗಮನ ಹರಿದಿದೆ. ಆತ್ಮಾಹುತಿಗೆ ಪಣತೊಡು, ಸ್ವಾತಂತ್ರ್ಯದ ಕನಸು ಇನ್ನೂ ನನಸಾಗಿಲ್ಲ' ಎಂಬ ಅಭಿಪ್ರಾಯ ಹಲವು ಕವನಗಳಲ್ಲಿ ಪುನರಾವೃತ್ತಿಯಾಗುತ್ತದೆ. "ನಾನು" ಎಂಬ ಪದ್ಯದ ಈ ಸಾಲುಗಳನ್ನು ಗಮನಿಸಿ:

"ಹಿಂದೂ ತನು-ಮನ, ಹಿಂದೂ ಜೀವನ, ಕಣ ಕಣದಲಿ ಹಿಂದೂ!
ನಾ ಶಂಕರನಂತೆ ಕ್ರೋಧಾನಲದಿಂದ ಜಗವನೆಲ್ಲ ಸುಡಬಲ್ಲೆ"

ನಾನೆಂಬ ಅಂತರಾಳಕ್ಕೆ ಅಕ್ಷಿಯನ್ನು ನೆಟ್ಟು ಶೋಧಿಸುವ ಕ್ರಮವನ್ನು ಬಿಟ್ಟು ಕವಿ ಯಾರದೋ ಒತ್ತಡಕ್ಕೆ ಮಣಿದು ಅವರಿಚ್ಛೆಗನು ಸಾರವಾಗಿ ಉಚ್ಚರಿಸುತ್ತಿರುವಂತೆ ಕಾಣುತ್ತದೆ. ಒಂದು ಬೃಹತ್ ಜನಸ್ತೋಮದ ವಕ್ತಾರನೆಂದು ನುಡಿಯ ತೊಡಗುವುದರಿಂದ ಆಪ್ತವಾದ ಅನುಭವಗಳ ಅಭಿವ್ಯಕ್ತಿ ಹಿಂದಕ್ಕೆ ಸರಿಯು

ತ್ತದೆ. ಸಕಲರಿಗೂ ಲೇಸ ಬಯಸುವ ಸನಾತನ ದೃಷ್ಟಿಯ ಫಲವಾಗಿದ್ದರೂ ಆಳುವ ವರ್ಗದ ಪ್ರತಿನಿಧಿಯಾಗಿ ಬೇರೆ ಧಾಟಿಯಲ್ಲಿ ಹಾಡುವ ಅನಿವಾರ್ಯತೆ ವಾಜಪೇಯಿಯವರಿಗೆ ಒದಗಿರುವುದನ್ನು ನಾವು ಗಮನಿಸುತ್ತಿದ್ದೇವೆ.

ಈ ಪುಸ್ತಕ ಪರಿಚಯ ಬರೆಯುತ್ತಿರುವ ಕಾಲಕ್ಕೆ ಆಯೋಧ್ಯೆಯ ರಾಮಮಂದಿರ ನಿರ್ಮಾಣ ಕಾರ್ಯ ಅಪೂರ್ಣವಾಗಿದೆಯೆಂದು ಘೋಷಿಸಿ ಉದಾರವಾದಿ ಧೋರಣೆಯವರೆಂದು ಖ್ಯಾತರಾದ ವಾಜಪೇಯಿಯವರು ದೊಡ್ಡ ವಿವಾದಕ್ಕೆ ಕಾರಣರಾಗಿ ಕೆಲ ದಿನಗಳಿಂದ ಸಂಸತ್ತಿನ ಕಾರ್ಯಕಲಾಪಗಳು ಸ್ಥಗಿತಗೊಂಡಿವೆ. ರಾಜಕಾರಣಿಯಾದ ವ್ಯಕ್ತಿಯ ಒತ್ತಡಗಳು ಅನೇಕ. ಕವಿಗೆ ಕಣ್ಣೆದಿರಿಗಿರುವ ವಾಸ್ತವನ್ನು ಭೇದಿಸಿ ನೋಡುವ ಅಸಾಮಾನ್ಯ ಶಕ್ತಿ ಇರುತ್ತದೆ. ರಾಜಕಾರಣಿಗೆ ಆ ಶಕ್ತಿಯಿದ್ದರೂ ಅದನ್ನು ಮುನ್ನೆಲೆಗೆ ಬಿಡುವ ಸ್ವಾತಂತ್ರ್ಯ ಇರುವುದಿಲ್ಲ. ಈ ಇಕ್ಕಟ್ಟಿನಲ್ಲಿ ಸೂಕ್ಷ್ಮ ಹೃದಯದ ವಾಜಪೇಯಿಯವರು ಕಾವ್ಯ ರಚನೆ ಮಾಡಿದ್ದಾರೆ. ತಮ್ಮ ವಿಶಿಷ್ಟ ಬದುಕಿನ ಪರಸ್ಪರ ವಿರುದ್ಧ ದಿಕ್ಕಿನ ಸೆಳೆತಗಳಿಗೆ ಅವರು ದನಿಕೊಟ್ಟಿದ್ದರೆ ಇನ್ನೂ ಉತ್ಕೃಷ್ಟ ಕಾವ್ಯ ಅವರಿಂದ ಸೃಷ್ಟಿಯಾಗುತ್ತಿತ್ತು ; ಆದರೆ ವಾಜಪೇಯಿಯವರು ''ಧ್ವನಿ ವರ್ಧಕದ'' ಹೊರಗಿನ ದೊಡ್ಡದನಿಗೆ ಅನಿವಾರ್ಯವಾಗಿ ತೃಪ್ತಿಪಡುತ್ತಾ ಮಂದರದ ಒಳದನಿಯನ್ನು ಹತ್ತಿಕ್ಕಿದ್ದಾರೆ ಎನ್ನಿಸುತ್ತದೆ. ಶ್ರೇಷ್ಠ ಕಾವ್ಯದ ಖನಿ ಇರುವುದು ಮಂದರದ ಈ ಒಳದನಿಯಲ್ಲಿ ಎಂಬುದನ್ನು ಕಾವ್ಯದ ಜಾಡು ಬಲ್ಲವರೆಲ್ಲರೂ ತಿಳಿದಿರುವರು. ಒಳದನಿಯ ಸುಳಿವನ್ನು ''ವರುಷವೊಂದು ಕಳೆದು ಹೋಯಿತು'', ''ಜೀವನ ಸಂಧ್ಯೆಯು ಮೂಡುತಿದೆ'', ''ರೋದಿಸಿ-ರೋದಿಸಿ ರಾತ್ರಿ ಮಲಗಿತು', ''ದ್ವಂದ್ವ'' ಮುಂತಾದ ಕವನಗಳಲ್ಲಿ ಕಾಣಬಹುದು. ''ಬಬಲಿಯ ದೀಪಾವಳಿ' ಈ ಸಂಕಲನದ ಶ್ರೇಷ್ಠ ಕವನಗಳಲ್ಲೊಂದು. ಬಬಲೀ ಮತ್ತು ತಾಲೀ ಎಂಬ ತಮ್ಮ ಮುದ್ದಿನ ನಾಯಿಗಳನ್ನು ಕುರಿತ ಪದ್ಯವಿದು. ದೀಪಾವಳಿಯಂದು ಪಟಾಕಿಯ ಸದ್ದಿಗೆ ಬೆದರಿ ಓಡಿ ಹೋಗುವ ನಾಯಿಗಳು ಮತ್ತೆ ಸಿಕ್ಕುವ ಚಡಪಡಿಕೆಯನ್ನು ಅತ್ಯಂತ ಮಾರ್ಮಿಕವಾಗಿ ಈ ಕವನ ಪ್ರತಿಬಿಂಬಿಸುತ್ತದೆ. ಮಾತಿಲ್ಲದ ಈ ಜಾನುವಾರುಗಳನ್ನು ಜೀವಜಗತ್ತಿನ ಜೊತೆಗಾರರಾಗಿ ಕವಿ ಕಾಣುತ್ತಾರೆ. ಈ ಪುಟ್ಟನಾಯಿಗಳು ಕೊಟ್ಟ ಸುಖವು ಅನಿರ್ವಚನೀಯವಾದದ್ದೆಂದು ತಿಳಿಸುತ್ತಾರೆ. ಹೆಚ್ಚು ಮಾತುಗಳನ್ನು ಪೋಲು ಮಾಡದೆ ಕಡಿಮೆ ಉಕ್ತಿಗಳಲ್ಲಿ ಗರಿಷ್ಠ ಪರಿಣಾಮವನ್ನು ಮೂಡಿಸುತ್ತಾರೆ. ಇದೊಂದು ಗೆದ್ದ ಕವನ.

೪

ಈ ಸಂಕಲನದಲ್ಲಿ ''ಕವಿ ಪರಿಚಯ'' ಹಾಗೂ ''ಕಾವ್ಯ ವೈಭವ''ವೆಂಬ ಅನುಬಂಧವಿದೆ. ಇದರ ಜೊತೆಗೆ ಅಟಲ್ ಬಿಹಾರಿ ವಾಜಪೇಯಿಯವರು 'ನಡೆದು ಬಂದ ದಾರಿ'ಯ ಗುರುತುಗಳಿವೆ. ಗದಗದ ಪ್ರಭು ಗ್ರಾಫಿಕ್ಸ್‌ನವರು ಉತ್ತಮವಾದ ರಕ್ಷಾ ಪುಟವನ್ನು ವಿನ್ಯಾಸಗೊಳಿಸಿದ್ದಾರೆ. ಆರಂಭದಲ್ಲಿ ಹೇಳಿದಂತೆ ನಾನಾ ದಿಕ್ಕುಗಳಿಂದ ಇಂದು ಕನ್ನಡನುಡಿಗೆ ಹೊಸ ದನಿಗಳು, ಅನ್ಯಭಾಷೆಯ ಅನುಭವಗಳು ಯಥೇಚ್ಛವಾಗಿ ಬಂದು ಸೇರುತ್ತಿವೆ. ಈ ನಿಟ್ಟಿನಲ್ಲಿ ಶ್ರೀಗುರುಮೂರ್ತಿ ಪೆಂಡಕೂರು ಅವರು ಕವಿ ವಾಜಪೇಯಿಯವರನ್ನು ಕನ್ನಡಕ್ಕೆ ತಮ್ಮ ಉತ್ತಮವಾದ ಅನುವಾದದ ಮೂಲಕ ಪರಿಚಯಿಸಿ ಅಭಿನಂದನೆಗೆ ಅರ್ಹರಾಗಿದ್ದಾರೆ.

ಪ್ರೊ. ಸಿ. ನಾಗಣ್ಣ
ನಂ. ೩೯೯೫, ೨೧/ಸಿ ಮೆಯಿನ್
ವಿಜಯನಗರ ೨ನೇ ಹಂತ
ಮೈಸೂರು

ಬಾಬಾ ಆಮಟೆ: ಬರೆದವರು : ಡಾ. ಭ.ಗ. ಬಾಪಟ, ಕನ್ನಡ ಅನುವಾದ : ವಿರೂಪಾಕ್ಷ ಕುಲಕರ್ಣಿ, ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಶನ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧. ಮೊದಲ ಮುದ್ರಣ : ೧೯೯೯, ಬೆಲೆ: ರೂ ೬೫.

ಮರಾಠಿ ಭಾಷೆಯಲ್ಲಿ ಡಾ. ಭ.ಗ. ಬಾಪಟರವರು ಬರೆದಿರುವ ಈ ಪುಸ್ತಕವನ್ನು ವಿರೂಪಾಕ್ಷ ಕುಲಕರ್ಣಿಯವರು ಸಂಕ್ಷಿಪ್ತ ರೀತಿಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಬಾಬಾ ಆಮಟೆಯವರು ಮಹಾರಾಷ್ಟ್ರದ ವರ್ಧಾ ಜಿಲ್ಲೆಯ ಹಿಂಗಣಘಾಟ ಎಂಬ ಊರಲ್ಲಿ ೧೯೧೪ರ ಡಿಸೆಂಬರ್ ೨೬ನೇ ತಾರೀಕಿಗೆ ಹುಟ್ಟಿದರು. ಬಾಬಾ ಅವರಿಗೆ ಚಿಕ್ಕವರಿದ್ದಾಗಲಿಂದಲೇ ತಮ್ಮ ತಂದೆಯೊಂದಿಗೆ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ತಮ್ಮ ಪರಂಪರೆಯನ್ನು ಬಿಟ್ಟು ಬೇರೊಂದು ಯೋಚನೆಯೊಂದಿಗೆ ತನ್ನದೇ ಆದ ಅಭಿಪ್ರಾಯದಂತೆ ನಡೆಯತೊಡಗಿದರು. ಇದು ಅವರ ತಂದೆಗೆ ಹಿಡಿಸಲಿಲ್ಲ. ಇತರರ ದುಃಖವನ್ನು ನೋಡಿ ಬಾಬಾ ಅವರು ದುಃಖಿತರಾಗುತ್ತಿದ್ದರು.

ದೀಪಾವಳಿಯ ಹಬ್ಬಕ್ಕಾಗಿ ಪಟಾಕಿ ಕೊಳ್ಳಲು ಬಾಬಾ ಅವರಿಗೆ ದುಡ್ಡು ದೊರೆತ್ತಿತ್ತು. ಪಟಾಕಿಕೊಳ್ಳಲೆಂದು ಅಂಗಡಿಗೆ ಹೋದಾಗ ಅಂಗಡಿಯ ಬಳಿ ಒಬ್ಬ ಕುರುಡ ಭಿಕ್ಷುಕ ನಿಂತಿದ್ದ. ಅವನನ್ನು ನೋಡಿದ ಬಾಬಾ ಅವರು ತಮ್ಮ ಬಳಿಯಿದ್ದ ದುಡ್ಡನ್ನು ಭಿಕ್ಷುಕನ ತಟ್ಟೆಗೆ ಹಾಕಿದರು. ದುಡ್ಡನ್ನು ಪಟಾಕಿಕೊಂಡು ಬೂದಿ ಮಾಡುವ ಬದಲು ಭಿಕ್ಷುಕನಿಗೆ ಕೊಟ್ಟರೆ ಅವನಿಗೆ ನಾಲ್ಕು ತುತ್ತು ಅನ್ನವಾದರೂ ಸಿಗಬಹುದೆಂದು ಅವರ ಆಲೋಚಿಸಿದರು. ಹೀಗೆ ಚಿಕ್ಕವರಿದ್ದಾಗಲಿಂದಲೇ ಬಾಬಾ ಅವರು ತಮಗಾಗಿ ಏನನ್ನೂ ಇಟ್ಟುಕೊಳ್ಳದೇ, ಸ್ವಾರ್ಥದ ಆಲೋಚನೆ ಬಿಟ್ಟು ಬಡವರಿಗಾಗಿ ತ್ಯಾಗಮಾಡುತ್ತ ದೊಡ್ಡವರಾದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಅವರು ಸೆರೆಮನೆವಾಸವನ್ನು ಅನುಭವಿಸಿದರು. ವಕೀಲರಾಗಿದ್ದ ಅವರು ಜನರಿಂದ ದೂರವಿದ್ದೂ , ಸನ್ಯಾಸಿಯಾಗಿ, ಹಿಮಾಲಯದಲ್ಲಿ ವಾಸಿಸುವ ಸಾಧು ಸಂತರ ಜೀವನ ಕಂಡು ಸನ್ಯಾಸಿಯಾಗುವುದರಿಂದ ಯಾರಿಗೂ ಲಾಭವಿಲ್ಲವೆಂದು ಅರಿತು ತನ್ನ ವಕೀಲ ವೃತ್ತಿಗೆ ಮರಳಿ ಬಂದರು. ಜನರ ಮಧ್ಯದಲ್ಲಿದ್ದು ಜನರೊಂದಿಗೆ ಕೆಲಸಮಾಡಿ ಜನರಿಗೆ ತನ್ನಿಂದಾದ ಸಹಾಯವನ್ನು ಮಾಡಬೇಕೆಂದು ನಿಶ್ಚಯಿಸಿದರು. ಸ್ವತಃ ಶ್ರೀಮಂತರಾಗಿದ್ದ ಬಾಬಾ ಅವರು ಶ್ರೀಮಂತಿಕೆಯನ್ನು ತೊರೆದು ಪತ್ನಿ ಸಾಧನಾ ಜತೆ ಕುಷ್ಠರೋಗಿಗಳನ್ನು ಉದ್ಧಾರಮಾಡಿ ಅವರೊಂದಿಗೆ ಬದುಕುತ್ತ ಅನೇಕ ಕಾರ್ಯಗಳನ್ನು ಮಾಡಿದರು, ಅವರ ಇಬ್ಬರು ಮಕ್ಕಳು ಡಾಕ್ಟರರಾಗಿ, ಡಾಕ್ಟರ್ ಹುಡುಗಿಯರನ್ನು ವಿವಾಹವಾಗಿ ಬಾಬಾ ಅವರ ಜತೆ ಕುಷ್ಠರೋಗಿಗಳು, ಹರಿಜನರ ಮತ್ತು ಬಡವರ ಸೇವೆಯನ್ನು ಮಾಡುತ್ತಿದ್ದಾರೆ.

ಕುಷ್ಠರೋಗ ತಲೆಮಾರಿನಿಂದ ಇದ್ದ ರೋಗ. ಅದಕ್ಕಾಗಿ ಮಾಡಬೇಕಾದ ಚಿಕಿತ್ಸೆ ಜನರಿಗೆ ತಿಳಿದಿರಲಿಲ್ಲ. ಈ ರೋಗ ಇದ್ದವರು ವಿಕಾರ ರೂಪ ಹೊಂದಿ ಇತರ ಜನರು ಅವರನ್ನು ಹೇಸಿಗೆಯಿಂದ ಬಹಿಷ್ಕರಿಸುತ್ತಿದ್ದರು. ಹೀಗಿದ್ದಾಗ ಬಾಬಾ ಅವರು ಕುಷ್ಠರೋಗಿಗಳಿಗೆ ಚಿಕಿತ್ಸೆ ನೀಡಿದುದಲ್ಲದೆ, ಅವರು ಸಮಾಜದಲ್ಲಿ ಸೇರುವಂತೆ ಮಾಡಿದರು. ರೋಗಮುಕ್ತರಾದ ನಂತರ ತೋಟಗಾರಿಕೆ, ಕಮ್ಮಾರ, ಬಡಗಿ, ನೇಕಾರ ಇತ್ಯಾದಿ ಕೆಲಸಗಳಲ್ಲಿ ತೊಡಗುವಂತೆ ಮಾಡಿದರು. ಇದರಿಂದಾಗಿ ಕುಷ್ಠರೋಗಿಗಳು ಹಣಗಳಿಕೆಗೆ ದಾರಿ ಕಂಡುಕೊಳ್ಳುವಂತಾಯಿತು.

ವಕೀಲರಾಗಿದ್ದ ಬಾಬಾ ಅವರು ಕುಷ್ಠ ರೋಗದ ಚಿಕಿತ್ಸೆಯನ್ನು ಅರಿಯಲು 'ಸ್ಕೂಲ್ ಆಫ್ ಟ್ರಾಪಿಕಲ್ ಮೆಡಿಸಿನ್' ನಲ್ಲಿ ಡಿಪ್ಲೊಮಾ ಮಾಡಿದರು.

ಮಾಡಿಯಾ ಬುಡಕಟ್ಟಿನವರ ನಾಡಿಗೆ ಹೋಗಬೇಕೆಂಬ ಬಾಬಾ ಅವರ ಆದೇಶದಂತೆ ಅವರ ಮಗ ಡಾ. ಪ್ರಕಾಶ ಮತ್ತು ಅವರ ಪತ್ನಿ ಮಂದಾಕಿನಿಯವರು ಭಮರಾಗಡದ ಕಾಡಿನಲ್ಲಿರುವ ಮಾಡಿಯಾ ಜನರಿಗೆ ವಿದ್ಯೆ ಕಲಿಸಲು ಅವರ ಜತೆ ಹೋಗಿ ನೆಲಸಿದರು. ಭಮರಾಗಡವು ಮಹಾರಾಷ್ಟ್ರದ ಗಡಚಿರೋಲಿ ಜಿಲ್ಲೆಯ ಬುಡಕಟ್ಟು ಜನಾಂಗದ ಬೀಡು. ಕಾಡುಗಳಿಂದ ಸುತ್ತುವರಿದ ಜಾಗದಲ್ಲಿರುವ ಇಲ್ಲಿಯ ಜನರಿಗೆ ನಗರದ ಸಂಪರ್ಕವಿರಲಿಲ್ಲ.

೧೯೭೦ರಲ್ಲಿ ಬೆನ್ನು ಹುರಿಯ ನೋವಿನಿಂದ ಬಳಲಿದ ಬಾಬಾ ಅವರು ಇಂಗ್ಲೆಂಡಿನಲ್ಲಿ ಚಿಕಿತ್ಸೆಗೊಳಗಾದ ನಂತರ ಮಲಗಿದಲ್ಲೆ ಇರುವಂತಾದರು. ಕುಳಿತುಕೊಳ್ಳುವುದು ಅಸಾಧ್ಯವಾಯಿತು. ೧೯೮೨ರಲ್ಲಿ ಅವರು ಹೃದಯಾಘಾತಕ್ಕೀಡಾಗಿದ್ದರು. ಹೀಗಿದ್ದರೂ ಅವರು ಈಗಲೂ ದೂರ ದೂರದ ಊರಿಗೆ ಪ್ರಯಾಣಮಾಡಿ ಜನರನ್ನು ಉದ್ಧಾರ ಮಾಡುತ್ತಿದ್ದಾರೆ. ಹೊಸ ಹೊಣೆಗಳನ್ನು ಹೊರುವ ಆಸೆಯಿರುವ ಅವರ ಮೇಲೆ ಈ ಖಾಯಿಲೆ ಯಾವ ಪರಿಣಾಮವನ್ನೂ ಮಾಡುವುದಿಲ್ಲ.

ನರ್ಮದಾ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡಿದ ಬಾಬಾ ಅವರು ಅದರ ಕುರಿತಾಗಿ ಪುಸ್ತಕ ಬರೆದಿದ್ದಾರೆ. ಆನಂದವನದಲ್ಲಿ ತಮ್ಮ ಕೆಲಸವನ್ನು ಯಶಸ್ವಿಯಾಗಿ ಸಾಧಿಸಿದ ಬಾಬಾ ಅವರು ಈಗ ತಮ್ಮ ಪತ್ನಿ ಸಾಧನಾರವರ ಜತೆ ನರ್ಮದೆಯ ದಡದಲ್ಲಿ ಅಲ್ಲಿಯ ಜನರ ಉದ್ಧಾರಕ್ಕಾಗಿ ವಾಸಿಸುತ್ತಿದ್ದಾರೆ. ಹಣದ ಕೊರತೆಯಿದ್ದಾಗಲೂ ಜನರ ಹಿತಕ್ಕಾಗಿ ದುಡಿದ ಮತ್ತು ಈಗಲೂ ದುಡಿಯುತ್ತಿರುವ ಈ ಮೇಧಾವಿಯ ಕುರಿತಾಗಿ ಬರೆದ ಮರಾಠಿ ಪುಸ್ತಕವನ್ನು ಕನ್ನಡದ ಓದುಗರಿಗಾಗಿ ವಿರೂಪಾಕ್ಷ ಕುಲಕರ್ಣಿಯವರು ಅನುವಾದಿಸಿ ತುಂಬ ಉಪಕಾರ ಮಾಡಿದ್ದಾರೆ.

ಮುದ್ರಣ ದೋಷವಿಲ್ಲದೆ ಅಂದವಾಗಿ ನವಕರ್ನಾಟಕ ಪಬ್ಲಿಕೇಶನ್ಸ್‌ನವರು ಇದನ್ನು ಪ್ರಕಟಿಸಿರುವುದು ಬಲು ಸಂತೋಷ. ಇದು ಓದುಗರಿಗೆ ಒಂದು ಮಾರ್ಗದರ್ಶಿ ಪುಸ್ತಕವಾಗಿದೆ.

ಭಾರತಿ ಭಟ್
೧೩೫, ಡಿ-ಬ್ಲಾಕ್,
೨೨ನೇ ಕ್ರಾಸ್ ೩ನೇ ಮೈನ್,
ವಿಜಯನಗರ ೩ನೇ ಹಂತ,
ಮೈಸೂರು-೫೭೦ ೦೧೭

ತಿದ್ದುಪಡಿ

ನವೆಂಬರ್ ೨೦೦೦ದ ಪುಸ್ತಕ ಪ್ರಪಂಚದಲ್ಲಿ ಪ್ರೊ. ಸಿ. ನಾಗಣ್ಣನವರ ಲೇಖನ ನೊಬೆಲ್ ಬಹುಮಾನದ ಕಥೆಯಲ್ಲಿ 'ನೊಬೆಲ್ ಪಾರಿತೋಷಕಗಳು' ಸ್ಥಾಪನೆಯಾಗಿ ೨೦೦೦ನೇ. ಇಸವಿಗೆ ಸರಿಯಾಗಿ ಒಂದು ವರ್ಷವಾಯಿತು ಎಂಬುದರ ಬದಲಾಗಿ ಒಂದು ನೂರು ವರ್ಷವಾಯಿತು ಎಂದು ಓದಿಕೊಳ್ಳುವುದು ಹಾಗೂ ಸರ್ ಆಲ್ಫರ್ಡ್ ನೊಬೆಲ್‌ನ ಜೀವಿತಾವಧಿಯನ್ನು ೧೮೩೩-೧೮೭೬ ಎಂಬುದರ ಬದಲು ೧೮೩೩-೧೮೯೬ ಎಂದು ಓದಿಕೊಳ್ಳಲು ಕೋರಿದೆ (ಪುಟ-೨೧).

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮು

ಎಚ್. ಎಸ್. ನಂಜಪ್ಪ

ಎಸ್. ಮುಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ|| ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

ಸಂಪಾದಕೀಯ ಸಂಕಲನ

(ಬೆಲೆ : ರೂ. ೫೦–೦೦)

ನಾಡಿನ ಖ್ಯಾತ ಕಲಾವಿದರಾದ ದಿ|| ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್‌ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬
ದೂರವಾಣಿ : 511875

Licence No 21, Reg. No. KA/SK/Mys-56

Licenced to Post with payment at Mysore, R. M. S/II





71 ಶ್ರೀ ಚಂದ್ರಶೇಖರ
ನಂ. 1 ಮಹೇಶ್ವರಮ್ಮ
ಗುಡಿರಸ್ತೆ, ಮುನಿರೆಡ್ಡಿ ಪಾಳ್ಯ
ಜೆ. ಸಿ. ನಗರ, ಬೆಂಗಳೂರು–560006

If undelivered please return to :

CHIEF EDITOR
KARNATAKA STATE ADULT EDUCATION COUNCIL
5/1, Vinoba Road, P.B. No. 15
Manasagangothri Campus, Mysore-570 006
Phone : 511875